1930ರ ಸಂಚಿಕೆ

ಇದು ಪುಟಿಲ್ಲ.

ಸ್ಮರಣೆ : ೧೮೩೦ 1931-32 ಸಂಖ್ಯಾಪತ್ರ ೪

ಶತಮಾನೋತ್ಸವ ಪತ್ರಿಕೆಯ

ಶತವರ್ಷಸೋತ್ತರ ಬೆಳ್ಳಿ ಮಹೋತ್ಸವ

ಪುಸ್ತಕ ಪ್ರದರ್ಶನ ಗ್ರಂಥ



ಶತವರ್ಷಸೋತ್ತರ ಬೆಳ್ಳಿ ಮಹೋತ್ಸವ

(೧೮೫೪ ಗ್ರಂಥಮಾಲೆ)

ವರ್ಷ 1931

ಕನ್ನಡ

ಪ್ರಥಮಿಕ ಶಿಕ್ಷಣ

ಶ್ರೀ ಚನ್ನಬಸಪ್ಪನವರು

(ಗುಜರಾತ್-ಗಿಲ್ಲಗಿ)

ನೆಯ ಸಂಪುಟ



ಶಿಕ್ಷಣ ಸಂಪುಟ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರೆಸ್ಟ್. ಧಾರವಾಡ – ೫

ಸ್ಥಾಪನೆ : ೧೮೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು ಶತಮಾನೋತ್ತರ ಬೆಳ್ಳಿ ಹಬ್ಬದ ಪುಸ್ತಕ ಪ್ರದರ್ಶನ ೧೯೯೯

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೭೯ ರಿಂದ)
ವರ್ಷ

ಪೆ. ಚೆನ್ನಬಸಪ್ಪನವರು
(೧೮೫೩–೧೯೪೧)
ನೆಯ ಸಂಪುಟ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ. ರೊದ್ದರಸ್ತೆ, ಧಾರವಾಡ – ೮

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.

Kannada Prathamik Sikshana

JANUARY 1931

ಪಾದಕ–ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಪುಟ ೬೭ | ಜನವರಿ ೧೯೩೧ | ಸಂ. ೧೦
ರ್ಷ ೨

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಹೆಳ್ಳಿಯ ಶಿಕ್ಷಣ	೧
೨.	ಕೈ. ಪಾ. ವೆಂಕಟೇಶ ಬಾಪೂಶಾ ಕೇತಕರ	೨
೩.	ಪ್ರೌಶಿಕ್ಷಣಕ್ಕೆ ಸಂಬಂಧಿಸಿದ ಸಂಗತಿಗಳು	೮
೪.	ಜಪಾನ ದೇಶದ ವಿಷಯವಾಗಿ ಹೆಚ್ಚಿನ ಸಂಗತಿಗಳು	೧೩
೫.	ಸ್ಥಲವರ್ಣನ 'ಕಾನಪೂರ'	೧೬
೬.	ಕನ್ನಡಿಗನಿಗೆ (ಕವಿತೆ)	೨೦
೭.	ವಿಚಿತ್ರ	೨೨
೮.	ಹೆಣ್ಣುಮಕ್ಕಳ ಟ್ರೇ. ಸಂಸ್ಥೆಯ ನಿಯಮಗಳು	೨೬
೯.	ದಿ. ಬ. ಕಂಬಳಿ ಸಿದ್ದಪ್ಪನವರ ಅಭಿನಂದನ	೩೧
೧೦.	ಪ್ರಕಟನೆ	೩೨

nted by K. R. Bhise at the Karnatak Printing Works, Dharwar
Published by H. G. Deshpande, B A.,
ad-Master, Training College for Men, Dharwar, at his Office

Reg. No. B 2567

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

Kannada Prathamik Sikshana

JANUARY 1931

ಸಂಪಾದಕ–ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬೭ ವರ್ಷ ೨೨ | ಜನವರಿ ೧೯೩೧ | ಸಂ. ೧೦

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
	ಹಳ್ಳಿಯ ಶಿಕ್ಷಣ	೧
	ಕೈ. ವಾ. ವೆಂಕಟೇಶ ಬಾಪೂಶಾಸ್ತ್ರಿ ಕೇತಕರ	೫
	ಸ್ತ್ರೀಶಿಕ್ಷಣಕ್ಕೆ ಸಂಬಂಧಿಸಿದ ಸಂಗತಿಗಳು	೮
	ಜಪಾನ ದೇಶದ ವಿಷಯವಾಗಿ ಹೆಚ್ಚಿನ ಸಂಗತಿಗಳು	೧೩
	ಸ್ಥಲವರ್ಣನ 'ಕಾನಪೂರ'	೧೬
	ಕನ್ನಡಿಗನಿಗೆ (ಕವಿತೆ)	೨೦
	ವಿಚಿತ್ರ	೨೨
	ಕಿಣ್ಣುಮಕ್ಕಳ ಪ್ರೋ. ಸಂಸ್ಥೆಯ ನಿಯಮಗಳು	೨೬
	ದಿ. ಬ. ಕಂಬಳಿ ಸಿದ್ದಪ್ಪನವರ ಅಭಿನಂದನ	೩೧
	ಪ್ರಕಟನೆ	೩೨

ted by K. R. Bhise at the Karnatak Printing Works, Dharwar
Published by H. G. Deshpande, B A.,
l-Master, Training College for Men, Dharwar, at his Office

ದಿ. ಬ. ರೊದ್ದ ಶ್ರೀನಿವಾಸರಾಯರ ಚರಿತ್ರೆ

ಪುಟ ೩೧೪+೧೪ ೪ ಚಿತ್ರಗಳುಳ್ಳದ್ದು ಬೆಲ ೨ ರೂ.

—**—

ಅನುಕ್ರಮಣಿಕೆ

೧ ಚರಿತ್ರೆಯ ಮಹತ್ವ ೨ ಪೂರ್ವ ವೃತ್ತಾಂತವೂ ಜನ್ಮವೂ ೩ ಬಾಲ್ಯವೂ ಶಿಕ್ಷಣವೂ ೪ ಆದರ್ಶಭೂತ ಶಿಕ್ಷಕರೂ ಶಾಲೆಗಳ ಪರೀಕ್ಷಕರೂ ೫ ಸಮರ್ಥ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ೬ ಟ್ರೇನಿಂಗ ಕಾಲೇಜಿನ ದಯಾಳು ಪ್ರಿನಿಪಾಲರು ೭ ಕಾಯಿದೆ ಕೌನ್ಸಿಲಿನ ಸಭಾಸದರು ೮ ಕರ್ನಾಟಕ ಕಾಲೇಜಿನ ಸ್ಥಾಪನೆ ೯ ರಾಯರೂ ದಿಲ್ಲಿಯ ದರಬಾರವೂ ೧೦ ಧಾರವಾಡ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರು ೧೧ ಡಿಸ್ಟ್ರಿಕ್ಟ ಲೋ. ಬೋ. ನ ಪ್ರೆಸಿಡೆಂಟರು ೧೨ ಧರ್ಮ ಮತ್ತು ಸಾಹಿತ್ಯ ಇವುಗಳ ಸೇವೆ ೧೩ ಕುಟುಂಬದ ಜನರು ೧೪ ವಿಚಾರಗಳು ೧೫ ಉಪಸಂಹಾರ.

ಈ ಪ್ರಕಾರ ಈ ಚರಿತ್ರೆಯು ೧೫ ಪ್ರಕರಣಗಳನ್ನು ಒಳಕೊಂಡಿದೆ. ಇಂತಹ ಮಹನೀಯರ ಚರಿತ್ರೆಯು ಜನರಿಗೆ ಆದರ್ಶಪ್ರಾಯವೂ ಬೋಧಪ್ರದವೂ ಆಗಿದೆ. ಈ ಪುಸ್ತಕವನ್ನು ಓದಿದ ಸದ್ಗೃಹಸ್ಥರೆಲ್ಲರೂ ಉತ್ತಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಕನ್ನಡ ವಾಙ್ಮಯದಲ್ಲಿ ಇಂತಹ ಗ್ರಂಥಗಳು ವಿರಲ. ಕರ್ನಾಟಕದ ಪಿತಾಮಹರಾದ ರೊದ್ದರಾಯರ ಚರಿತ್ರೆಯನ್ನು ಪ್ರತಿಯೊಬ್ಬ ಕನ್ನಡಿಗನು ಒದಿಯೇ ತೀರಬೇಕೆಂದು ಹಾರೈಸುವವು.

ಪುಸ್ತಕ ದೊರೆಯುವ ಸ್ಥಳ:—

ಶೇಷಗಿರಿ ಹನುಮಂತರಾವ ದೇಶಪಾಂಡೆ

ಟ್ರೇನಿಂಗ ಕಾಲೇಜ ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು — ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೭ ವರ್ಷ ೨	ಜನವರಿ ೧೯೩೧	ಸಂಚಿಕೆ ೧೦

ಹಳ್ಳಿಯ ಶಿಕ್ಷಣ *

(ಸಂಪಾದಕರಿಂದ)

ಹಿಂದುಸ್ತಾನದಲ್ಲಿ ೩೧ ಕೋಟಿ ೯೦ ಲಕ್ಷ ಜನಸಂಖ್ಯೆಯು ಇರುತ್ತದೆ. ನಮ್ಮ ದೇಶದಲ್ಲಿ ೨೩೯೬ ಪಟ್ಟಣಗಳೂ ೬೮೫ ಸಾವಿರ ಹಳ್ಳಿಗಳೂ ಇರುವವು. ಸುಶಿಕ್ಷಿತರ ಸಂಖ್ಯೆಯು ಪಟ್ಟಣಗಳಲ್ಲಿ ಸರಾಸರಿ ೧೦೦ಕ್ಕೆ ೧೦.೨ರಂತೆ ಇರುವದು. ಆಸಾಮದಲ್ಲಿ ೧೦೦ಕ್ಕೆ ೩ರಂತೆ ಇರುವದು. ಬೇರೆ ಬೇರೆ ಪ್ರಾಂತಗಳಲ್ಲಿ ಈ ಸಂಖ್ಯೆಯು ಬೇರೆ ಬೇರೆ ಇರುವದು ಉದಾ:— ಮುಂಬಯಿ ಪ್ರಾಂತದಲ್ಲಿ ಇದೇ ಸಂಖ್ಯೆಯು ೧೦೦ಕ್ಕೆ ೧೨ರಂತೆ ಇರುವದು. ಒಟ್ಟಾರೆ ನಮ್ಮ ದೇಶದಲ್ಲಿ ವಿದ್ಯೆಗಲಿತು ಓದುಬರೆಹ ಬಲ್ಲವರು ೨ ಕೋಟಿ ೨೬ ಲಕ್ಷ ಜನರಿರುವರು. ಒಟ್ಟು ಗಂಡಸರಲ್ಲಿ ೧೦೦೦ಕ್ಕೆ ೧೫೯ರಂತೆಯೂ ಹೆಂಗಸರಲ್ಲಿ ೧೦೦೦ಕ್ಕೆ ೨೧ರಂತೆಯೂ ಈ ಸಂಖ್ಯೆಯು ಇರುವದು. ಒತ್ತಾಯದ ಶಿಕ್ಷಣವು ರೂಢವಾಗಿರುವ ತ್ರಾವಣಕೋರ ಮೈಸೂರ ಪ್ರಾಂತಗಳಲ್ಲಿ ಈ ಪ್ರಮಾಣವು ಅಧಿಕವಾಗಿರುವದು.

ದೇಶದಲ್ಲಿ ಹರಡಿರುವ ಅವಿದ್ಯಾವಂತರ ಸಂಖ್ಯೆಯನ್ನು ಕಳೆಯುವದೇ ಮುಂದಾಳುಗಳ ಕರ್ತವ್ಯಕರ್ಮವಾಗಿದೆ. ನಮ್ಮಂತೆಯೇ ಇದ್ದ ಬೇರೆ ದೇಶಗಳನ್ನು ತುಲನೆಮಾಡಿ ನೋಡಿದರೆ ನಮ್ಮಲ್ಲಿಯ ವಿದ್ಯೆಯ ಪ್ರಗತಿಯು ಮಿಕ್ಕ ದೇಶಗಳಿಗಿಂತ ಹಿಂದೆಬಿದ್ದಿರುವದೆಂಬ ತಿಳಿಯುವದು. ೧೦೦ ವರ್ಷಗಳ ಹಿಂದೆ ಡೆನ್ಮಾರ್ಕ ದೇಶದ ಸ್ಥಿತಿಯೂ ಹೀಗೆಯೇ ಇದ್ದಿತು; ಆ ವೇಳೆಯಲ್ಲಿ ಅಲ್ಲಿ ಯುದ್ಧಗಳು ನಡೆದಿದ್ದರಿಂದ ದೇಶಕ್ಕೆ ಹೀನ ಸ್ಥಿತಿಯು ಪ್ರಾಪ್ತವಾಗಿದ್ದಿತು. ಈಗಿನ ಆ ದೇಶದ ಪ್ರಗತಿಯ ಅಜಗಜಾಂತರ ಸ್ಥಿತಿಯನ್ನು ಕಂಡು ಅವರ ಇಂಗಿತವನ್ನು ತಿಳಿಯಕೊಳ್ಳಲಿಕ್ಕೆ ಎಷ್ಟೋ ಜನರು ಕುತೂಹಲ

* ಕಾಶಿಯಲ್ಲಿ ನಡೆದ ಅಖಿಲ ಏಶಿಯಾ ಖಂಡದ ಶಿಕ್ಷಣ ಪರಿಷತ್ತಿಗಾಗಿ ಇಂಗ್ಲಿಷಿನಲ್ಲಿ ಬರೆದ ನಿಬಂಧದ ಸಾರಾಂಶವು.

ದೃಷ್ಟಿಯಿಂದ ನೋಡತೊಡಗಿದ್ದಾರೆ. ಒಬ್ಬ ಡೇನನು ತನ್ನ ದೇಶದ ಪ್ರಗತಿಯ ಅಭ್ಯುದಯದ ಕಾರಣಗಳನ್ನು ಮೂರೇ ರೀತಿಯಿಂದ ವಿಂಗಡಿಸಿದ್ದಾನೆ.

(೧) ಶಾಲೆಗಳು. (೨) ಉತ್ತಮ ಶಾಲೆಗಳು. (೩) ಹೆಚ್ಚು ಶಾಲೆಗಳು. ಅಲ್ಲಿಯ ಒಕ್ಕಲತನ ಸಂಬಂಧದ ಶಾಲೆಗಳಲ್ಲಿ ಉಳುವ, ಬಿತ್ತುವ, ದನಗಳ ಸಂಗೋಪನದ ಕೆಲಸಗಳನ್ನು ಪ್ರಾಯೋಗಿಕವಾಗಿ ತೋರಿಸುವರು. ಬಾಲಕರಿಗೆ ಮುಂದೆ ತಮ್ಮ ಜೀವನಕ್ಕೆ ಸಹಾಯವಾಗುವಂತೆ ಶಿಕ್ಷಣದ ರಚನೆಯನ್ನು ಏರ್ಪಡಿಸಿರುವರು. ಈ ಶಾಲೆಗಳನ್ನು ೧೮೩೩ನೆಯ ಇಸವಿಯಲ್ಲಿ ಆರಂಭಿಸಿ ಸುಸ್ಥಿತಿಗೆ ಒಯ್ದು ಸದ್ಗೃಹಸ್ಥರು ಯಾರೆಂದರೆ– 'ನಿಕೋಲಾ ಗ್ರುಂಟವ್ಹಿಗ್' ಎಂಬವರು.

ಇವಲ್ಲದೆ ೧೦೦೦ರಿಂದ ೧೫೦೦ರ ವರೆಗೆ ವಿದ್ಯಾರ್ಥಿಗಳ ಸಂಖ್ಯೆಗಳುಳ್ಳ ಫೋಕ್ ಹಾಯಸ್ಕೂಲುಗಳೆಂಬವು ಪ್ರೌಢರಶಿಕ್ಷಣಕ್ಕಾಗಿ ಇರುವವು. ಈ ಶಾಲೆಗಳಲ್ಲಿ ಪ್ರೌಢ ಜನರು ಶಿಕ್ಷಕರೊಂದಿಗೆ ವಾಸಿಸುವರು.

ಈ ಶಾಲೆಗಳು ಚಳಿಗಾಲದಲ್ಲಿ ನವ್ಹಂಬರದಿಂದ ಮಾರ್ಚ್‌ದ ವರೆಗೆ ೫ ತಿಂಗಳು ನಡೆಯುವವು. ಅಂಥ ಹೆಣ್ಣು ಮಕ್ಕಳ ಶಾಲೆಗಳು ಬೇಸಿಗೆಯಲ್ಲಿ ೩ ತಿಂಗಳು ನಡೆಯುವವು. ನಮ್ಮಲ್ಲಿಯಂತೆ ಅಲ್ಲಿ ಪಠ್ಯಪುಸ್ತಕಗಳ ಉಪಯೋಗವನ್ನು ಮಾಡುವದಿಲ್ಲ. ಆದರೆ ವಿದ್ಯಾರ್ಥಿಗಳು ಗೊತ್ತುಪಡಿಸಿದ ವಿಷಯಗಳನ್ನು ತಾವೇ ಓದುವರು. ಪ್ರತಿದಿನದ ಉದ್ಯೋಗದಲ್ಲಿ ಬರುವ ತೊಂದರೆಗಳ ವಿಷಯವಾಗಿ ಉಪಾಧ್ಯಾಯರ ಕೂಡ ಚರ್ಚೆ ನಡೆಸುವರು. " ಓದಿದ ಸಂಗತಿಗಳು ಶಾಶ್ವತವಾಗಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆಗೊಳ್ಳಲಾರವು. ಸಜೀವಿಗಳಾದ ಶಿಕ್ಷಕರು ಅಂತಃಕರುಣಪೂರ್ವಕವಾಗಿ ಬೋಧಿಸುವ ಸಂಗತಿಗಳು ವಿದ್ಯಾರ್ಥಿಗಳ ಮನಸಿನ ಮೇಲೆ ಚಿರಕಾಲ ಪರಿಣಾಮವನ್ನುಂಟುಮಾಡುವವು" ಎಂದು ಗ್ರುಂಟವ್ಹಿಗ್ ಸಾಹೇಬರ ಗಟ್ಟಿಯಾದ ಅಭಿಪ್ರಾಯವದೆ.

ಪ್ರತಿಯೊಂದು ಶಾಲೆಗಳಿಗೆ ಪುಸ್ತಕಾಲಯವನ್ನು ಜೋಡಿಸಿರುವರು. ಅವುಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ವಿಷಯಗಳುಳ್ಳ ಪುಸ್ತಕಗಳು ಹೇರಳವಾಗಿರುವವು.

ಡೇನ ಜನರು ಬರಿಯ ಪುಸ್ತಕಗಳ ಸಹಾಯದಿಂದ ಮಾತ್ರ ಶಿಕ್ಷಣಸಾಗಿಸುವದಿಲ್ಲ. ವಿಷಯಜ್ಞಾನವನ್ನು ವ್ಯಾಖ್ಯಾನ, ಪ್ರಶ್ನೋತ್ತರ, ಚರ್ಚೆ ಮೊದಲಾದ ಸಾಧನಗಳಿಂದ ನಡೆಸುವರು. ಡೇನರು ಯಾವದೊಂದು ವಿಷಯದ ಸಂಬಂಧದಿಂದ ರಚಿಸಿದ ಪದ್ಯಗಳನ್ನು ಮಧುರವಾದ ಸ್ವರದಿಂದ ಸಾಮೂಹಿಕವಾಗಿ ಮೇಲಿಂದ ಮೇಲೆ ಹಾಡುವರು. ಹಾಯಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ತಮಗೆ ನಿತ್ಯದ ವ್ಯವಹಾರದಲ್ಲಿ ಉಪಯೋಗಬೀಳುವ ಸಂಗತಿಗಳನ್ನೇ ಅಭ್ಯಾಸಿಸುವರು. ಈ ಶಾಲೆಗಳಲ್ಲಿ ಕಲಿತ ಜನರು ಶಾಸ್ತ್ರೀಯಪದ್ಧತಿಗನುಸರಿಸಿ ತಮ್ಮ ನಿತ್ಯದ ಹೋರೆಗಳನ್ನು ಮಾಡುವರು.

ಗ್ರುಂಟ್ವಿಗ್ ಎಂಬವನ ಶಾಲೆಗಳಲ್ಲಿ ಬಿತ್ತುವ ಕೆಲಸವನ್ನು ಹೊರತುಪಡಿಸಿ ಹೈನ, ಬಿಣ್ಣೆ, ದನಪ್ರಾಣಿಗಳ ಸಂಗೋಪನ ಇತ್ಯಾದಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಕಲಿಸುವರು. ಆ ದೇಶದಲ್ಲಿ ಇವೆಲ್ಲ ಕೆಲಸಗಳು ಸಹಕಾರತತ್ವಕ್ಕನುಸರಿಸಿ ನಡೆಯುವವು. ಅದರಿಂದ ಅಲ್ಲಿ ಸಿದ್ಧವಾದ ಪದಾರ್ಥಗಳ ಗುಣ, ಬೆಲೆಗಳು ಪರಮಾವಧಿಗೆ ಮುಟ್ಟಿರುತ್ತವೆ. ಡೆನ್ಮಾರ್ಕ ದೇಶದಲ್ಲಿ ಆಕಳು ಒಪ್ಪತ್ತಿಗೆ ೧೬ ಪಕ್ಕಾಸೇರು ಹಾಲು ಹಿಂಡುತ್ತದೆ. ಇದರಿಂದ ಅಲ್ಲಿಯ ದನಸಂಗೋಪನ ಪದ್ಧತಿಯು ತಿಳಿಯುವಂತೆ ಅದೆ. ರೈತರು ತಮಗೆ ಪ್ರತಿ ನಿತ್ಯ ಬೇಕಾಗುವ ಸಾಮಾನುಗಳನ್ನು ಸಹ ಪರಸ್ಪರ ಸಹಾಯಕ ಸಂಘಗಳ ಮುಖಾಂತರವಾಗಿಯೇ ಕೊಂಡುಕೊಳ್ಳುವರು. ಸಹಕಾರಿತ್ವದ ನಿಜವಾದ ಸ್ಫೂರ್ತಿಯು ಈ ಫೋಕ್ ಹಾಯಸ್ಕೂಲುಗಳಿಂದಲೇ ಉಂಟಾಯಿತೆಂದು ಹೇಳಬಹುದು. ೧೮೬೪ನೆಯ ಇಸವಿಯಲ್ಲಿ ಆದ ಪ್ರುಸಿಯದ ಯುದ್ಧದಲ್ಲಿ ಡೆನ್ಮಾರ್ಕವು ಫಲದ್ರೂಪವಾದ ತನ್ನ ದಕ್ಷಿಣ ಭಾಗವನ್ನು ಕಳೆದುಕೊಂಡಿತು. ಮೊದಲೆ ಚಿಕ್ಕದಾಗಿದ್ದ ಈ ದೇಶಕ್ಕೆ ಇದೊಂದು ದೊಡ್ಡ ಆಘಾತವಾದಂತಾಯಿತು. ಆದ್ದರಿಂದ ಡೇನರಲ್ಲಿ " ಹೊರಗಿನಷ್ಟ, ಒಳಗಿನ ಆಯ" ಎಂಬ ವಾಡಿಕೆಯ ಗಾದೆಯಮಾತು ಉಂಟಾಗಿದೆ.

ನಮ್ಮ ದೇಶದಲ್ಲಿಯಾದರೂ ಡೆನ್ಮಾರ್ಕದಂತೆ ಉತ್ತಮ ಸ್ಕೂಲುಗಳೂ ಹೆಚ್ಚು ಸ್ಕೂಲುಗಳೂ ಬೇಕು.

ಈಗ ನಮ್ಮಲ್ಲಿ ರೂಢವಾಗಿರುವ ಹಳ್ಳಿಯ ಶಾಲೆಗಳಲ್ಲಿಯ ಪಠ್ಯ ಪುಸ್ತಕ ವಿದ್ಯೆಯು ಶ್ರಮರಹಿತವಾದ ಉದ್ಯೋಗಗಳನ್ನು ಮಾಡಬೇಕೆಂಬ ತಪ್ಪು ತಿಳಿವಳಿಕೆಯನ್ನು ಉಂಟುಮಾಡತೊಡಗಿದೆ. ಆದದರಿಂದ ಕೈಯಿಂದ ಕೆಲಸಮಾಡುವ ಜನರ ಪ್ರವೃತ್ತಿಯು ಕಡಿಮೆಯಾಗಹತ್ತಿದೆ. ಆದಕಾರಣ ಮನುಷ್ಯರ ನಿತ್ಯದ ಹೋರೆಗೂ ಶಿಕ್ಷಣಕ್ಕೂ ಸಂಬಂಧವಿಲ್ಲದಂತೆ ಆಗಿದೆ. ಆದದರಿಂದ ಈಗಿನ ಶಿಕ್ಷಣ ಪದ್ಧತಿಯಿಂದ ಹುಡುಗರ ಭಾವೀ ಆಯುಷ್ಯದ ಜೀವನ ಕಲಹದಲ್ಲಿ ನೆರವು ಉಂಟಾಗಬಾರದು. ಆದಕಾರಣ ಹಳ್ಳಿಯ ಶಾಲೆಗಳ ಅಭ್ಯಾಸ ಪತ್ರಿಕೆಯನ್ನು ಬದಲಿಸಿ ಅಲ್ಲಿ ಒಕ್ಕಲತನ, ಕೈಗಾರಿಕೆ (ನೂಲುವದು ನೇಯುವದು ಇ.) ಸಹಕಾರಿತೆ, ಆರೋಗ್ಯ ಮುಂತಾದ ವಿಷಯಗಳನ್ನು ಸೇರಿಸ ಬೇಕಾಗಿದೆ. ಹೀಗೆ ಮಾಡಿದರೂ ಸಹ ಪರಿಸ್ಥಿತಿಗೆ ಅನುಸರಿಸಿ ಹಳ್ಳಿಗಳ ಶಿಕ್ಷಣ ಕ್ರಮದಲ್ಲಿ ಹೆಚ್ಚುಕಡಿಮೆ ಮಾಡಬೇಕಾಗುವದು. ಉದಾಹರಣಾರ್ಥವಾಗಿ ಹತ್ತಿ ಬೆಳೆಯುವಲ್ಲಿ ನೂಲುವದನ್ನೂ ನೇಯುವದನ್ನೂ ಆವಶ್ಯಕ ವಿಷಯವನ್ನಾಗಿ ಕಲಿಸಬೇಕು. ಸಮುದ್ರ ತೀರದ ಕಾನಡಾ ಜಿಲ್ಲೆಯಂಥ ದೇಶಗಳಲ್ಲಿ ಹಗ್ಗ ಹೊಸೆಯುವದು, ಚಾಪೆ ಮಾಡುವದು ಇ. ವಿಷಯಗಳನ್ನು ಮುಖ್ಯವಾಗಿ ಮಾಡಿ ಕಲಿಸಬೇಕು. ಇದಲ್ಲದೆ ಈಗಿನಂತೆ ಬರಿಯ ಪರೀಕ್ಷೆ ಪಾಸಾಗುವ ಭ್ರಮವು ಉಳಿಯದಂತೆ ಕೈ ಕೆಲಸಗಳಿಗೆ ಮಹತ್ವದಸ್ಥಾನವು ದೊರೆಯಬೇಕು.

ಈಗ ಮುಂಬಯಿ ಪ್ರಾಂತದಲ್ಲಿ ಕೆಲಪು ಒಕ್ಕಲತನದ ಶಾಲೆಗಳು ಇರುವವು. ಅವು ಸಹ ಆಭರಣಗಳಂತೆ ಸ್ವಲ್ಪ ಮಾತ್ರ ಇರುವವು. ಅವುಗಳ ವ್ಯವಹಾರೋಪಯು

ಕ್ಕತೆಯು ಹೆಚ್ಚಾಗಿ ಅಲ್ಲಿ ಕಲಿತ ಹುಡುಗರು ಹಳ್ಳಿಯ ವ್ಯವಸಾಯ ಕೈಗಾರಿಕೆಗಳಲ್ಲಿ ಸೇರಿ ಅರ್ಥೋತ್ಪಾದನೆ ಮಾಡಿ ತೋರಿಸುವವರೆಗೂ ಅವುಗಳನ್ನು ಹೆಚ್ಚಿಸಬೇಕೆಂದು ಜನರು ಅಪೇಕ್ಷಿಸಲಾರರೆಂದು ತಿಳಿಯುತ್ತೆನೆ. ಮೇಲೆ ವಿವರಿಸಿದ ಕಾರಣಗಳಿಂದ ಈಗಿನ ಒಕ್ಕಲತನದ ಶಾಲೆಗಳಿಂದ ಹಳ್ಳಿಯ ಉದ್ಯೋಗಗಳ ಪ್ರಗತಿಯು ಆಗತಕ್ಕಷ್ಟು ಆಗಿಲ್ಲವೆಂದು ತಿಳಿಯುವದು. ಆದದರಿಂದ ಈ ಶಾಲೆಗಳ ಅಭ್ಯಾಸ ಕ್ರಮ, ಪದ್ಧತಿ, ವಿಚಾರಗಳಲ್ಲಿ ಹೆಚ್ಚು ಸುಧಾರಣೆ ಯಾಗುವದು ಆವಶ್ಯಕವಾಗಿದೆ.

ಮಾಂಟಿಫರ್ಡರ ಸುಧಾರಣೆಯ ಪ್ರಕಾರ ಬೇರೆ ಬೇರೆ ಚುನಾವಣೆಗಳಿಗೆ ಮತ ಕೊಡುವವರ ಸಂಖ್ಯೆಯು ಹೆಚ್ಚಾಗಿದೆ. ಇನ್ನು ಮುಂದೆ ದುಂಡು ಮೇಜಿನ ಪರಿಷತ್ತಿನ ಆಲೋಚನೆಯಿಂದ ಮತಕೊಡುವವರ ಸಂಖ್ಯೆಯು ಇನ್ನೂ ಬೆಳೆಯಬಹುದು. ಸ್ವರಾಜ್ಯದ ಯೋಜನೆಯು ಇಂಥ ಅಶಿಕ್ಷಿತ ಮತಕೊಡುವವರಿಂದ ಸುವ್ಯವಸ್ಥಿತವಾಗಿ ನಡೆಯಬಹುದೋ? ಆದದರಿಂದ ಪ್ರೌಢರಿಗೂ ಚಿಕ್ಕಮಕ್ಕಳಿಗೂ ಶಿಕ್ಷಣ ಕೊಡುವ ಸುವ್ಯವಸ್ಥಿತವಾದ ಕಾರ್ಯಕ್ರಮವನ್ನು ಯೋಜಿಸುವದು ಆವಶ್ಯಕವಾಗಿದೆ. ಇದಕ್ಕಾಗಿ ಯೋಗ್ಯ ಉಪಾಧ್ಯಾಯರ ತಂಡವೇ ಬೇಕಾಗುವದು. ಸರಕಾರದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವವರೆಗೆ ಪ್ರಜೆಗಳೇ ಶಿಕ್ಷಣದ ವಿಷಯವಾಗಿ ಸ್ವಂತ ಜವಾಬುದಾರಿಯಿಂದ ಯತ್ನಿಸಬೇಕು. ಇದಕ್ಕಾಗಿ 'ರೂರಲ್ ಎಜ್ಯುಕೇಶನಲ್ ಲೀಗ' ಎಂಬ ಸಂಸ್ಥೆಗಳನ್ನು ಸ್ಥಾಪಿಸತಕ್ಕದ್ದು. ಜಿಲ್ಲೆಯಲ್ಲಿರುವ ಈ ಸಂಸ್ಥೆಯ ಚಾಲಕರು ಶಿಕ್ಷಣಜ್ಞರೂ ಯೋಗ್ಯ ವ್ಯವಸ್ಥಾಪಕರೂ ಪಕ್ವವಾದ ಅನುಭವವುಳ್ಳವರೂ ಇರಬೇಕು. ಹಳ್ಳಿಯ ಸಾಲೆಗಳಲ್ಲಿ ಶಿಕ್ಷಣ ಕೆಲಸ ಮಾಡುವದಕ್ಕೋಸ್ಕರ ವಿದ್ಯಾವಂತರೂ ಗುಣವಂತರೂ ಅಲ್ಪವೇತನದಿಂದ ಕೆಲಸ ಮಾಡುವವರೂ ಆದ ತರುಣರನ್ನು ಈ ಸಂಸ್ಥೆಯವರ ಜೊತೆಗೆ ಸೇರಿಸಬೇಕು. ಇವರ ಸಲುವಾಗಿ ಹಳ್ಳಿಯವರು ತಕ್ಕ ಸ್ಥಳ ಮೊದಲಾದ ಅನುಕೂಲತೆಗಳನ್ನು ಒದಗಿಸಿ ಕೊಡಬೇಕು. ಲೀಗದವರು ನಕಾಶ, ಕಟ್ಟಿಗೆ ಸಾಮಾನು ಮೊದಲಾದ ಉಪಕರಣಗಳನ್ನು ಹಳ್ಳಿಯ ಶಾಲೆಗಳಿಗೆ ಕೊಡಬೇಕು. ಇಂಥ ಸತ್ಕಾರ್ಯಕ್ಕಾಗಿ ಬೇಕಾಗುವ ಹಣವನ್ನು ಫಂಡುಗಳಿಂದ ಕೂಡಿಸಬೇಕು. ಇಂಥ ಮೇಲ್ವಿಚಾರಣೆಯುಳ್ಳ ಶಾಲೆಗಳನ್ನು ಈಗಿನ ಗಾವಠಿ ಶಾಲೆಗಳಿಗಿಂತ ಹೆಚ್ಚಾಗಿ ಹಳ್ಳಿಯ ಜನರು ಪ್ರೀತಿಸುವರು. ಅಶಿಕ್ಷಿತರಾದ ಪ್ರೌಢ ಜನರ ಸಲುವಾಗಿ ರಾತ್ರಿಯಶಾಲೆಗಳನ್ನೂ, ಚಿಕ್ಕ ಮಕ್ಕಳಿಗಾಗಿ ಹಗಲು ಶಾಲೆಗಳನ್ನೂ ಏರ್ಪಡಿಸಬಹುದು. ಪ್ರೌಢರ ಶಾಲೆಗಳಿಗಾಗಿ ಅವರು ಮೆಚ್ಚುವಂಥ ಬೇರೆ ಬೇರೆ ವಿಷಯಗಳ ಮೇಲೆ ಕಟ್ಟಿದ ಲಾವಣಿ ಪದಗಳನ್ನು ಹಾಡಿಸಬೇಕು. ಒಟ್ಟಾರೆ ಜನರಿಗೆ ಆ ಶಾಲೆಗಳು ಪ್ರಿಯವಾಗುವಂಥ ಉಪಾಯಗಳನ್ನು ಹಳ್ಳಿಯ ಮುಖ್ಯಸ್ಥರ ಸಹಕಾರಿತೆಯಿಂದ ಗೊತ್ತು ಪಡಿಸ ಬೇಕು. ಚಿಕ್ಕ ಮಕ್ಕಳಿಗಾಗಿ ರಾಮಾಯಣ ಮಹಾಭಾರತದ ಕಥಾಭಾಗಗಳ ಸಾರಾಂಶದ ಪದ್ಯಗಳನ್ನು ಮನೋಹರವಾದ ಸ್ವರದಿಂದ ಸಾಮೂ

ಹಿಕವಾಗಿ ಅನ್ನುವ ರೂಢಿಯನ್ನಿಡಬೇಕು. ಇದರಿಂದ ಆ ಶಾಲೆಗಳು ಜನ ಪ್ರಿಯ ವಾಗಬಹುದು.

ಬಲಾತ್ಕಾರದ ಶಿಕ್ಷಣ:—ಎಂಟುವರ್ಷಕ್ಕೆ ಮಿಕ್ಕಿದವರಿಗೆ ಬಲಾತ್ಕಾರದ ವಿದ್ಯಾಭ್ಯಾಸವನ್ನು ಮಾಡಿಸಿದರೆ ಚಿಕ್ಕ ಮಕ್ಕಳಿಗಿಂತ ಚನ್ನಾಗಿ ಅಂದರೆ ಈಗಿನಂತೆ ಬಿನ್ ಇಯತ್ತೆಯಲ್ಲಿ ಕೊಳೆಯು ಹಾಗು ಕಲಿತದ್ದನ್ನು ಮರಿಯದೆ ಗಟ್ಟಿಯಾಗಿಟ್ಟುಕೊಂಡು ಕಲಿಯುವರು. ಬಲಾತ್ಕಾರದ ಶಿಕ್ಷಣವನ್ನು ವಿದ್ಯಾಖಾತೆಯ ಮಂತ್ರಿಗಳು ಧೈರ್ಯ ದಿಂದ ನಡೆಸಬೇಕು. ಈ ವಿದ್ಯಾಭ್ಯಾಸದ ಖರ್ಚಿಗಾಗಿ ಹೆಚ್ಚಾಗಿ ಬೆಳೆದ ಇತರ ಖಾತೆ ಗಳ ವೆಚ್ಚವನ್ನು ಕಡಿಮೆಮಾಡಿ ಆ ಹಣದಿಂದ ಸಾಗಿಸಲಿಕ್ಕೆ ಬರುತ್ತದೆ. ಅದೇ ವೇಳೆ ಯಲ್ಲಿ ಡೆನ್ಮಾರ್ಕದ ಫ್ರೋಕ್ ಹಾಯಸ್ಕೂಲುಗಳಂಥ ಶಾಲೆಗಳನ್ನು ಏರ್ಪಡಿಸಬೇಕು.

ಚಿಕ್ಕಮಕ್ಕಳ ಬಲಾತ್ಕಾರದ ಶಿಕ್ಷಣಕ್ಕಾಗಿ ಸರಾಸರಿ ವೆಚ್ಚವು ಪ್ರತಿಯೊಬ್ಬನಿಗೆ ೯ ರೂ. ಯಂತೆ ಹಿಡಿದರೆ ೭ ಕೋಟಿ ವಿದ್ಯಾರ್ಥಿಗಳಿಗೆ ೬೩ ಕೋಟಿ ರೂ. ಗಳು ಬೇಕಾ ಗುವವು. ಈ ಹಣವನ್ನು ೧೦ ವರ್ಷಗಳಲ್ಲಿ ವಿಭಾಗಿಸಿದರೆ ೬ ಕೋಟಿ ರೂ. ಗಳು ಹತ್ತುವವು. ಅದರಂತೆಯೇ ಪ್ರೌಢ ಜನರ ಶಿಕ್ಷಣ ಕ್ರಮವನ್ನು ಏರ್ಪಡಿಸಬೇಕು. ಪ್ರತಿಯೊಬ್ಬ ಪ್ರಬುದ್ಧನ ಶಿಕ್ಷಣದ ವೆಚ್ಚವು ೫೦ ರೂ. ಎಂದು ತಿಳಿದರೆ ಒಟ್ಟಿಗೆ ೧೮೦ ಕೋಟಿ ರೂ. ಗಳು ಬೇಕಾಗುವವು.

ಈ ರೀತಿಯಾಗಿ ದೊಡ್ಡ ಪ್ರಾಂತಗಳಲ್ಲಿ ವರ್ಷಕ್ಕೆ ೧ ಕೋಟಿ ರೂಪಾಯಿಗಳನ್ನೂ ಸಣ್ಣ ಪ್ರಾಂತಗಳಲ್ಲಿ ೫೦ ಲಕ್ಷ ರೂ. ಗಳನ್ನು ವೆಚ್ಚ ಮಾಡಬೇಕಾಗುವದು. ಆರಂಭ ದಲ್ಲಿ ಈ ಅಂಕಿಗಳು ದೊಡ್ಡವಾಗಿ ತೋರುವವು. ಹಿಂದುಸ್ತಾನದ ಸರಕಾರದವರೂ ಪ್ರಾಂತಿಕ ಸರಕಾರದವರೂ ಮಿಕ್ಕ ಖಾತೆಗಳ ವೆಚ್ಚವನ್ನು ಕಡಿಮೆ ಮಾಡಿ ಉಳಿಯುವ ಹಣದಿಂದ ಅಶಿಕ್ಷಿತರ ತಂಡವನ್ನು ಸುಧಾರಿಸುವ ಧಾರ್ಮಿಕ ಕೆಲಸಕ್ಕಾಗಿ ಯತ್ನಿ ಸಿದರೆ ೧೦ ವರ್ಷಗಳಲ್ಲಿ ಈ ಕಾರ್ಯವು ಕೈಗೂಡಬಹುದು.

ಕೈ. ವಾ. ವೆಂಕಟೇಶ ಬಾಪೂ ಶಾಸ್ತ್ರಿ ಕೇತಕರ

ಈ ಮಹನೀಯರು ಜ್ಯೋತಿರ್ವಿದರೆಂದು ಹಿಂದುಸ್ಥಾನದಲ್ಲಿ ಪ್ರಸಿದ್ಧರಾಗಿ ಇದೇ ಇಸವಿಯ ಅಗಷ್ಟ ತಿಂಗಳ ೩ನೆಯ ತಾರೀಖಿನ ದಿವಸ ದಿವಂಗತರಾದರು. ಅವರು ಸಂಸ್ಕೃತ ಭಾಷಾಭಿಜ್ಞರಿದ್ದುದಲ್ಲದ ಜ್ಯೋತಿಶ್ಶಾಸ್ತ್ರದ ಮುಖ್ಯವಾಗಿ ಪಂಚಾಂಗ ಶೋಧನೆಯ ವಿಷ ಯದಲ್ಲಿ ಅನೇಕ ಗ್ರಂಥಗಳನ್ನು ಬರೆದರು. ಅವರು ಕರ್ನಾಟಕದವರು; ಕರ್ನಾಟಕದ ಲ್ಲಿಯೇ ಹುಟ್ಟಿ ಬಾಗಲಕೋಟೆಯಲ್ಲಿ ಬಹಳ ವರ್ಷ ಇಂಗ್ಲಿಷ ಶಾಲೆಯ ಹೆಡ್ ಮಾಸ್ತರಾಗಿದ್ದರು.

ಇವರ ಮೂಲಪುರುಷರು ರತ್ನಾಗಿರಿ ಜಿಲ್ಲೆಯೊಳಗಿನ ಕೇತಕೀ ಗ್ರಾಮದಲ್ಲಿ
ತ್ತಿದ್ದರು. ಅವರು ಮುಂದೆ ಗೋದಾವರೀ ತೀರದ ಪೈಠಣ ಗ್ರಾಮಕ್ಕೆ ಹೋದ
ಜ್ಯೋತಿಷವು ಅವರ ಮನೆತನದ ವಿದ್ಯಾಭ್ಯಾಸವಾಗಿದ್ದಿತು.

ಇವರ ತಂದೆಗಳ ಹೆಸರು ಬಾಪೂಶಾಸ್ತ್ರಿ ಎಂಬದಾಗಿ ಇದ್ದಿತು. ಅವರು ಸಂಸ್ಕೃ
ಲ್ಲಿಯೂ ಜ್ಯೋತಿಷದಲ್ಲಿಯೂ ನಿಷ್ಣಾತರಾಗಿದ್ದರು. ಇವರು ವಿದ್ಯಾಭಿಮಾನಿಯಾ
ರಗುಂದ ಬಾಬಾಸಾಹೇಬರ ಆಶ್ರಯದಲ್ಲಿರುತ್ತಿದ್ದರು. ಇವರ ಹೊಟ್ಟೆಯಲ್ಲಿ ನಾ
ತಕರರು ೧೮೫೬ನೆಯ ಇಸವಿಯಲ್ಲಿ ಹುಟ್ಟಿದರು.

ಬಾಪೂ ಶಾಸ್ತ್ರಿಗಳು ಜ್ಯೋತಿಷವಿಷಯವಾದ ಗ್ರಂಥಗಳನ್ನು ಬರೆದಿಟ್ಟಿದ್ದರು. ಆ
ವು ಪ್ರಕಟವಾಗಲಿಲ್ಲ.

ಕೇತಕರರು ಬಾಲ್ಯದಲ್ಲಿ ಸ್ವಲ್ಪ ಸಂಸ್ಕೃತವನ್ನೂ ಜ್ಯೋತಿಷ ವಿಷಯವನ
ಭ್ಯಾಸಿಸಿ ಕೊಲ್ಲಾಪೂರದಲ್ಲಿ ಇಂಗ್ಲಿಷ ಅಭ್ಯಾಸವನ್ನು ಮಾಡಿದರು. ಬಾಪೂ ಶಾ
ಳು ೧೮೭೦ನೆಯ ಇಸವಿಯಲ್ಲಿ ತೀರಿದ್ದರಿಂದ ಕೇತಕರರ ವಿದಾಭ್ಯಾಸಕ್ಕೆ ವಿಘ್ನವುಂ
ಯಿತು. ಆದರೂ ಅವರು ಇಂಗ್ಲಿಷ ಅಭ್ಯಾಸವನ್ನು ಮುಗಿಸಿ ಮ್ಯಾಟ್ರಿಕ್ಯೂಲೇಶ
ರೀಕ್ಷೆ ಪಾಸಾಗಿ ಜಿಜೀಭಾಯಿ ಪಾರಿತೋಷಿಕವನ್ನು ಹೊಂದಿದರು. ಹೆಚ್ಚು ಕಲಿಯಲಿ
ಕ್ಕ ಸೌಕರ್ಯಗಳು ದೊರೆಯದಂತಾದ್ದರಿಂದ ಇಂಗ್ಲಿಷ ಶಾಲೆಯಲ್ಲಿ ಅಧ್ಯಾಪಕ ಕೆಲ
ಸನ್ನು ಕೈಕೊಂಡರು. ತೀಕ್ಷ್ಣ ಬುದ್ಧಿಯೂ ಪರಂಪರಾಗತ ಜ್ಯೋತಿಷ ವಿದ್ಯಾಭ್ಯಾಸ
ಾಲಸೆಯೂ ಅವರನ್ನು ಸುಮ್ಮನೆ ಕೂಡ್ರಗೊಡಲಿಲ್ಲ. ತಂದೆಗಳು ಬರೆದಿಟ್ಟ ಜ್ಯೋತಿ
ಗ್ರಂಥಗಳನ್ನು ಓದಿ ತದ್ವಿಷಯಕವಾದ ಗಣಿತಗಳನ್ನು ಹಾಕಹತ್ತಿದರು. ಸಂಸ್ಕೃ
ಜ್ಯೋತಿಷ ಗ್ರಂಥಗಳೊಂದಿಗೆ ಇಂಗ್ಲಿಷ ಭಾಷೆಯಲ್ಲಿದ್ದ ಜ್ಯೋತಿಷ ಗ್ರಂಥಗಳನ್ನು ಓ
ಾರಂಭಿಸಿದರು, ಫ್ರೆಂಚ ಭಾಷೆಯಲ್ಲಿ ಅನೇಕ ಉತ್ತಮ ಗ್ರಂಥಗಳಿದ್ದದರಿಂದ ಕೇತ
ರು ಫ್ರೆಂಚ ಭಾಷೆಯಲ್ಲಿ ಅಭ್ಯಾಸವನ್ನು ಮಾಡಿ ಫ್ರಾನ್ಸಿನ ಜ್ಯೋತಿಷ ಸಂಘಗ
ೂಡ ಫ್ರೆಂಚ ಭಾಷೆಯ ಪತ್ರವ್ಯವಹಾರ ನಡೆಸುತ್ತಿದ್ದರು. ಪೌರ್ವಾತ್ಯ ಪಾಶ್ಚಾತ್ಯ
ವಿಚಾರಗಳ ತುಲನೆ ಮಾಡಿ ನಿಶ್ಚಿತವಾದ ವಿಚಾರಗಳನ್ನು ಜನರ ಮುಂದಿಟ್ಟರು.

ಇವರು ತಮ್ಮ ೩೦ನೆಯ ವರುಷದಲ್ಲಿ 'ಜ್ಯೋತಿರ್ಗಣಿತ'ವೆಂಬ ಪುಸ್ತಕವನ
ಬರೆದರು. ಅದು ೧೮೮೬ನೆಯ ಇಸವಿಯಲ್ಲಿ ಅಚ್ಚಾಗಿ ಪ್ರಕಟವಾಯಿತು. ಹೆಚ್ಚ
ಹೆಚ್ಚು ಅಭ್ಯಾಸ ಮಾಡುತ್ತ 'ಕೇತಕೀ ಗ್ರಹಗಣಿತ' 'ವೈಜಯಂತೀ' ಮೊದಲಾ
ಗ್ರಂಥಗಳನ್ನು ಬರೆದಿಟ್ಟರು. ಅವುಗಳಲ್ಲಿ ಕೆಲವು ಪ್ರಕಾಶಿತವಾಗಿವೆ. ಇವರು ವಿ
ಂದ ಇದ್ದು ಉಳಿದ ಹಣದಿಂದ ತಮ್ಮ ಜ್ಯೋತಿಷ ಪುಸ್ತಕಗಳನ್ನು ಅಚ್ಚು ಹಾಕಿಸಿದರೇ
ಯಾವ ಸಿರಿವಂತರ ನೆರವನ್ನೂ ಬಯಸಲಿಲ್ಲ. ಈ ಸಂಗತಿಯು ಅವರ ವಿದ್ಯಾಭ್ಯಾ
ಪ್ರೀತಿಯ ಮುಖ್ಯ ಲಕ್ಷಣವಾಗಿದೆ. ಅವರು ಬರೆದ 'ಗೋಲದ್ವಯ ಪ್ರಶ್ನ' ಎಂ
ಗ್ರಂಥವು ಅಚ್ಚಾಗದೆ ಹಾಗೆಯೇ ಉಳಿಯಿತು.

ಇವರು ಮುಂದೆ ಅಸಿ। ಡೆ. ಎ. ಇ. ರಾಗಿ ಧಾರವಾಡ ವಿಜಾಪೂರ ಜಿಲ್ಲೆಗಳಲ್ಲಿ ಕೆಲಸ ಮಾಡಿದರು. ಟ್ರೇ. ಕಾ. ದ ವಾರ್ಷಿಕ ಪರೀಕ್ಷೆಗಳಲ್ಲಿ ಬೀಜಗಣಿತ ಜ್ಯೋತಿಷ ಶಾಸ್ತ್ರಗಳ ಪರೀಕ್ಷಕರಾಗಿರುತ್ತಿದ್ದರು. ಇವರು ಶಾಂತರೂ ದೊಡ್ಡ ಮನಸ್ಸಿನವರೂ ಆಗಿದ್ದರೆಂಬ ಸಂಗತಿಯು ಆಗಿನ ವಾಸ್ತರರ ಹಾಗೂ ವಿದ್ಯಾರ್ಥಿಗಳ ಅನುಭವಕ್ಕೆ ಬಂದ ಮಾತಾಗಿದೆ. ಒಳಿಕ ೧೯೧೧ನೆಯ ಇಸವಿಯ ವರೆಗೆ ಕೆಲಸಮಾಡಿ ಇವರು ವಿಶ್ರಾಂತಿ ವೇತನವನ್ನು ಹೊಂದಿದರು.

ಸುಮ್ಮನೆ ಕೂಡ್ರುವದು ಅವರಿಗೆ ಸೇರುತ್ತಿದ್ದಿಲ್ಲ. ಜ್ಯೋತಿಷ ಗ್ರಂಥಗಳನ್ನು ಓದುವದೂ ಬರೆಯುವದೂ ಅವರ ನಿತ್ಯದ ಕೆಲಸಗಳಾಗಿದ್ದವು. ಕಾಲವನ್ನು ನಿರರ್ಥಕವಾಗಿ ಕಳೆಯಲಿಲ್ಲವೆಂಬವಕ್ಕೆ ಅವರು ಬರೆದ ಗ್ರಂಥಗಳೇ ಸಾಕ್ಷಿಗಳಾಗಿವೆ.

೧೯೮೬ನೆಯ ಇಸವಿಯ ಮುಂಬಯಿ ಟಾವುನ ಹಾಲಿನಲ್ಲಿ ಇವರು ತಮ್ಮ ಜ್ಯೋತಿರ್ಗಣಿತದ ವಿಷಯವಾಗಿ ವ್ಯಾಖ್ಯಾನ ಕೊಟ್ಟರು. ನಿರರ್ಥಕವಾದ ಈ ಕೆಲಸದಲ್ಲಿ ಮನಸ್ಸು ತೊಡಗಿಸಿದ್ದು ತಮ್ಮ ಹುಚ್ಚುತನವನ್ನು ವ್ಯಕ್ತಪಡಿಸುತ್ತದೆಂದು ಉಪಸಂಹಾರದಲ್ಲಿ ಹೇಳಿದರು. ಆಗ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ರಾನಡೆಯವರು "ನಮಗೆ ಇಂಥ ಹುಚ್ಚರ ಅವಶ್ಯಕತೆಯು ವಿಶೇಷವಿದೆ. ಇಂತಹ ಜನರಿಂದ ಮಹತ್ವದ ಶೋಧಗಳಾಗುತ್ತವೆ." ಎಂದು ಹೇಳಿದ್ದರಿಂದ ಕೇತಕರರವರಿಗೆ ಸಮಾಧಾನವೆನಿಸಿತು.

ಇವರು 'ಚಿತ್ರಾ' ನಕ್ಷತ್ರದ ವಿಷಯವಾಗಿ ಶೋಧನನ್ನು ಮಾಡಿದರು. ಪಂಚಾಂಗ ಗಣನೆಯ ಕೆಲಸವು ಸಾಮಾನ್ಯವಲ್ಲ. ನಮ್ಮ ಪುರಾತನ ಸಂಸ್ಕಾರ, ಆಚಾರವಿಚಾರಗಳ ವಿಷಯವಾಗಿ ಲಕ್ಷಾವಧಿ ಹಿಂದುಗಳ ಮನಸ್ಸಿನ ಮೇಲೆ ಅದು ತಿಳಿಯುವಲೆ ಪರಿಣಾಮವನ್ನು ಅವ್ಯಾಹತವಾಗಿ ಮಾಡುತ್ತದೆ.

ಇವರು ಕಳೆದ ಅಗಷ್ಟ ತಿಂಗಳ ೩೧ನೆಯ ತಾರೀಖಿನ ದಿವಸ ಇಹಲೋಕಯಾತ್ರೆಯನ್ನು ಮುಗಿಸಿದರು. ಅಖಂಡವಾದ ಉತ್ಸಾಹವುಳ್ಳ ಹಾಗು ಪರಿಪಕ್ವವಾದ ಅನುಭವವುಳ್ಳ ಜ್ಯೋತಿಷದ ಶೋಧದಲ್ಲಿ ನಿರಂತರ ಮನಸ್ಸನ್ನು ತೊಡಗಿಸಿದ ವಿದ್ವಾಂಸರು ಇಲ್ಲದಂತಾದರು. ಆದದರಿಂದ ನಮ್ಮ ಪ್ರಾಂತಕ್ಕೆ ಹಾನಿಯು ಜರುಗಿತೆಂದು ಹೇಳಬಹುದು.

ಇವರಲ್ಲಿದ್ದ ಉತ್ಸಾಹ, ಸತತ ಪ್ರಯತ್ನ, ವಿಚಾರವಿನಿಮಯ ಇತ್ಯಾದಿ ಸಂಗತಿಗಳನ್ನು ಭಾವೀ ತರುಣರು ಅನುಕರಣಮಾಡಿ ಒಂದೊಂದು ಪ್ರೀತಿಯ ವಿಷಯದ ವ್ಯಾಸಂಗ ಮಾಡುತ್ತ ಹೋದರೆ ಕೇತಕರರಂತೆ ಅವರು ಆ ವಿಷಯದಲ್ಲಿ ನಿಷ್ಣಾತರಾಗ ಬಹುದು.

ಕೇತಕರರ ಒಬ್ಬ ಮಗನು ಪದವೀಧರನಾಗಿದ್ದು ಜ್ಯೋತಿಷದ ಅಭ್ಯಾಸವನ್ನು ಮಾಡಿ ಜ್ಯೋತಿರ್ಗಣಿತದ ಹೊಸ ಅವೃತ್ತಿಯನ್ನು ಅನೇಕ ಸುಧಾರಣೆಗಳೊಂದಿಗೆ ಪ್ರಸಿದ್ಧಿಸಿರುವನು.

ಸ್ತ್ರೀಶಿಕ್ಷಣಕ್ಕೆ ಸಂಬಂಧಿಸಿದ ಸಂಗತಿಗಳು

ಲೇಖಕ:—ಮಿ. ಸಾತೇನಹಳ್ಳಿ.

ಸಮಾಜಯಂತ್ರಜಾಲನೆಗೆ ಸ್ತ್ರೀಪುರುಷರು ಆಧಾರ ಸ್ವರೂಪವಾಗಿದ್ದಾರೆ. ಅಂದರೆ ಅವರು ಸಮಾಜಕ್ಕಾಗಲಿ ಗೃಹಕ್ಕಾಗಲಿ ಸಮಾನ ಅಧಿಕಾರಿಗಳು. ಹೀಗಿದ್ದ ಬಳಿಕ ಸ್ತ್ರೀಯು ಶಿಕ್ಷಿತಳಾದ ಮೇಲೆ ಪುರುಷರಂತೆ ತನಗಾದರೂ ಧಾರ್ಮಿಕ ಸಾಂಪತ್ತಿಕ ರಾಜಕೀಯ ವಿಷಯಗಳಲ್ಲಿ ಸರಿಯಾದ ಬಾಧ್ಯತೆಯು ಇರಬೇಕೆಂದು ಆಕಾಂಕ್ಷಿಸುವದು ಸಹಜವಾಗಿದೆ. ಈ ವಿಷಯವು ವಾದಗ್ರಸ್ತವಿದ್ದರೂ ಜಗತ್ತಿನ ಕೆಲ ಭಾಗಗಳಲ್ಲಿ ಪಾರ್ಲಮೆಂಟ್, ಕೌನ್ಸಿಲು ಸರಕಾರ ಸೇವೆ ಮೊದಲಾದ ಸಂಗತಿಗಳಲ್ಲಿ ತಮಗೂ ಬಾಧ್ಯತೆಯಿರಬೇಕೆಂದು ಗಂಡಸರ ಕೂಡ ವಾದ ಮಾಡಿ ಜಯ ಸಂಪಾದಿಸಿ ಸ್ತ್ರೀಯರು ಸಂಸ್ಥೆಗಳ ಮುಖ್ಯಸ್ಥರೂ ಸಹಾಯಕರೂ ಆಗಿರುವರು. "गुणः पूजास्थानं गुणिषु नच लिंगं नच वयः" ಎಂಬ ಆರ್ಯರ ವಾಕ್ಯಕ್ಕನುಸರಿಸಿ ಸ್ತ್ರೀಯರ ಘನತೆಯು ಒಂದು ರೀತಿಯಿಂದ ಯೋಗ್ಯವೂ ಆಗಿರುತ್ತದೆ. ಈ ಸಂಗತಿಯ ಲಭ್ಯಾಂಶವೇನೆಂದರೆ, ಶಿಕ್ಷಣವು ಮನುಷ್ಯನ ಜೀವನವಾಗಿದ್ದು ಮನುಷ್ಯತ್ವದ ಪಾತ್ರತೆಯನ್ನು ವೃದ್ಧಿಗೊಳಿಸುತ್ತದೆ. ಶಿಕ್ಷಣದಿಂದ ಮನುಷ್ಯನಲ್ಲಿ ಸ್ವಾಭಿಮಾನ, ಸ್ವಾವಲಂಬನ, ಸ್ಥೈರ್ಯ, ಧೈರ್ಯ ಮೊದಲಾದ ಸದ್ಗುಣಗಳ ರಕ್ಷಣೆಯಾಗುತ್ತದೆ.

ಸ್ತ್ರೀಪುರುಷರಿಬ್ಬರೂ ಜೀವಿಗಳಾದುದರಿಂದ ಮನುಷ್ಯತ್ವದ ನಿಸರ್ಗಸಿದ್ಧ ಗುಣಗಳಿಗೂ ಜೀವನಕಲಹದ ಸೌಕರ್ಯಗಳಿಗೂ ಸಮಾನ ಪಾತ್ರತೆಯನ್ನು ಪಡೆದಿರುವದು ಸಹಜವೇ. ಅದರಂತೆಯೇ ಸ್ತ್ರೀಯರು ಜೀವನಸಂಗ್ರಾಮದಲ್ಲಿ ಹೋರಾಡಿ ವೀರಾಗ್ರಣಿಗಳಾದ ಉದಾಹರಣಗಳು ವೆಗ್ಗಳವಾಗಿರುವವು. ಬ್ರಹ್ಮದೇಶದಲ್ಲಿ ಸ್ತ್ರೀಯರು ಧನಾರ್ಜನೆಯ ಉದ್ಯೋಗಗಳನ್ನೂ ಪುರುಷರು ಮನೆಗೆಲಸಗಳನ್ನೂ ಮಾಡುತ್ತಿರುವದರಿಂದ ಆ ದೇಶವು ಸ್ತ್ರೀರಾಜ್ಯವೆಂಬ ನಾಮಧೇಯವನ್ನು ಪಡೆದಿದೆ. ಅಂದಬಳಿಕ ಪ್ರಪಂಚದಲ್ಲಿ ಸ್ತ್ರೀಪುರುಷರಲ್ಲಿ ಒಬ್ಬರು ಹೆಚ್ಚು, ಒಬ್ಬರು ಕಡಿಮೆ ಎಂಬ ಭೇದಭಾವನವನ್ನು ಮನಸ್ಸಿನಲ್ಲಾ ತರಕೂಡದು. ಇಬ್ಬರೂ ಬೇರೆ ಬೇರೆ ಅಲ್ಲ. ಮನುಷ್ಯ ಜಾತಿಯ ಸಂಗತಿಗಳ ಪೂರಕವಾಗಿದ್ದಾರೆ. ಸ್ತ್ರೀಯರಲ್ಲಿ ಕೆಲವು ಗುಣಗಳು ಸ್ವಾಭಾವಿಕವಾಗಿ ಕಂಡರೆ ಮತ್ತೆ ಕೆಲವು ಗುಣಗಳು ಪುರುಷರಲ್ಲಿ ನಿಸರ್ಗಸಿದ್ಧವಾಗಿರುವವು. ಪುರುಷನಲ್ಲಿ ಧೈರ್ಯವೂ ಬಲವೂ ಇದ್ದರೆ ಸ್ತ್ರೀಯಲ್ಲಿ ದಯೆಯೂ, ದಾಕ್ಷಿಣ್ಯವೂ ಶಾಂತತೆಯೂ ಮೂರ್ತಿಮಂತವಾಗಿರುತ್ತವೆ. ಪುರುಷನು ಅಂತರಿಕ್ಷದಲ್ಲಿ ಉಡ್ಡಾಣ ಮಾಡಿ ಹಪ್ಪೆಯ ತರಂಗಗಳ ಹಾಗು ಈ ಧರದ ಸರಳ ಗತಿಯು ಶೋಧಮಾಡಿದರೆ ಸ್ತ್ರೀಯಳು ಪ್ರಪಂಚಕ್ಕೇ ತಳಹದಿಯಂತೆ ಇರುವ ಗರ್ಭರಕ್ಷಣ, ಶಿಶುಪಾಲನ ಮೊದಲಾದ ಕೆಲಸಗಳಲ್ಲಿ

ತನ್ನ ತನುವನ್ನು ಸವಿಸುವಳು. ಆದದರಿಂದ ಇವರಿಬ್ಬರು ರಾಷ್ಟ್ರ, ಸಮಾಜ ಯಂತ್ರ ಗಳ ಒಂದೊಂದು ವ್ಯೆಯೆಂದು ಹೇಳಿದರೂ ಒಪ್ಪುವದು. ಸೂರ್ಯನ ಕಿರಣಗಳಲ್ಲಿ ಬೆಳಕೂ ಉಷ್ಣತೆಯೂ ಗರ್ಭಿತವಾಗಿರುವವು. ಅವು ಬೇರೆ ಬೇರೆಯೆಂದು ಗೊತ್ತಿದ್ದರೂ ಅಗಲಿಸಿ ತೋರಿಸುವದು ಕಠಿನ. ಹಾಗೆಯೇ ಪ್ರಪಂಚಕ್ಕೆ ಬೇಕಾದ ಗುಣಗಳಲ್ಲಿ ಇಬ್ಬರೂ ವೈಶಿಷ್ಟ್ಯವನ್ನು ಹೊಂದಿದ್ದಾರೆ. ಸೃಷ್ಟಿನಿಯಮಾನುಸಾರವಾಗಿ ವಿಚಾರಿಸಲು ಅವರು ತಮ್ಮ ತಮ್ಮ ವಿಶಿಷ್ಟ ಗುಣಗಳಿಂದ ತಮತಮಗೆ ಯೋಗ್ಯವಾದ ಕಾರ್ಯಕ್ಷೇತ್ರ ದಲ್ಲಿ ಪರಸ್ಪರ ಸಹಕರಿಸುವದೇ ಯೋಗ್ಯವು. ಪಾಶ್ಚಾತ್ಯ ಸಮಾಜಗಳಲ್ಲಿಯೂ ಅರಬೀ ಜನಾಂಗದಲ್ಲಿಯೂ ಸ್ತ್ರೀಯಳಿಗೆ ವಿಶೇಷ ಆದರಬುದ್ಧಿಯನ್ನು ತೋರಿಸುವದು ಶ್ಲಾಘ್ಯ ನೀಯವೂ ಇತರರಿಗೆ ಅನುಕರಣೀಯವೂ ಆಗಿರುವದು. ಸ್ತ್ರೀಪುರುಷರ ಕಾರ್ಯ ಕ್ರಮದ ಅಂತಿಮಧ್ಯೇಯವು ಒಂದೇ ಆಗಿರುವದು.

ಇಟಲೀ ದೇಶದ ಅತ್ಯಂತ ವ್ಯವಹಾರಚತುರರೂ ನಿರ್ದಾಕ್ಷಿಣ್ಯರೂ ಮುತ್ಸದ್ದಿ ಗಳೂ ಆದ ಮಿ. ಮುಸೋಲಿನೀ ಎಂಬವರು ತಮ್ಮ ದೇಶಬಾಂಧವರನ್ನು ಕುರಿತು ಮಹತ್ವದ ಭಾಷಣ ಮಾಡಿದ್ದಾರೆ. ಅದೇನೆಂದರೆ " ಪಾರ್ಲಮೆಂಟಿನಲ್ಲಿಯೂ ಮ್ಯುನಿಸಿ ಪಾಲಿಟಿಗಳಲ್ಲಿಯೂ ಸ್ತ್ರೀಯರು ಕೆಲಸ ಮಾಡುವದು ನಮಗೆ ಬೇಡ. ಈ ಕೆಲಸಗಳಿಗೆ ಸಾಕಾಗುವಷ್ಟಕ್ಕಿಂತ ಹೆಚ್ಚಾಗಿ ಯೋಗ್ಯರಾದ ಪುರುಷರು ಇರುವರು. ಸ್ತ್ರೀಯರು ಲಗ್ನ ವಿಲ್ಲದೆ ಇಂಥ ಕೆಲಸಗಳಲ್ಲಿ ತೊಡಗುವ ಅಗತ್ಯವಿಲ್ಲ. ನಮ್ಮ ದೇಶದ ವೈಭವಕ್ಕಾಗಿ ಲೋಕ ಸಂಖ್ಯೆ ಬೆಳೆಯುವದು ಆವಶ್ಯಕವಾಗಿದೆ. ಸದ್ಯಕ್ಕೆ ಇಟಲೀ ದೇಶದಲ್ಲಿ ಲಗ್ನ ಮಾಡಿಕೊಳ್ಳದ ಜನರಿಗೆ ಕರ ಭಾರವಿದೆ. ಇನ್ನು ಮುಂದೆ ಲಗ್ನಮಾಡಿಕೊಂಡು ಮಕ್ಕ ಳನ್ನು ಹಡೆಯದ ಸ್ತ್ರೀಪುರುಷರಿಂದಲೂ ಏನಾದರೂ ಕರಭಾರವನ್ನು ಗೊತ್ತು ಮಾಡುವ ಪ್ರಸಂಗವಿದೆ. ಇತ್ಯಾದಿ. "

ಕೇವಲ ಸಂತತಿ ಪಡೆಯುವದೇ ಮನುಷ್ಯಜನ್ಮದ ಇತಿಕರ್ತವ್ಯತೆಯಲ್ಲ. ಹುಟ್ಟಿದ ಮಕ್ಕಳು ತೇಜೋವಂತರೂ ಸುದೃಢರೂ ವಿಚಾರಿಗಳೂ ಆಗಲಿಕ್ಕೆ ಬೇಕು. ಹೀಗಾಗ ಲಿಕ್ಕೆ ತಂದೆ ತಾಯಿಗಳು ಸುಶಿಕ್ಷಿತರಾಗಿ ಮಕ್ಕಳಿಗೆ ಉದಾಹರಣ ಸ್ವರೂಪರಾಗಿ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಬುದ್ಧಿ ಪುರಸ್ಸರವಾಗಿ ಯತ್ನಯಿಸಬೇಕಾಗುವದು. ಈ ಕೆಲಸದಲ್ಲಿ ಅವರಿಗೆ ವಿಘ್ನಗಳು ಬಂದರೂ ಅವನ್ನು ಸಮಾಧಾನದಿಂದ ತಾಳಿಕೊಂಡು ಎದುರಾಗುವದಕ್ಕಾಗಿ ತಕ್ಕ ಗುಣಗಳು ಅವರಲ್ಲಿ ರೂಢವಾಗಿರಬೇಕಾಗಿರುವದು. ಈ ಪ್ರಕಾರ ಅವರಿಬ್ಬರೂ ತಮ್ಮ ವಿಶಿಷ್ಟ ಗುಣಗಳಿಗೆ ತಕ್ಕ ಕಾರ್ಯಕ್ಷೇತ್ರದಲ್ಲಿ ಜಯಶಾಲಿ ಗಳಾಗಲಿಕ್ಕೆ ತಕ್ಕ ಶಿಕ್ಷಣವನ್ನು ಸರಕಾರದವರೂ ಸಮಾಜ ಧುರೀಣರೂ ಅನೇಕ ಅನು ಭವಗಳಿಂದ ದೃಢಪಡಿಸಬೇಕಾಗುವದು. ಅಂದರೆ ಪ್ರಪಂಚದಲ್ಲಿ ಶ್ರಮವಿಭಾಗವಾಗಿ ಸುಖವಾಗುವದು.

ಸ್ತ್ರೀಪುರುಷರ ಯೋಗ್ಯತೆಯನ್ನು ವರ್ಣಿಸುವ ಒಂದು (Man, an Indictment) ಪುಸ್ತಕವನ್ನು ಮಿ. ಎ. ಎಮ್. ಲುಡೋವ್ಹಿಸಿ ಎಂಬವರು ಬರೆದಿದ್ದಾರೆ. ಅವರ ಅಭಿಪ್ರಾಯವೇನೆಂದರೆ—" ಸ್ತ್ರೀಪುರುಷರು ನಿಸರ್ಗತಃ ಸಮಾನ ಯೋಗ್ಯತೆಯವರೆಂದು ತಿಳಿಯುವದು ತಪ್ಪು. ಸಾವಿರಾರು ವರ್ಷಗಳಿಂದ ಪುರುಷನು ಸ್ತ್ರೀಯಳಿಗಿಂತ ಶಕ್ತಿ, ಬುದ್ಧಿಗಳಿಂದ ಶ್ರೇಷ್ಠನೆಂದು ನಿರ್ಧರಿಸಲ್ಪಟ್ಟಿದ್ದಾನೆ. ಗರ್ಭಧಾರಣೆ, ಶಿಶುಸಂಗೋಪನ ಇವೇ ಮೊದಲಾದ ತೊಂದರೆಗಳಿಗೆ ಪುರುಷನು ಎರವಾಗಿರುವದರಿಂದ ಅವನ ಬುದ್ಧಿ ಶಕ್ತಿಗಳ ಬೆಳವಣಿಗೆಗೆ ತೊಂದರೆಯು ಕಡಿಮೆಯಾಗಿ ಅವು ಅವಿಚ್ಛಿನ್ನವಾಗಿ ಬೆಳೆದಿವೆ. ಸ್ತ್ರೀಯಳು ಪುರುಷನ ಕಾರ್ಯಕ್ಷೇತ್ರದಲ್ಲಿ ತನ್ನ ಬುದ್ಧಿಶಕ್ತಿಗಳನ್ನು ಬೆಳೆಯಿಸಿ ಪುರುಷನಿಗಿಂತ ಶ್ರೇಷ್ಠವಾದ ಉದಾಹರಣಗಳು ದೊರೆಯಬಹುದು. ಸರಿಯಾಗಿ ವಿಚಾರಿಸಿದರೆ ಪುರುಷವರ್ಗವೇ ಬಲಹೀನವೂ ಕಾರ್ಯವಿಮುಖವೂ ಆಗುತ್ತ ನಡೆದಿರುವದೆಂದು ಹೇಳಬಹುದು. ಪುರುಷವರ್ಗವು ಮೊದಲಿನಂತೆ ತನ್ನ ಕಾರ್ಯಕ್ಷೇತ್ರದಲ್ಲಿ ಕಸುವಿನಿಂದ ಯತ್ನಿಸಿದರೆ ಈಗ ಕಾಣುವ ಸ್ತ್ರೀಯರ ಸಾಹಸವು ಕಡಿಮೆಯಾಗುವದು ಇತ್ಯಾದಿ."

ಲುಡೋವ್ಹಿಸಿಯವರ ವಿಧಾನವು ಹ್ಯಾಗೇ ಇರಲಿ, ಅವರ ಬರಹವು ಪಾಶ್ಚಾತ್ಯ ಸ್ತ್ರೀಪುರುಷರ ವಿಷಯವಾಗಿ ಇರುವದು. ಅಲ್ಲಿ ಸ್ತ್ರೀಪುರುಷರ ಪ್ರಗತಿಯು ಚೆನ್ನಾಗಿರುವದು. ಸ್ತ್ರೀ ಪುರುಷರು ಅಲ್ಲಿ ನಾಮಾಂಕಿತ ಗ್ರಂಥಕಾರರೂ ಶಾಸ್ತ್ರಜ್ಞರೂ ಹೆಚ್ಚು ಪ್ರಮಾಣದಿಂದ ಬೆಳೆಯತೊಡಗಿದ್ದಾರೆ. ಸ್ತ್ರೀಪುರುಷರ ಪ್ರಗತಿಯು ನಮ್ಮ ದೇಶದಲ್ಲಿ ಸಹ ಮೊದಲಿಗಿಂತ ನೆಟ್ಟಗಿರುವದು. ಜಗತ್ತಿನಲ್ಲಿ ಎಲ್ಲಿಯೇ ಆದರೂ ಎಷ್ಟೋ ವರ್ಷಗಳಿಂದಲೂ ಸ್ತ್ರೀಪುರುಷರ ಪ್ರಗತಿಯಲ್ಲಿ ಬಹಳ ಅಂತರವಿದೆ. ಆ ಅಂತರದಲ್ಲಿ ಹೇಳತಕ್ಕಷ್ಟು ಅಭ್ಯಂತರವು ಆಗಿಲ್ಲವೆಂದು ಹೇಳುವದೇ ಮಿ. ಲುಡೋವ್ಹಿಸಿಯವರ ಉದ್ದೇಶವಾಗಿದೆ.

ಇಂಡಿಯನ್ ನ್ಯಾಶನಲ್ ಹೆರಾಲ್ಡ ಎಂಬ ಪತ್ರದಲ್ಲಿ ಪ್ರಖ್ಯಾತ ಕಾದಂಬರಿ ಲೇಖಿಕೆಯಾದ ಮಿಸ್ ಸ್ವಾರ್ಮ ಜೇಮ್ಸನ್ ಎಂಬವರು ಕೆಳಗೆ ಬರೆದಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ಯಾವಳೇ ಸ್ತ್ರೀಯು ತನ್ನ ಮಾತೃಪದವನ್ನು ರಕ್ಷಿಸಿಕೊಂಡು ಸರಕಾರೀ ಉದ್ಯೋಗವನ್ನಾಗಲಿ ಬೇರೆ ಕೆಲಸವನ್ನಾಗಲಿ ವ್ಯವಸ್ಥಿತ ರೀತಿಯಿಂದ ಸಾಗಿಸಿಕೊಂಡು ಹೋಗುವದು ಅಶಕ್ಯವು. ಆದದರಿಂದ ಎರಡನೆಯ ಅಪೇಕ್ಷೆಯನ್ನು ಹೆಚ್ಚಾಗಿ ಮಾಡಬಾರದು. ಮಾತೃಪದದ ಭಾರವು ಸಾಮಾನ್ಯವಿಲ್ಲ. ಆ ಕಡೆಗೆ ಪೂರ್ಣ ಲಕ್ಷಗೊಟ್ಟು ಹೊರತು ಅದು ಸುಸೂತ್ರವಾಗಿ ಸಾಗದು. ಆದದರಿಂದ ಸ್ತ್ರೀಯು ಮೊದಲು ಪೂರ್ಣ ವಿಚಾರ ಮಾಡಿ ಕಾರ್ಯಕ್ರಮವನ್ನು ಸಿದ್ಧಪಡಿಸಿಕೊಳ್ಳಬೇಕು. ಪತ್ನೀಪದವೂ ಮಾತೃಪದವೂ ಜಗತ್ತಿನ ಆರಂಭದಿಂದ ಸ್ತ್ರೀಯರಿಗೆ ಯೋಗ್ಯವೆಂದು ನಿರ್ಧರಿಸಲ್ಪಟ್ಟಿದೆ. ಕೆಲವರು ಅನಿವಾಹಿತ ಸ್ತ್ರೀಯರು ಬೇರೆ ಬೇರೆ ಕಾರ್ಯಗಳನ್ನು ಕೈಕೊಂಡು ಯಶವನ್ನು ಸಂಪಾದಿಸಿ

ದ್ದಾರೆ. ಆದರೆ ಅವರ ಮನದಲ್ಲಿ ತನುಗೆ ಮಕ್ಕಳಿಲ್ಲೆಂದು ಕಟಿಯುತ್ತಿರುವದು. ಮತ್ತೆ ಕೆಲವರು ಗೃಹ ಸೌಖ್ಯದಲ್ಲಿದ್ದರೂ. ದ್ರವ್ಯಾರ್ಜನದ ಉದ್ಯೋಗವಿಲ್ಲೆಂದು ಹಳಹಳಿಸುತ್ತಿರುವರು. ಒಂದಕ್ಕೊಂದು ವಿರುದ್ಧವಾದ ಈ ಎರಡು ಸಂಗತಿಗಳನ್ನು ಕೂಡಿಸುವವರು ತ್ರಿಶಂಕುಸ್ವರ್ಗದಂತೆ ಆಂದೋಲನದಲ್ಲಿರುವರು. ಇದಕ್ಕಾಗಿ ಶ್ರೇಷ್ಠವಾದ ಉಪಾಯವೆಂದರೆ ಸ್ತ್ರೀಯು ಮಾತೃಪದದಲ್ಲಿ ಉಜ್ಜುಗಿಸುವದೇ.

ಮೇಲಿನ ವಿವರಣೆಯಿಂದ ಸ್ತ್ರೀಯಳಿಗೆ ಮಾತೃಪದವೇ ಯೋಗ್ಯವೆಂದು ಸಿದ್ಧವಾಗುತ್ತದೆ. ಅದಕ್ಕೆ ತಕ್ಕಂತೆ ತಕ್ಕ ಶಿಕ್ಷಣವನ್ನೇ ಕಲ್ಪಿಸುವದು ಸ್ತ್ರೀಶಿಕ್ಷಣದ ಯೋಗ್ಯ ದಿಶೆಯಾಗಿದೆ. ಇದಕ್ಕೆ ಅಪವಾದಾತ್ಮಕವಾಗಿ ಸ್ತ್ರೀಯರು ವಿಶೇಷ ಗುಣಗಳಿಂದ ಮುಂದೆ ಬಂದರೆ ಯಾರೂ ಅಡ್ಡ ಬರಬಾರದು.

(೧) **ಸ್ತ್ರೀಯರ ಧಾರ್ಮಿಕ ಬಾಧ್ಯತೆ**:—ಮಕ್ಕಳ ಲಗ್ನದ ವಿಷಯದಲ್ಲಿ ಅನುಭವಿಕರಾದ ದಂಪತಿಗಳು ಸಮಾನವಾಗಿ ವಿಚಾರಿಸುವರು. ಗಂಡನು ಲಗ್ನಮಾಡಿದ್ದಕ್ಕೆ ಪತ್ನಿಯು ಅಡ್ಡಬಂದ ಉದಾಹರಣೆಯು ದುರ್ಲಭ. ಮಕ್ಕಳ ಹಿತದ ವಿಷಯದಲ್ಲಿ ಇಬ್ಬರೂ ಅಧಿಕಾರಿಗಳಾಗಿದ್ದರಿಂದ ಸ್ತ್ರೀಯಸಮ್ಮತಿಗೂ ಬೆಲೆ ಬರುವಂತೆ ಧರ್ಮಾಧಿಕಾರಿಗಳು ಯತ್ನಿಸಬೇಕು. (೨) ಪುರುಷನು ಹೆಚ್ಚು ಕಾರಣವಿಲ್ಲದೆ ದಂಭದಿಂದ ಒಬ್ಬಳನ್ನು ಬಿಟ್ಟು ಮತ್ತೊಬ್ಬಳನ್ನು ಮಾಡಿಕೊಳ್ಳಲಿಕ್ಕೆ ಧರ್ಮಶಾಸ್ತ್ರದಲ್ಲಿ ಅವಕಾಶವಿದೆ. ಆ ಸ್ತ್ರೀಯು ಬುದ್ಧಿವಂತಳಿದ್ದರೂ ವಿವೇಕಿಯಿದ್ದರೂ ಕರ್ತವ್ಯಶಾಲಿನಿಯಿದ್ದರೂ ಏನೂ ಬೆಲೆಯಿಲ್ಲದೆ ಹಂಚಿನಂತೆ ಆಗುತ್ತಾಳೆ. ಈ ಅನಿಷ್ಟ ಸಂಗತಿಯು ಆಕೆಯ ಅಣ್ಣತಮ್ಮಂದಿರಿಗೂ ತಂದೆ ಕಕ್ಕಂದಿರಿಗೂ ಸರಿಬೀಳುವದೇ ? ಈ ವಿಚಾರವನ್ನು ಸಮಾಜಾಭಿಮಾನಿಗಳು ಮಾಡಬಹುದಾಗಿದೆ.

ಒಮ್ಮೊಮ್ಮೆ ಕೈತಪ್ಪಿ ಅಯೋಗ್ಯವರನ ಲಗ್ನವಾದರೆ ಸ್ತ್ರೀಯಳ ಆಯುಷ್ಯವೆಲ್ಲ ಕಷ್ಟಮಯವಾಗುತ್ತದೆ. ಇಂಥ ಎಷ್ಟೋ ಉದಾಹರಣೆಗಳು ತೋರಬಹುದು. ಈ ಸ್ಥಿತಿಯು ಸ್ತ್ರೀಪುರುಷರಿಬ್ಬರಿಗೂ ಸಂಬಂಧಿಸಿರುವದು. ಪುರುಷನಿಗೆ ತ್ಯಜಿಸಲಿಕ್ಕೆ ಅಧಿಕಾರವಿದೆ. ಮೊದಲೇ ವಿಚಾರಿಸಿ ಲಗ್ನಮಾಡಿದರೆ ಈ ತೊಂದರೆಗಳು ಅಕಲ್ಪಿತವಾಗಿ ತೋರಬಹುದು.

ಪುರುಷನು ಏಕಪತ್ನೀ ವ್ರತಸ್ಥನಾಗಿ ವರ್ತಿಸಿದರೆ ಲಗ್ನದ ಅನೇಕ ತೊಂದರೆಗಳು ಕಡಿಮೆಯಾಗುತ್ತವೆ. ಸುಮ್ಮ ಸುಮ್ಮನೆ ನಿಯಮಗಳನ್ನು ಮಾಡಿ ಅವುಗಳನ್ನು ಹುಸಿ ಮಾಡುವದಕ್ಕಿಂತ ಇದ್ದದ್ದರಲ್ಲಿಯೇ ತೃಪ್ತಿಹೊಂದಿ ಧರ್ಮಾನುಗಾಮಿಗಳಾಗುವದು ಯೋಗ್ಯವು. ನಮ್ಮಲ್ಲಿ ಒಬ್ಬನು ಅನೇಕ ಹೆಂಡಿರನ್ನು ಮಾಡಿಕೊಳ್ಳುವದು ಅಯೋಗ್ಯವೆಂದು ಕೂಗಿದರೆ ಯುರೋಪದಲ್ಲಿ ಜನಸಂಖ್ಯೆಯು ಬೆಳೆಯಲಿಕ್ಕೆಂದು ಒಬ್ಬನು ಅನೇಕ ಹೆಂಡಂದಿರನ್ನು ಮಾಡಿಕೊಳ್ಳಬೇಕೆಂದು ಜನರು ಸರಕಾರಕ್ಕೆ ಒತ್ತಾಯಪಡಿಸುತ್ತಲಿರು

ವರು. ಈ ಉಭಯ ಸಂಗತಿಗಳೂ ಯೋಗ್ಯವೇ. ಒಟ್ಟಾರೆ ಕಾಲಕ್ಕೆ ತಕ್ಕಂತೆ ಧರ್ಮದ ಆಯಮಗಳನ್ನು ಬದಲಿಸಬೇಕಾಗುತ್ತದೆಂಬದೇ ಮೇಲಿನ ವಿಷಯದ ಮುಖ್ಯತಾರ್ಥವು.

ಸಾಂಪತ್ತಿಕ ವಿಷಯವಾಗಿ— ಗಂಡನು ಜೀವಿಸಿ ಇರುವವರೆಗೆ ಹೆಂಡಿರ ಸ್ಥಿತಿಯು ಚೆನ್ನಾಗಿರುವದು. ಗಂಡನು ಇಲ್ಲದಂತಾದರೆ ಒಮ್ಮೆಲಿ ಗಂಡನ ಆಸ್ತಿಯು ಅವನ ಅವಿಭಕ್ತ ಜಿಣ್ಣ ತಮ್ಮಂದಿರ ಕೈಸೇರುವದು. ಹೀಗಾಗಿ ಆ ಸ್ತ್ರೀಯ ಸ್ವಾತಂತ್ರ್ಯತೆಯೂ ಸುಖವೂ ಇಲ್ಲದಂತಾಗುವವು. ಅವಳಿಗೆ ಅಲ್ಪ ವಯಸ್ಕರಾದ ಮಕ್ಕಳಿದ್ದರೆ ಅವರ ಶಿಕ್ಷಣಕ್ಕೂ ಸುಖಕ್ಕೂ ಕೊರತೆಯು ಬರುವದು, ಅದಕ್ಕಾಗಿ ಎಷ್ಟೋ ಸುಶಿಕ್ಷಿತರು ತಮ್ಮ ಹೆಂಡಿರು ಮಕ್ಕಳಿಗಾಗಿ ತಾವು ಇರುವಾಗಲೆ ವ್ಯವಸ್ಥೆ ಮಾಡಿಡುವರು. ಅವರ ಅನುಕರಣವನ್ನೇ ಮಿಕ್ಕವರು ಮಾಡಿದರೆ ಈ ತೊಂದರೆಯೂ ತಪ್ಪುತ್ತದೆ.

ಸಮಾಜ ವ್ಯವಸ್ಥೆಗಾಗಿ— ಇನ್ನೊಂದು ಮಹತ್ವವಾದ ವಿಷಯವು ಹಾಗೆಯೇ ಉಳಿದದೆ ಅದೇನೆಂದರೆ–ಬಾಲ ವಿಧವೆಯರದು.

ನಮ್ಮ ದೇಶದಲ್ಲಿ ೫ ವರ್ಷದಿಂದ ೧೫ ವರ್ಷಗಳೊಳಗಿನ ಬಾಲವಿಧವೆಯರ ಸಂಖ್ಯೆಯು ೩ ಲಕ್ಷಕ್ಕೆ ಮಿಕ್ಕಿದೆ. ಇಂಥವರು ಆಬಾಲ ಬ್ರಹ್ಮಚರ್ಯ ವ್ರತಸ್ಥರಾಗಿ ಜೀವಿಸಬೇಕಾಗುವದು. ಜ್ಞಾನಿಗಳಾದ ಪುರುಷರು ಏಕಪತ್ನೀವ್ರತಸ್ಥರಾಗಲಿಕ್ಕೆ ಅಧಿರರಾಗಿರುವಾಗ ಇಂಥ ಸಣ್ಣ ಬಾಲಿಕೆಯರು ಅಜ್ಞಾನಿಗಳಾಗಿದ್ದರೂ ತಮ್ಮ ಉದ್ಯೋಗಗಳಲ್ಲಿಯೂ ಧಾರ್ಮಿಕ ವಿಷಯದಲ್ಲಿಯೂ ನಿರತರಾಗಿ ಪುರುಷರಿಗೆ ನೀತಿಯನ್ನು ಬೋಧಿಸುವಂತೆ ಇರುವರು.

ಅವರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ್ದರಿಂದ ಹೊಟ್ಟೆಬಟ್ಟೆಗಳಿಗಾಗಿ ಬಹಳ ವ್ಯಥೆ ಪಡುವದನ್ನು ನೋಡಿದರೆ ಬಹಳ ಕನಿಕರ ಬರುವಂತೆ ಅದೆ. ಧಾರ್ಮಿಕ ನೀತಿಯನ್ನು ಕಲಿಸುವಂಥ ಧಾರ್ಮಿಕ ಗುರುಗಳೂ ಸಮಾಜದವರೂ ಇಂತಹರಿಗಾಗಿ ಏನಾದರೂ ಫಂಡನ್ನು ಮಾಡಿಟ್ಟಿರುವರೋ ? ಇಲ್ಲ.

ನಮ್ಮದೇಶದಲ್ಲಿ ಪ್ರೌಢ ವಿಧವೆಯರ ಸಂಖ್ಯೆಯು ಬೆಳೆದಿದ್ದರೆ ಯುರೋಪದಲ್ಲಿ ವಿಧುರರ ಸಂಖ್ಯೆಯು ಬೆಳೆದಿದೆ. ಆಂಗ್ಲರಲ್ಲಿ ಪ್ರೌಢ ವಿಧುರರ ಸಂಖ್ಯೆಯು ಬಹಳ ವಿರುವದು. ೧೦೦ಕ್ಕೆ ೫೦ರ ವರೆಗೆ ಇರುವದೆಂದರೂ ಸಲ್ಲುವಂತೆ ಅದೆ. ಸಮಾಜದಲ್ಲಿ ಒಂದು ನಿಯಮವನ್ನು ಮಾಡಹೋದರೆ ಮತ್ತೊಂದು ಅನಿಷ್ಟವು ಸಂಭವಿಸುವದೆಂದು ಹೇಳುವದೇ ಮೇಲಿನ ಉದಾಹರಣೆಯ ರಹಸ್ಯವಾಗಿದೆ.

ನಮ್ಮದೇಶದಲ್ಲಿ ಪ್ರೌಢವಿಧವೆಯರ ಸಂಖ್ಯೆಯು ೩ ಕೋಟಿಗೆ ಸಮೀಪಿಸಿದೆ. ೧೯೪೧ರಲ್ಲಿ ಈ ಸಂಖ್ಯೆಯು ಕೋಟಿ ಇತ್ತು ಹೀಗೆಯೇ ಹೆಚ್ಚಾಗುತ್ತ ಹೋದರೆ ನಮ್ಮ ದೇಶದ ಅವನತಿಯು ಬೆಳೆಯುತ್ತ ಹೋಗುತ್ತದೆ. ಇದರಿಂದ ಧರ್ಮಾಂತರ ಹೊಂದುವವರ ಸಂಖ್ಯೆಯೂ ಬೆಳೆಯುತ್ತ ಹೋಗುವದು. ಅನೀತಿಯೂ ಹೆಚ್ಚಾಗು

ಯದು. ವೈದಿಕ ಸಂಸ್ಕೃತಿಗಿಂತ ಔಪನಿಷದಿಕ ಸಂಸ್ಕೃತಿಯೇ ಶ್ರೇಷ್ಠವೆಂದು ಬಲ್ಲವರು ಕೇಳುತ್ತಾರೆ. ಮನುಷ್ಯನು ವನಚರ ಸ್ಥಿತಿಯನ್ನು ಬಿಟ್ಟು ಸುಧಾರಣೆಯ ಕೋಡುಗಲ್ಲಿನ ಮೇಲೆ ಹೇಗೆ ಕುಳಿತನೆಂಬದರ ಇತಿಹಾಸವು ವೇದಕಾಲದಿಂದ ಉಪನಿಷತ್‌ಕಾಲದವರೆಗೆ ಪರೀಕ್ಷಿಸಿದರೆ ತಿಳಿಯುವಂತೆ ಅದೆ.

(Pro.—Max Muller's Lectures on the Origin and Growth of Religion)

ಮೇಲಣ ವಿವರಣೆಯಿಂದ ಕಾಲಕ್ಕೆ ತಕ್ಕಂತೆ ಧರ್ಮಬಂಧನಗಳನ್ನು ಬದಲಿಸ ನೇಕೆಂದು ತಿಳಿಯುವಂತೆ ಅದೆ. ಕಾಲವಾನಕ್ಕನುಸರಿಸಿ ಉತ್ತರಹಿಂದುಸ್ತಾನದಲ್ಲಿಯೂ ಈ ಕಡೆಗೂ ವಿಧವಾವಿವಾಹ ಧರ್ಮಸಂಸ್ಥೆಗಳು ಉದ್ಭವಿಸುತ್ತಿರುವವು. ಅವು ಯೋಗ್ಯವೋ ಅಯೋಗ್ಯವೋ ದೊಡ್ಡವರಿಗೇ ಗೊತ್ತು!

ಜಪಾನ ದೇಶದ ವಿಷಯವಾಗಿ ಹೆಚ್ಚಿನ ಸಂಗತಿಗಳು

ಲೇಖಕರು:— ಪ. ಸ. ಪೂಜಾರ, ವಿದ್ಯಾರ್ಥಿ ಟ್ರೇ. ಸ್ಕೂಲ, ಧಾರವಾಡ

ಜಪಾನದೇಶದ ಒಕ್ಕಲತನ— ಜಪಾನ ದೇಶದಲ್ಲಿ ಅಲ್ಲಿಯ ಪ್ರಾಕೃತಿಕ ಸ್ಥಿತಿಗನುಸರಿಸಿ ಹೆಚ್ಚು ಮಳೆ ಸುರಿಯುವದು. ಅಲ್ಲಿಯ ಹವೆಗೆ ತಕ್ಕಂತೆ ಅಲ್ಲಿಯ ಭೂಮಿಗಳ ಸಾಗುವಳಿಗೆ ಕುದುರಿಗಳೇ ಉಪಯೋಗಿಸಲ್ಪಡುವವು. ಅವರು ನಮ್ಮಂತೆ ಮಳೆಯ ಹಾದೀನೋಡದೆ ಒಮ್ಮೊಮ್ಮೆ ಕಾಲುವೆಗಳಿಂದಲೇ ಭೂಮಿಗೆ ನೀರು ಬಿಟ್ಟುಕೊಳ್ಳುವರು. ಒಕ್ಕಲತನದ ಹೊಸ ಪದ್ಧತಿಯ ಜ್ಞಾನವನ್ನು ಅರಿತು ಹೊಸ ಹೊಸ ಗೊಬ್ಬರಗಳನ್ನು ಸಿದ್ಧಪಡಿಸಿಕೊಂಡು ಸ್ವಲ್ಪ ಕ್ಷೇತ್ರದಲ್ಲಿಯೇ ಹೆಚ್ಚು ಬೆಳೆ ತಕ್ಕೊಳ್ಳುತ್ತಾರೆ. ಅಲ್ಲಿ ಬತ್ತ, ಗೋದಿ, ನೀಲಿ, ಹತ್ತಿ, ಜವೆಗೋದಿ, ತಂಬಾಕ ನೊದಲಾದ ಪೈರುಗಳು ಬೆಳೆಯುವವು. ಅಕ್ಕಿಯೇ ಅವರ ಮುಖ್ಯ ಆಹಾರವು.

ಕೈಗಾರಿಕೆ— ಅಲ್ಲಿಯ ಅಡವಿಯಲ್ಲಿ ಬೆಳೆಯುವ ಗಿಡಗಳಿಂದ ಹಡಗು ಕಟ್ಟಿಕೊಳ್ಳುವರು. ಕಪ್ಪುರವನ್ನು ಸಿದ್ಧಪಡಿಸಿ ಪರದೇಶಕ್ಕೆ ಕಳಿಸುವರು. ಕಟ್ಟಿಗೆಯಿಂದ ತರತರದ ಪಾತ್ರೆಗಳನ್ನು ರಚಿಸುವರು. ಕಟ್ಟಿಗೆಯಿಂದಲೇ ಸಾದುಕೆಗಳನ್ನು ಮಾಡುವರು. ಬಿದುರುಗಳಿಂದ ತೊಲೆ ಕಂಬಗಳನ್ನು ಮಾಡಿಕೊಂಡು ಮನೆ ಕಟ್ಟಿಕೊಳ್ಳುವರು. ಬಿದುರಿನ ಎಳೆಗಳಿಂದ ಬಗೆಬಗೆಯ ಬುಟ್ಟಿಗಳನ್ನೂ ಅಂಗಿ ಟೊಪ್ಪಿಗೆಗಳನ್ನೂ ಮಾಡುವರು. ಅವುಗಳಿಂದಲೇ ನೆಲದ ಮೇಲೆ ಹಾಸುವ ಚಿತ್ರವಿಚಿತ್ರವಾದ ಚಾಪೆಗಳನ್ನು ಬಣ್ಣ ಕೊಟ್ಟು ಸಿದ್ಧಪಡಿಸುವರು. ಬಿದುರಿನಿಂದಲೇ ಕಾಗದಮಾಡುವರು. ಆ ಕಾಗದಗಳನ್ನು ಎಣ್ಣೆಯಲ್ಲಿಯೂ ಬಣ್ಣಗಳಲ್ಲಿಯೂ ಅದ್ದಿ ತೆಗೆದು ಪಾರದರ್ಶಕವಾಗುವಂತೆ ಮಾಡಿ

ಕಿಡಿಕಿಗಳಿಗೆ ಹಚ್ಚುವರು. ಬಿದುರು ಕಸಕಡ್ಡಿ ಅರಿವೆ ಚಿಂದಿ ಮೊದಲಾದವುಗಳಿಂದ ರಟ್ಟುಗಳನ್ನು ಸಿದ್ಧಪಡಿಸಿ ಮನೆಯ ಮೇಲ್ಛಾಗಕ್ಕೆ ಹೊಚ್ಚುವರು. ಆ ರಟ್ಟುಗಳಿಗೆ ಎಣ್ಣೆಯನ್ನೂ ಬೇರೆ ತರದ ಗಿಡಗಳ ರಸವನ್ನೂ ಹಚ್ಚಿ ನೀರುಹತ್ತದೆ ಜಾರಿಹೋಗುವಂತೆ ಮಾಡುವರು. ಮನೆಯ ಒಳಮಗ್ಗಲಿನ ಗೋಡೆಗಳಿಗೆ ಬಣ್ಣಕೊಟ್ಟು ಅಂದವಾಗಿ ಕಾಣುವಂತೆ ಮಾಡುವರು. ಬೀಗರಾಗಲಿ ಅತಿಥಿಗಳಾಗಲಿ ಬಂದರೆ ಒಮ್ಮೆಲಿ ಮೇಲೆ ವಿವರಿಸಿದ ಸಾಧನಗಳಿಂದ ತೀವ್ರವಾಗಿ ಹೊಸಮನೆಯನ್ನು ಕಡಿಮೆ ವೆಚ್ಚದಿಂದ ಸಿದ್ಧಪಡಿಸುವರು.

ಧರ್ಮ— ಎಲ್ಲರೂ ಧರ್ಮದಲ್ಲಿ ವಿಶ್ವಾಸವುಳ್ಳವರಾಗಿ ಪಾಪಕರ್ಮಕ್ಕೆ ಭಯಪಡುವರು. ಅಲ್ಲಿ ಕಳ್ಳರ ಕಾಕರ ಹಾವಳಿಯು ಇಲ್ಲ. ಬಾಗಿಲ ಕಿಡಿಕೆತೆರೆದು ನಿರ್ಭಯವಾಗಿ ಮಲಗಿಕೊಳ್ಳುವರು. ಏನಾದರೂ ಪದಾರ್ಥಗಳು ಅಕಸ್ಮಾತ್ತಾಗಿ ಸಿಕ್ಕರೆ ಆ ಪದಾರ್ಥಗಳು ಯಾರವು ಎಂಬದನ್ನು ಗೊತ್ತುಹಚ್ಚಿ ತಂದುಕೊಡುವರು. ಇಲ್ಲಿಯಂತೆ ಅಲ್ಲಿಯೂ ಕೆಲವೆಡೆಯಲ್ಲಿ ಗುಡಿಗಳೂ ಮೂರ್ತಿಗಳೂ ಪೂಜಾರಿಗಳೂ ಇರುವರು.

ಶಿಕ್ಷಣ— ಒತ್ತಾಯದ ಶಿಕ್ಷಣವನ್ನು ಬಳಿಕೆಯಲ್ಲಿ ತಂದಿರುವರು. ೧೦೦ಕ್ಕೆ ೯ಜರಂತೆ ಶಿಕ್ಷಿತರ ಸಂಖ್ಯೆಯು ಇರುವದು. ಜಪಾನೀಯರು ಕುಂಚುಗಳಿಂದ ಬರೆಯುವರು. ಆ ಅಕ್ಷರಗಳು ಚಿತ್ರದಂತೆ ಕಾಣುವವು. ಜೀವನಕ್ರಮವನ್ನು ಸುಸೂತ್ರವಾಗಿ ಸಾಗಿಸಲಿಕ್ಕೆ ತಕ್ಕವರಾಗುವಂತೆಯೂ ತಕ್ಕ ಗುಣಗಳುಳ್ಳ ನಾಗರಿಕರಾಗುವಂತೆಯೂ ಅವರು ಶಿಕ್ಷಣದ ಧ್ಯೇಯವನ್ನಿಟ್ಟುಕೊಂಡಿರುವರು. ಅಲ್ಲಿ ಪದವೀಧರರು ಸ್ತ್ರೀಪುರುಷರಲ್ಲಿ ಹೆಚ್ಚಾಗಿ ದೊರೆಯುವರು.

ರೇಶಿಮೆಯ ಉತ್ಪತ್ತಿ— ರೇಶಿಮು ಹುಳಗಳ ಆಹಾರವಾದ ವನಸ್ಪತಿಯನ್ನು ಬೆಳೆಯುವರು ತಕ್ಕ ಆಹಾರದಿಂದ ಹುಳಗಳನ್ನು ಬೆಳೆಯಿಸಿ ಅವುಗಳಿಂದ ಕಚ್ಚಾ ರೇಶಿಮೆಯನ್ನು ಸಂಗ್ರಹಿಸುವರು. ಅವುಗಳಿಂದ ತಕ್ಕ ರೀತಿಯಿಂದ ರೇಶಿಮೆ ಎಳೆಗಳನ್ನು ತೆಗೆದು ಕಂಡಿಕೆ ಸುತ್ತುವರು. ಈ ಕೆಲಸವನ್ನು ಬಹುತರ ಚಿಕ್ಕ ಮಕ್ಕಳೇ ಮಾಡುವರು. ಈ ತರಹದ ಕಾರಖಾನೆಗಳು ಅಲ್ಲಿ ವಿಪುಲವಾಗಿರುವವು. ಶಾಲಾ ವಿದ್ಯಾರ್ಥಿಗಳು ಸಹ ತಮ್ಮ ಬಿಡುದಿನಗಳಲ್ಲಿ ಮಾಡುವರು.

ಲಗ್ನಪದ್ಧತಿ— ವಧುವನ್ನಾಗಲಿ ವರನನ್ನಾಗಲಿ ಶೋಧಿಸುವದು ಪುರೋಹಿತನ ಕೆಲಸವಾಗಿರುವದು. ಲಗ್ನದವಯಸ್ಸು ಸರಕಾರದಿಂದ ನಿರ್ಬಂಧಿಸಲ್ಪಟ್ಟಿದೆ. ಕನ್ನಿಕೆಯು ೧೭ ವರ್ಷಕ್ಕೆ ಮಿಕ್ಕಿದವಳೂ ವರನು ೧೯ ವರ್ಷ ಮೀರಿದವನೂ ಇರಬೇಕೆಂದು ಗೊತ್ತಾಗಿದೆ. ಲಗ್ನಕಾಲಕ್ಕೆ ವರ, ಕನ್ಯೆ, ಪುರೋಹಿತ ಹಾಗು ಆತನ ಪತ್ನಿ ಈ ನಾಲ್ವರೇ ಇರತಕ್ಕದ್ದು. ಆಗ ೩ ಪಾತ್ರೆಯಲ್ಲಿ ಪಕ್ವಾನ್ನಗಳು ತುಂಬಿಡತಕ್ಕದ್ದು. ೧ನೆಯ ಪಾತ್ರೆಯಲ್ಲಿದ್ದ ಅನ್ನವನ್ನು ಮೊದಲು ವರನು ಸೇವಿಸಿ ಮಿಕ್ಕದ್ದನ್ನು ಕನ್ಯೆಯು

ಭುಂಜಿಸಬೇಕು. ಬಳಿಕ ತಿನೆಯ ಪಾತ್ರೆಯಲ್ಲಿದ್ದದ್ದನ್ನು ಮೊದಲು ಕನ್ಯೆಯು ಸೇವಿಸಿ ಬಳಿಕ ವರನು ಮಿಕ್ಕದ್ದನ್ನು ಉಣ್ಣತಕ್ಕದ್ದು. ತಿನೆಯ ಪಾತ್ರೆಯಲ್ಲಿದ್ದದ್ದನ್ನು ಪುರೋ ಹಿತನು ಉಂಡು ಉಳಿದದ್ದನ್ನು ಅವನ ಹೆಂಡತಿಯು ಉಣ್ಣತಕ್ಕದ್ದು. ಆ ಮೇಲೆ ಅವರೆ ಲ್ಲರೂ ರಜಿಸ್ಟ್ರೇಶನ ಕಚೇರಿಗೆ ಹೋಗಿ ತಮ್ಮ ಲಗ್ನದ ಒಪ್ಪಿಗೆ ಕೊಡುವರು. ಬಳಿಕ ಪದ್ಧ ತಿಯ ಪ್ರಕಾರವಾಗಿ ಸಾಕ್ಷಿಯ ಬಗ್ಗೆ ಪುರೋಹಿತನೊಂದಿಗೆ ಸಭ್ಯಗೃಹಸ್ಥರ ಸಹಿಗಳು ಆಗುವವು. ಇಷ್ಟಾದ ಮೇಲೆ ಸಿರಿವಂತರಾದ ವಧೂವರರು ಜನರಿಗೆ ಔತಣ ಮಾಡಿಸು ವರು. ಆ ಹಣವು ಸಹ ಸ್ವಾರ್ಜಿತವಾದದ್ದೇ ಇರಬೇಕು. ಅವರು ಊಟದ ಕಾಲಕ್ಕೆ ಕಟ್ಟಿಗೆಪಾತ್ರೆ ಚಮಚೆಗಳನ್ನೇ ಬಳಸುವರು.

ಅಲ್ಲಿಯ ಸ್ತ್ರೀಯರು ಆಟಗೆಸಾಮಾನುಗಳನ್ನು ಸಿದ್ಧಪಡಿಸುವರು. ತಮ್ಮ ಮಕ್ಕಳು ನಿದ್ದೆಯಿಂದ ಎಚ್ಚತ್ತಕೂಡಲೆ ಆಳಬಾರದೆಂದು ಅವರು ಕಣ್ಣು ತೆರೆದ ಕೂಡಲೆ ಕಾಣು ವಂತೆ ಆಟಗೆಸಾಮಾನುಗಳನ್ನು ಇಡುವರು.

ಜಪಾನೀ ಜನರ ಶಿಷ್ಟಾಚಾರವು ಮಿಗಿಲಾದುದು. ಯಾರಾದರೂ ಪರರ ಮನೆಗೆ ಹೋಗಿ ಬಾಗಿಲಲ್ಲಿ ನಿಂತು ಹೆಸರಿನಿಂದ ಕರೆದೊಡನೆಯೇ ಒಳಗಿದ್ದವರು ಬಂದು ಶಿರ ವಾಗಿ ಮರ್ಯಾದೆಕೊಟ್ಟು ಒಳಗೆ ಕರದೊಯ್ಯುವರು. ಬಳಿಕ ಯೋಗ್ಯತಾನುಸಾರವಾಗಿ ಚಾಪೆಯಮೇಲಾಗಲಿ ರೇಶಿಮೆಯಗಾದಿಯಮೇಲಾಗಲಿ ಕೂಡಿಸಿ ಮಾತನಾಡಿಸುವರು.

ಅವರು ಪ್ರಾತಃಕಾಲದಲ್ಲಿ ಚಹವನ್ನು ಕುಡಿದು ಬೈಲಲ್ಲಿ ಕೆಲ ಹೊತ್ತು ತಿರು ಗಾಡಿ ಬಳಿಕ ಬಂದು ಉದ್ಯೋಗದಲ್ಲಿ ತೊಡಗುವರು. ಹೂವುಗಳೇ ಅವರ ಅಲಂಕಾರ ಗಳಾಗಿರುವವು. ಮಲಗುವ ಮೊದಲು ತಲೆಗಿಂಬಿಗೆ ನಮಸ್ಕರಿಸುವ ವಾಡಿಕೆಯು ಆ ದೇಶದಲ್ಲಿರುವದು.

ಅವರು ಮಲಗುವ ಮೊದಲು ಗಾಯನವಾದನ ಮಾಡುವರು. ಆಗ್ಗೆ ಊರೆಲ್ಲ ಇಂಪಾದ ಧ್ವನಿಯಿಂದ ಸುಶ್ರಾವ್ಯವಾಗುವದು. ಊರ ಪೇಟೆಯಲ್ಲಿ ಒಂದುಸಾಲುಹೂವು ಗಳೂ ಮತ್ತೊಂದು ಸಾಲಿನಲ್ಲಿ ಪಲ್ಲೆಕಾಯಿ ಹಣ್ಣುಹಂಪಲಗಳೂ ಶೋಭಿಸುತ್ತಿರುವವು. ಮೀನು ಅನ್ನ ಚಹಗಳೇ ಅವರ ನಿತ್ಯಾಹಾರಗಳು. ಹಾಲು ಮೊಸರು ಇಲ್ಲದ್ದರಿಂದ ಚಹದ ನೀರನ್ನು ಅನ್ನಕ್ಕೆ ಉಪಯೋಗಿಸುವ ವಾಡಿಕೆಯದೆ. ಸಂಜೆಯ ಮುಂದೆಯೂ ತಿರುಗಾಡುವ ಪದ್ಧತಿಯು ಇರುವದರಿಂದ ಆಗ ಊರೇ ಬರಿದಾಗುವದು. ಬಳಿಕ ಬಂದು ಊಟ ಮಾಡುವರು.

ಅವರು ಆಳನ್ನಿಟ್ಟುಕೊಳ್ಳದೆ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವರು. ಹೊಲದ ಕೆಲಸ ತೀರಿದ ನಂತರ ಮೀನು ಹಿಡಿಯುವದಕ್ಕೆ ಹೊರಡುವರು. ಮೀನು ಹಿಡಿಯುವ ಕೆಲಸವು ಒಳ್ಳೆಯ ರಭಸದಿಂದ ನಡೆಯುವದು. ಮೀನು ಏಡಿಗಳನ್ನು ಹಿಡಿದು ಒಣಗಿಸಿ ತಮಗೆ ಇಟ್ಟುಕೊಂಡು ಪರರಾಷ್ಟ್ರಕ್ಕೆ ಸಹ ಕಳಿಸಿಕೊಡುವರು. ಅವು ಕೊಳೆಯದಂತೆಯೂ ರುಚಿಯಾಗುವಂತೆಯೂ ತಕ್ಕ ಕ್ರಮಗಳನ್ನು ಏರ್ಪಡಿಸುವರು.

ಜಪಾನೀಯರು ತಮ್ಮಲ್ಲಿಯ ವಸ್ತುಗಳನ್ನು ಉಪಯೋಗಿಸುವ ವಿಷಯವಾಗಿ ಬಹಳ ಲಕ್ಷ ಪೂರೈಸುವರು. ಅವರು ಒಳ್ಳೆಯ ನಾಗರಿಕರಾಗಿರುವರು. ನಾಗರಿಕರಲ್ಲಿರ ತಕ್ಕ ಗುಣಗಳಿಲ್ಲವೂ ಅವರಲ್ಲಿರುವವೆಂದರೆ ಅತಿಶಯೋಕ್ತಿಯಾಗದು.

ಸ್ಥಲವರ್ಣನ—" ಕಾನಪೂರ "

ಲೇಖಕ:—ವೆಂಕಟೇಶ ಗೋವಿಂದ ಷಡಟೇಸ. ಬಿ. ಎಸ್. ಖಾನಾಪೂರ. ತಾ. ಶಿರಹಟ್ಟಿ.

ಇದರ ಮೊದಲಿನ ಹೆಸರು' ಕರ್ಣಪೂರ' ಎಂಬದಾಗಿದ್ದಿತು. ಇದರ ಅಪಭ್ರಂಶವೇ ಕಾನಪೂರವೆಂದಾಗಿರುತ್ತದೆ. ಇಲ್ಲಿ ಪ್ರಸಿದ್ಧ ತೀರ್ಥವಿರುತ್ತದೆ. ಇಲ್ಲಿ ಪ್ರಸಿದ್ಧ ಬಂಟನಾದ ಕರ್ಣನಿರುತ್ತಿದ್ದನು. ಭಾಗೀರಥಿಯಲ್ಲಿ 'ಕರ್ಣತೀರ್ಥ' ವೆಂಬ ಪ್ರಸಿದ್ಧ ತೀರ್ಥವಿರುತ್ತದೆ. ಇದಂತೂ ಪುರಾಣದ ಮಾತಾಯಿತು. ಇನ್ನು ಐತಿಹಾಸಿಕ ದೃಷ್ಟಿಯಿಂದ ವಿಚಾರಿಸುವಾ.

ಅಯೋಧ್ಯೆಯ ನವಾಬನಾದ ಅಸಫ ಉದ್ದೌಲನಿಗೂ, ಈಸ್ಟ ಇಂಡಿಯಾ ಕಂಪನಿಯವರಿಗೂ ಇ. ಸ. ೧೭೭೫ರಲ್ಲಿ ಫೈಜಾಬಾದದಲ್ಲಾದ ಒಡಂಬಡಿಕೆಯಿಂದ ನವಾಬನು ಸ್ವರಕ್ಷಣಕ್ಕಾಗಿ ಇಂಗ್ಲಿಷರ ದಂಡನ್ನು ಇಟ್ಟುಕೊಳ್ಳಬೇಕಾಯಿತು. ಅಂದಿನಿಂದ 'ಕಾನಪೂರ'ವು ವಾಯವ್ಯ ಪ್ರಾಂತದ ಹಾಗೂ ಇಂಗ್ಲಿಷ ಸರಕಾರದ ದಂಡಿನ ಮುಖ್ಯ ಸ್ಥಳವಾಯಿತು. ನಗರದ ತುಂಬ ಗಂಗಾನದಿಯ ಪ್ರಚಂಡ ಕಾಲಿವೆಯನ್ನು ಕಟ್ಟಿರುತ್ತಾರೆ. ರೇಲ್ವೆಯಾದಂದಿನಿಂದ ಇಲ್ಲಿ ವ್ಯಾಪಾರವು ಹೆಚ್ಚಾಗುತ್ತ ನಡೆದಿದೆ.

'ಕಾನಪೂರ'ದ ಪ್ರಸಿದ್ಧಿಗೆ ಗಿಲಚಿನೆಯ ಇಸ್ವಿಯೇ ಮುಖ್ಯ ಕಾರಣವು. ಆ ವರ್ಷ ಉತ್ತರ ಹಿಂದುಸ್ತಾನದಲ್ಲಾದ ಭಯಂಕರ ಪ್ರಳಯದಲ್ಲಿ " ಕಾಲಚಕ್ರನ ವಿಚಿತ್ರ ಮಹಿಮೆ ! ಅತ್ಯಂತ ತ್ರಸ್ತವಾದ ! ಮೂಲತಃ ನಿರುಪದ್ರವಿಯಾದ ಮಾನವ ಸ್ವಭಾವದೊಳಗೆ ಕ್ಷಣದಲ್ಲಿ ದೃಗ್ಗೋಚರವಾಗುವ ಭಯಂಕರ ರುದ್ರಸ್ವರೂಪ ! ಅತಿಲೋಭದಿಂದುಂಟಾಗುವ ವಿಪನ್ನಾವಸ್ಥೆ ! ಮತ್ತು 'ಲೋಭ ಮೂಲಾನಿ ಪಾಪಾನಿ' ಎಂಬ ಸದ್ವಚನದ ಸತ್ಯಾನುಭವ" ಮುಂತಾದ ಮಹತ್ವದ ಅನೇಕ ಸಂಗತಿಗಳು ಪ್ರಕಟವಾದವು. ಆದಾಗಲೂ ಈ ಭಯಂಕರ ಬಂಡಾಯದಿಂದ ಮರೆತು ಹೋದ ಭಾರತೀಯರ ಕ್ಷಾತ್ರ ತೇಜವು ಕೋಲ್ಮಿಂಚಿನಂತೆ ಮಿಂಚಿ ಅರಕ್ಷಣದಲ್ಲಿಯೇ ಅದೃಶ್ಯವಾಗಿಹೋಯಿತು !!!

ಈ ಬಂಡಾಯದಲ್ಲಿ ಶ್ರೀಮಂತ ಬಾಜೀರಾಯನ ದತ್ತಕ ಪುತ್ರನಾದ ಧೊಂಡೋಪಂತ ಊರ್ಫ ನಾನಾಸಾಹೇಬನ ವಿಶೇಷ ಸಂಬಂಧವಿದ್ದುದರಿಂದ ಹಾಗೂ ವಿಶೇಷತಃ ಇದರಲ್ಲಿ ನಡೆದ ಸಂಗತಿಗಳು ರಾಜದುರುಂಧರರುಸಹ ಮನನಮಾಡುವಂಥ ಅನಂತ ತತ್ವಗಳು ಅಂತರ್ಭೂತವಾದ್ದರಿಂದ ಈ ಸಮಗ್ರ ಇತಿಹಾಸವು ವಿಚಾರಾರ್ಹ

ವಿರುತ್ತದೆ. ನಾನಾ ಸಾಹೇಬನು ಇಂಗ್ಲೀಷರ ವಿರುದ್ಧವಾದ ಕಾರಣವನ್ನು ಸಹ ವಿಚಾರ ಮಾಡುವಂತಹದಿರುತ್ತದೆ. ಬಾಜೀರಾಯನು ಇ. ಸ. ೧೮೧೮ರಲ್ಲಿ ತನ್ನ ಎಲ್ಲ ರಾಜ್ಯವನ್ನು ಇಂಗ್ಲೀಷರಿಗೊಪ್ಪಿಸಿ 'ಬ್ರಹ್ಮಾವರ್ತ' ಕ್ಷೇತ್ರದಲ್ಲಿ ಹರಿ ಹರಿ ಎನ್ನುತ್ತ ಕಾಲ ಕಳೆಯ ಹತ್ತಿದನು. ಆದರೂ ಕೂಡಾ ಬಾಜೀರಾಯನು ಅಫಗಾಣಿಸ್ತಾನದ ಯುದ್ಧ ದಲ್ಲಿ ಇಂಗ್ರಜ ಸರಕಾರಕ್ಕೆ ೬ ಲಕ್ಷ ರೂಪಾಯಿಗಳ ಸಹಾಯ ಮಾಡಿದಾಗಲೂ ಪಂಜಾ ಬದ ಶೀಖರ ಯುದ್ಧದಲ್ಲಿ ಸಾವಿರ ಸ್ವಾರರನ್ನೂ ಸಾವಿರ ದಂಡಾಳುಗಳನ್ನೂ ಇಂಗ್ರಜ ಸರಕಾರಕ್ಕೆ ಕೊಡುವದಕ್ಕೆ ಒಪ್ಪಿಕೊಂಡರೂ ತನ್ನ ಎಲ್ಲ ರಾಜ್ಯವನ್ನು ಕೊಟ್ಟು ಮೇಲೆ ಹೀಗೆ ಸಹಾಯ ಮಾಡಿದಾಗಲೂ ಇಂಥ ಮಗನಿಗೆ ಪೇನಶನ್ ಕೊಡಬಾರದೆಂದರೇನು, ಸಾಮಾನ್ಯಮಾತೇ?

ಬಾಜೀರಾಯನ ಮರಣ ಕಾಲಕ್ಕೆ ಅವನ ಹತ್ತರ ೧೬ ಲಕ್ಷ ರೂಪಾಯಿಗಳ ಸಿಲ್ಕು ಇತ್ತು. ಸರಕಾರಿ ಖಜಾನೆಯಲ್ಲಿ ಮತ್ತು ೧೦ ಲಕ್ಷ ರೂಪಾಯಿಗಳ ಮುತ್ತು ರತ್ನಾದಿಗಳೂ, ೩ ಲಕ್ಷ ರೂಪಾಯಿಗಳ ವೋಹರೂ, ೮೦ ಸಾವಿರ ರೂಪಾಯಿಗಳ ಚಿನ್ನ, ೨೦ ಸಾವಿರ ರೂಪಾಯಿಗಳ ಬೆಳ್ಳಿ, ಇಷ್ಟೆಲ್ಲ ಇದ್ದವು. ಮಿ। ವೋರ್ಲಿಂಡ ಎಂಬವನು ಆಗ ಕಾನಪುರದ ಕಲೆಕ್ಟರನಿದ್ದನು. ಇವನ ಕಡೆಗೆ ಬಾಜೀರಾಯನ ಪೇನ್‌ಶನ್‌ದ ವ್ಯವಸ್ಥೆ ಮಾಡುವ ಕೆಲಸವಿತ್ತು. ಬಾಜೀರಾಯನ ಶೇಷವೈಭವವೇ ಇವನ ವಂಶದವ ರಿಗೆ ಆಜನ್ಮ ಸಾಲುವಷ್ಟಿರುತ್ತದೆಂಬ ಕಲ್ಪನೆಯಿಂದ ಆ ಕಲೆಕ್ಟರನು ಸರಕಾರದ ಖಜಾನೆಗೆ ೮ ಲಕ್ಷ ರೂಪಾಯಿಗಳನ್ನು ಹಾಕಿದನು.

ಬಾಜೀರಾಯನ ಮುಖ್ಯ ಮಂತ್ರಿಯಾದ ರಾಮಚಂದ್ರಪಂತ ಸುಭೇದಾರನು ನಾನಾ ಸಾಹೇಬನಿಗೆ ಪೇನ್‌ಶನ್ ನಡೆಯುವದಕ್ಕಾಗಿ ತಾ। ೧೯ ಡಿಶಂಬರ ೧೮೧೩ರಲ್ಲಿ ಪುನಃ ಬಾರ್ಡ ಡಾಲಹೌಸಿಯಕಡೆಗೆ ವಿನಂತಿ ಅರ್ಜಿಯನ್ನು ಮಾಡಿದನು. ಅವನಾದರೂ ಇದರ ವಿಚಾರ ಮಾಡಲಿಲ್ಲ. ಮುಂದೆ ತಾ। ೪ ಮೇ ೧೮೫೩ರಲ್ಲಿ ನಾನಾ ಸಾಹೇಬನ ಅಧಿಕಾ ರವು ಪೆನ್‌ಶನ್ನಿನ ಮೇಲಿಲ್ಲಿಂದೂ ಹಾಗೂ ಪೇನ್‌ಶನ್ ದೊರಿಯಲಾರದೆಂದೂ ಗೊತ್ತಾ ಯಿತು. ಇದರಿಂದ ನಾನಾಸಾಹೇಬನಿಗೆ ಬಹಳೇ ಕೆಡಕೆನಿಸಿ ಕೊನೆಯ ಉಪಾಯ ವೆಂದು ಅಜಮುಲ್ಲಾಖಾನನ್ನು ವಿಲಾಯತಿಗೆ ಕಳುಹಿಸಿ ಮಿ। ಬಿಡಲ್ ಎಂಬ ಯುರೋ ಪಿಯನ್ ಉದಾರ ಗೃಹಸ್ಥರ ಮುಖಾಂತರ ಬಹು ಪ್ರಯತ್ನ ಮಾಡಿ ನೋಡಿದನು. ಅಲ್ಲಿಯೂ ಇವನಿಗೆ ನಕಾರಾತ್ಮತೆಗಳಿಂದಲೆ ಜಯವಾಯಿತು! ಹೀಗೆ ಆಶಾಭಂಗಿತ ನಾದ ನಾನಾಸಾಹೇಬನಿಗೆ—ನಮ್ಮ ಜನರ ದುರ್ದೈವದಿಂದ ಬಂಡಾಯದಂತಹ ಬಿರು ಗಾಳಿಯಲ್ಲಿ ತನ್ನ ಕಲಸವನ್ನು ಸಾಧಿಸಿಕೊಳ್ಳಲು ಅನುವು ದೊರೆಯಿತು! ಆಗ ಇವನು ಕಾನಪುರದಲ್ಲಿ ನಡೆಸಿದ ಅನನ್ವಿತ ಕೃತ್ಯಗಳು ಸರ್ವಶ್ರುತವೇ ಇರುತ್ತವೆ!

ನೂರಾರು ಯೂರೋಪಿಯನ್ನರ ವಧೆಯ ಹೃದಯದ್ರಾವಕ ಸುಗತಿಯನ್ನು ಕೇಳಿ ಹಾವಲಾಕ್‌ನು ಪ್ರಚಂಡ ಸೈನ್ಯಸಮೇತನಾಗಿ ಬಂದಾಗ ನಾನಾಸಾಹೇಬನು ಪಾರಾಗಿ ಓಡಿ ಬಂದದ್ದು ಅವನ ದೂರದರ್ಶಿತ್ವವನ್ನು ತೋರಿಸುತ್ತದೆ.

Pg no 19 to 22

Missing

ಪ್ಲೇಟೋ ನ ತತ್ವಜ್ಞಾನ

ಲೇಖಕ:— ದೇ. ಗೋ. ಜೋಶಿ. ಅ. ವೆ. ಏ. ಹೈ. ಸ್ಕೂಲ, ಗುಡಗೇರಿ.

ಸಾಕ್ರೆಟಿಸನ ತರುವಾಯ ತಮ್ಮ ತಮ್ಮ ಬುದ್ಧಿಯಂತೆ ಆತನ ಮತವನ್ನು ಪ್ರಸಾ ಮಾಡಿದವರಲ್ಲಿ ಪ್ಲೇಟೋನು ಅತಿಶಯ ಪ್ರಸಿದ್ಧನು. ಇವನು ಕ್ರಿ. ಶ. ಪೂ. ೪೨೭ ರಲ್ಲಿ ಅಥೆನ್ಸ ಪಟ್ಟಣದಲ್ಲಿ ಕುಲೀನ ಸುಸಂಪನ್ನ ಮನೆತನದೊಳಗೆ ಹುಟ್ಟಿದನು. ಈ ಸಮಯಕ್ಕೆ ಇವನಿಗೆ ಉತ್ತಮ ಶಿಕ್ಷಣವು ದೊರೆಯಿತು. ಆದುದರಿಂದ ಸ್ವಾಭಾ ವಿಕವಾಗಿಯೇ ಆತನ ಮಾನಸಿಕ ಶಕ್ತಿಯು ವಿಕಸಿತವಾಯಿತು. ಅಥೀನಿಯನ್ ಲೋಕ ಸತ್ತಾತ್ಮಕ ರಾಜ್ಯ ಪದ್ಧತಿಯ ಅನಿಷ್ಟ ಪರಿಣಾಮಗಳು ಈತನಿಗೆ ಕಂಡುಬರಹತ್ತಿದವು. ಇದಕ್ಕೆ ಅವನು ತೊಂದರೆಗೊಂಡು ಏಕಾಂತ ಸ್ಥಳದಲ್ಲಿ ತತ್ವಜ್ಞಾನವನ್ನು ದೊರಕಿಸುವ ನಿಶ್ಚಯ ಮಾಡಿದನು. ಮುಂಚೆ ಸಾಕ್ರೆಟಿಸನ ವಾದವಿವಾದಗಳನ್ನು ಕೇಳುವದಕ್ಕೆ ಪ್ರತಿ ದಿವಸ ಅವನ ಕಡೆಗೆ ಹೋಗುತ್ತಿದ್ದನು. ಅವನು ಪ್ಲೇಟೋನ ಅಗಾಧ ಮಾನ ಸಿಕ ಶಕ್ತಿ ಮತ್ತು ಜ್ಞಾನಪ್ರಾಪ್ತಿಯ ಉತ್ಸುಕತೆ ಇವುಗಳನ್ನು ನೋಡಿ, ಸಾಕ್ರೆ ಟಿಸನ ಪ್ರೇಮವು ಈತನ ಮೇಲೆ ವಿಶೇಷವಾಯಿತು. ಮತ್ತು ಆತನ ಶಿಷ್ಯರಲ್ಲಿ ಪ್ಲೇಟೋನು ಅಗ್ರಗಣ್ಯನಾದನು. ಸಾಕ್ರೆಟಿಸನ ವಾದವಿವಾದದ ಮತ್ತು ಉಪದೇಶದ ಪರಿಣಾಮವು ಈತನ ಮೇಲೆ ಚೆನ್ನಾಗಿ ಆಯಿತು. ಮತ್ತು ಎಲ್ಲ ಶಿಷ್ಯರಿಗಿಂತ ಈತನಿಗೆ ಸಾಕ್ರೆಟಿಸನ ಮತದ ನಿಜವಾದ ಸ್ವರೂಪವು ಚೆನ್ನಾಗಿ ತಿಳಿಯಿತು. ಪ್ಲೇಟೋನು ಮೊದಲಿನಿಂದಲೇ ಸಾಕ್ರೆಟಿಸನಿಗೆ ಮಾನಕೊಡುತ್ತಿದ್ದನು. ಸಾಕ್ರೆಟಿಸನ ಅಂತ್ಯ ಕಾಲಕ್ಕೆ ಆತನ ಧೈರ್ಯ ಮತ್ತು ಸತ್ಯಪ್ರೀತಿ ಇವುಗಳನ್ನು ನೋಡಿ, ಆತನ ವಿಷಯ ಕ್ಕಿದ್ದ ಪ್ಲೇಟೋನ ಪೂಜ್ಯ ಬುದ್ಧಿಯು ಬಹಳ ಹೆಚ್ಚಿತು; ಮತ್ತು ಅಥೆನ್ಸದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗಳನ್ನು ನೋಡಿ, ಮೊದಲಿಗಿಂತ ಹೆಚ್ಚು ತಿರಸ್ಕಾರವು ಹುಟ್ಟಿತು.

ಸಾಕ್ರೆಟಿಸನು ಮರಣಹೊಂದಿದ ಮೇಲೆ ಹತ್ತು ವರ್ಷಗಳ ವರೆಗೆ ಇಜಿಪ್ತ, ಸಿಸಲಿ ಮುಂತಾದ ಅನೇಕ ದೇಶಗಳ ಜನರ ನಡೆನುಡಿಗಳನ್ನು ನೋಡಿ, ಪುನಃ ಕ್ರಿ. ಶ. ಪೂ. ೩೯೯ ರಲ್ಲಿ ಅಥೆನ್ಸ ಪಟ್ಟಣಕ್ಕೆ ಬಂದನು. ತತ್ವಜ್ಞಾನದ ವಿಷಯಕ್ಕೆ ಉಪ ನ್ಯಾಸಗಳನ್ನು ಕೊಡಹತ್ತಿದನು. ಅಥೆನ್ಸ ಪಟ್ಟಣದ ಹೊರಗೆ ತನ್ನ ತೋಟದಲ್ಲಿ ತತ್ವ ಜ್ಞಾನವನ್ನು ಕಲಿಸಹತ್ತಿದನು. ಮುಂದೆ ಇದೇ ಸ್ಥಳದಲ್ಲಿ "ತತ್ವವಿದ್ಯಾಲಯ" ವನ್ನು ಸ್ಥಾಪಿಸಿದನು. ಮುಂದೆ ಈ ವಿದ್ಯಾಲಯವು ಎಷ್ಟೊ ವರ್ಷಗಳ ವರೆಗೆ "ಅಕ್ಯಾಡೆಮಿ" ಎಂಬ ಹೆಸರಿನಿಂದ ತತ್ವಜ್ಞಾನದ ತವರುಮನೆಯಾಗಿತ್ತು. ಈ ವಿದ್ಯಾಲಯವು ಸ್ಥಾಪಿತ

ಷಯಗಳನ್ನು ಕಲಿಸುತ್ತಿದ್ದರು. ನಾಲ್ಕೂ ಕಡೆಯಂತೆ ಪರೀಕ್ಷೆ ತೆಗೆದುಕೊಳ್ಳುವ ಪದ್ಧತಿಯೂ ನಮ್ಮಲ್ಲಿತ್ತು. ಪರೀಕ್ಷೆಯೆಂದರೆ ಅಳತೆಮಾಡುವದು. ಅಕ್ಕಿಯನ್ನು ಶೇರಿಂದ ಅಳೆಯುವಂತೆ ವಿದ್ಯೆಯನ್ನು ಪರೀಕ್ಷೆಯಿಂದ ಅಳೆಯುವ ರೂಢಿ ಬಿದ್ದದೆ.

ಅಳತೆಯಾಗದ ವಿದ್ಯೆ ಪರ್ವತದಷ್ಟಿದ್ದರೂ ಅದಕ್ಕೆ ಕಾಸಿನಬೆಲೆ ಬರುವದಿಲ್ಲ. ಜಗಪ್ರಸಿದ್ಧ ರವೀಂದ್ರನಾಥರಿಗೆ ಇದಕ್ಕಾಗಿಯೇ ಕಚೇರಿಯ ಕಾರಕೂನನ ಚಾಕರಿ ಸೂಡ ದೊರೆಯದೇಹೋಯಿತು. ವಿದ್ಯೆ ಇಲ್ಲದಿದ್ದರೆ ಇಲ್ಲ, ಅಳತೆಯ ಕಾಗದ ತೋರಿಸಲೇಬೇಕು. ಅಳತೆಯ ಕಾಗದವೆಂದರೆ ಸರ್ಟಿಫಿಕೀಟು. ಅದು ದೊರೆಯುವದು ಪರೀಕ್ಷೆಯಿಂದ. ಆದಕಾರಣ ಪರೀಕ್ಷೆಗಿಷ್ಟು ಬೆಲೆ ಹೆಚ್ಚಾಗಿದೆ.

ನಮ್ಮ ಚಿತ್ರಪರೀಕ್ಷೆಯಲ್ಲಿ ಓಡಿಹೋಗುವ ಕುದುರೆಯನ್ನು ತೆಗೆಯುವದಕ್ಕೆ ಹೇಳಿದ್ದರು. ಕುದುರೆ ಓಡುತ್ತ ಇದ್ದರೆ, ತೆಗೆಯುವದು ಹೇಗೆಂದು ನಮಗೆಲ್ಲ ಯೋಚನೆ ಗುಟಾಯಿತು. ಪರೀಕ್ಷಕರನ್ನು ಹೀಗೆ ಒಂದು ಸಲ ವಿಚಾರಿಸಬೇಕೆಂದು ಮಾಡಲು ಸ್ಥೈರ್ಯವಾಗಲಿಲ್ಲ. ಏನು ಆಶ್ಚರ್ಯವೋ ನೋಡಿರಿ! ವಿದ್ಯಾರ್ಥಿಯಾಗಿದ್ದಾಗ ನಮಗೆ ನೇವರ ಅಂಜಿಕೆ ಕೂಡ ಇರಲಿಲ್ಲ. ಪರೀಕ್ಷೆ, ಪರೀಕ್ಷಕರೆಂದರೆ ಎದೆಯೊಡೆದು ನೀರಾಗುತ್ತಿದ್ದಿತು. ಅದೇ ಅಂಜಿಕೆಯೇ ಇನ್ನೂ ಉಳಿದಿದೆ. ಕಾಸೆರಡುಕಾಸು ನಿಂತು ತಲೆತಿರುಗಿ ಬೀಳುವ ಪ್ರಸಂಗಬಂದರೂ ಪರೀಕ್ಷಕರೆದುರಿಗೆ ಕುಳಿತುಕೊಳ್ಳಲು ಸಹ ಧೈರ್ಯವಾಗುವ ಇಲ್ಲ. ಅವರಿಗೂ ದಯೆಬರುವದಿಲ್ಲ. ಬಿಕ್ಕಿನ ಶೌರ್ಯ ಇಲಿಯ ಮೇಲೆ. ಮೆಣಸಿನ ಕಾಯಿಯನ್ನು ದೀರ್ಘ ವರ್ತುಲಾಕಾರವಾಗಿ ತೆಗೆಯುವ ಚಿತ್ರಕಲಾಕೋವಿದರನೇಕರು ನಮ್ಮ ವರ್ಗದಲ್ಲಿದ್ದರು. ಪೆನ್ಸಿಲಿನಿಂದ ಗೆರೆಹಾಕಿ ರಬ್ಬರಿನಿಂದ ತಿಕ್ಕಿ ಬೇಸರಪಟ್ಟು ಕಡೆಗೊಬ್ಬರು ಚಿತ್ರದ ಕಾಗದವನ್ನೊಯ್ದು ಪರೀಕ್ಷಕರ ಕೈಯಲ್ಲಿ ಕೊಟ್ಟರು. ನಡುವೆ ಒಂದು ದೀರ್ಘವರ್ತುಲ, ಅದರ ಕೆಳಗೆ ಉದ್ದವಾಗಿ ನಾಲ್ಕು ಜೋಡು ಗೆರೆಗಳು, ಎಡಗಡೆ ಚಿಕ್ಕದೊಂದು ತ್ರಿಕೋನಾಕೃತಿ, ಬಲಗಡೆ ಬಾರಕೋಲು, ಇದರ ಹೆಸರು ಓಡುವ ಕುದುರೆ, ವಿಚಿತ್ರವೆಂದರೆ ಹೀಗೆಯೇ ಇನ್ನೇನೂ ಇಲ್ಲ. ಮೊನ್ನೆ ಪಾಠನಡೆದಾಗ ಒಬ್ಬ ಹುಡುಗ, ನಮ್ಮ ಮಾತಿಗೆ, ಏನು ಹೀಗೆ ಹೇಳುವಿರಿ. ಪುಸ್ತಕದಲ್ಲಿ ಬೇರೆ ಇದೆ ಎಂದು ಹೇಳಿದ. ಕಾಲವು ಕೂಡ ವಿಚಿತ್ರವಾಗಿ ಹೋಗಿದೆ. ಗುರುಹಿರಿಯರಲ್ಲಿ ವಿಶ್ವಾಸವಿಲ್ಲ. ಪುಸ್ತಕತೆಗೆದು ನೋಡಿದರೆ ನಾನು ಹೇಳಿದಹಾಗೆಯೇ ಇತ್ತು. ಅದರಲ್ಲಿದ್ದುದನ್ನೇ ನಾವು ಹೇಳುವದು ಬೇರೆ ಇರುವ ಬಗೆಹೇಗೆ ? ಕೈ ಎತ್ತಿ ಬೇರೆ ಏನಿದೆ ನಿನ್ನ ತಲೆ ಎಂದು ಗದರಿಸಿದೆ. ಹುಡುಗ ಮುಂದಕ್ಕೆ ಬಂದು ಚಿತ್ರ ತೋರಿಸಿದ. ನನಗೊಳ್ಳೇ ಕೋಪಬಂತು. ಅದರೂ ಚಿಕ್ಕ ಮಗು, ಅದರ ಕೂಡ ಏನು ? ಎಂದು ನೀನೇ ನೋಡು ಎಂದು ಹೇಳಿದೆ. ಬೆನ್ನ ಮೇಲೆ ಕುಳಿತಿದ್ದಾನೆ ಎಂದು ಹೇಳಿ ಮತ್ತೆ ಚಿತ್ರತೋರಿಸಿದ. ಆಗಲೂ ನನಗೆ ತಿಳಿಯಲಿಲ್ಲ ಹೋಗು ಎಂದು ಬೆದರಿಸಿದೆ. ಹೆಗಲ ಮೇಲೆ ಕುಳ್ಳಿರಿಸಿಕೊಂಡನೆಂದು

ಬರೆದಿದೆ ಎಂದು ಹೇಳಿ ಹುಡುಗ ಹಿಂದಕ್ಕೆ ಸರಿದುನಿಂತ. ಕುರುಡನು ಹೆಗಲ ಮೇಲೆ ಹೆಳವನನ್ನು ಕುಳ್ಳಿರಿಸಿಕೊಂಡನೆಂದು ಪುಸ್ತಕದಲ್ಲಿ ಬರೆದಿದೆ. (೨ ಪು. ೨೧ನೇ ಪಾ.) ಚಿತ್ರದಲ್ಲಿ ಕುರುಡನ ಬೆನ್ನು ಮೇಲೆ ಹೆಳವನಿದ್ದಾನೆ. ನಮಗಾಗ ಇಷ್ಟು ತಿಳಿಯಲಿಲ್ಲ. ಕುರುಡನ ಪಾತು ಹೇಳುವಾಗ ಶಿಕ್ಷಕನೂ ಕುರುಡನಾಗಿದ್ದರೆ ಹೇಗೆ !

ಇನ್ನು ಹೇಳುವದು ಪಂತಿಯ ಪಾತು, ಪಂತಿಯಲ್ಲಿ ಕಣ್ಣು ಮುಚ್ಚಿಕೊಂಡಿದ್ದರೆ ನಡೆಯುವದಿಲ್ಲ. ಹುಡುಗರೆಲ್ಲ ಕೂಡಿ ಕಡಬು ಕಲಸನ್ನ ತಿಂದರೆಂದು ಕತೆಗಾರ ಬರೆದಿದ್ದಾನೆ. ಚಿತ್ರಗಾರನು ಹುಡುಗರೆದುರಿಗೆ ಹಣ್ಣಿನ ಬುಟ್ಟಿಯನ್ನಿಟ್ಟಿದ್ದಾನೆ. ಯಾರೋ ಒಬ್ಬರು ಹುಡುಗರ ಹಿಂದೆ ಕುಳಿತು, ನನಗೊಂದು ತಾ, ಎಂದು ಕೇಳುತ್ತಿದ್ದಾರೆ, ಪಾಪ, ಅವರ ಸಮಾಚಾರವೇ ಕತೆಯಲ್ಲಿಲ್ಲ. (೧೧ನೇ ಪು. ೧೧ನೇ ಪಾ.)

ಕಣ್ಣು ಮುಚ್ಚಾಣಿಕೆಯ ಆಟದಲ್ಲಿ ಕಳ್ಳಿ ಆಸವಳು ಸುಂದರಿ, ಸುಂದರಿಯು ಕಣ್ಣು ಮುಚ್ಚಿಸಿಕೊಳ್ಳುವದು ನ್ಯಾಯವಾದ ಮಾತು. ಅದೆಲ್ಲಬಿಟ್ಟು ರಾಧೆಯು ಬೀದಿಯಲ್ಲಾಡುವ ಅದಾವದೋ ಹುಡುಗನನ್ನು ಹಿಡಿತಂದು ಕಣ್ಣುಮುಚ್ಚಿದ್ದಾಳೆ. ಆ ಹುಡುಗ ಆಟಕ್ಕೆ ಸಹ ಬಂದವನಲ್ಲ. (೧೩ನೇ ಪು. ೧೬ನೇ ಪಾ.)

ಸಿಟ್ಟಿನ ಎಲ್ಲವ್ವನ ಪಾಠಿನಲ್ಲಿ ಹಾವು ಹಗ್ಗದಗುಂಟ ಇಳಿದು ತೊಟ್ಟಿಲ ತೋಳ ಮೇಲೆ ಬಂತು ಎಂದು ಬರೆದಿದೆ. ಚಿತ್ರದಲ್ಲಿ ಹಗ್ಗವೂ ಇಲ್ಲ ತೊಟ್ಟಿಲವೂ ಇಲ್ಲ. ಎಲ್ಲವ್ವನ ಹನ್ನೆರಡು ವರ್ಷದ ಕೂಸು ಹಾಸಿಗೆಯ ಮೇಲೆ ಮಲಗಿದೆ. (೨ ಪು. ೧೬ನೇ ಪಾ.)

ಗಿಡವನ್ನು ಸವರುವದು ಬೇರೆ, ಕಚ್ಚುಹಾಕುವದು ಬೇರೆಯಾದರೂ ಕಚ್ಚು ಹಾಕಿದ್ದಕ್ಕೆ ಸವರಿದನೆಂದು ಹೇಳಿದ್ದಾರೆ. (೩ನೇ ಪು. ೨೩ನೇ ಪಾ.)

ಎಲ್ಲರೂ ಅಧಿಕಾರ ನಡೆಸುತ್ತಾರೆಂದು ಚಿತ್ರಗಾರನೂ ಶಂಕರ ಸೀತೆಯರ ಮೇಲೆ ತನ್ನ ಅಧಿಕಾರ ನಡೆಸಿದ್ದಾರೆ. ತಾಯಿಯ ಹತ್ತರ ಹೋಗುವ ಹುಡುಗರನ್ನು ಹಿಡಿದೆಳೆತಂದು, ಅಂಜಿಕೆ ಬರುತ್ತದೆಂದರೂ ಕೇಳದೆ, ಅವರಪ್ಪನೆದುರಿಗೊಯ್ದು ನಿಲ್ಲಿಸುವದಕ್ಕೆ ಇವನಿಗೆ ಯಾರು ಹೇಳಿದರು ? (೩ನೇ ಪು. ೨೬ನೇ ಪಾಠ) ರೊಕ್ಕ ರೂಪಾಯಿ ದೊರಕಿಸುವದಕ್ಕೋ ಭೂಮಿ ಸೀಮೆ ಗಳಿಸುವದಕ್ಕೋ ಸುಳ್ಳು ಹೇಳುತ್ತಾರೆ. ಅದೇನೂ ಮಹತ್ವದ ಮಾತಲ್ಲ. ಅದಾದರೂ ಇಲ್ಲದಲೆ ಸುಮ್ಮನೆ ಸುಳ್ಳುಹೇಳುವದೆಂದರೆ, ಸ್ವಲ್ಪ ಅನ್ಯಾಯವಾದ ಮಾತು. ಬಾಲಾಗಸಿಯು ಗಿಡದೊಳಗೆ ಶಿಕ್ಕು ಪಟವು ತಲೆಕೆಳಗಾಗಿ ಜೋತಾಡಹತ್ತಿತೆಂದು ಕತೆಗಾರರು ಹೇಳುತ್ತಾರೆ. ಇವರ ಮಾತು ಎಷ್ಟರಮಟ್ಟಿಗೆ ನಿಜವಾಗಿದೆ ನೋಡಿರಿ ! ಗಿಡದಲ್ಲಿ ಪಟವು ಸಿಗಬಾರದೆಂದು ಚಿತ್ರಗಾರನು ಗಿಡದಷ್ಟೇ ಪಟವನ್ನು ಮಾಡಿದ್ದಾನೆ. ಒಂದುವೇಳೆ ಸಿಕ್ಕರೂ ಜೋತಾಡದಿರಲೆಂದು, ಗಿಡದ ಎತ್ತರ

ಕ್ಕಿಂತಲೂ, ಹೆಚ್ಚಾಗಿ ಬಾಲಾಗಸಿಯನ್ನು ಕಟ್ಟಿದ್ದಾನೆ. ಇಷ್ಟಾದಮೇಲೆ ಪಟವು ಗಿಡ ಬಲ್ಲಿ ಸಿಕ್ಕು ಜೋತಾಡಬಹುದೇ ? (೩ನೇ ಪು. ೩ಗನೇ ಪಾಠ)

ಹಾಗೆಯೇ ತನ್ನ ಈ ಉಪನೇತ್ರ (ಚಾಳೀಸ) ವನ್ನು ಹಿಡಿದಿರು ಎಂದು ಧರ್ಮೋಪದೇಶಕನು ಅದನ್ನು ಮೂಲನಿವಾಸಿಗೆ ಕೊಡುತ್ತಿರುವದು ಸ್ಪಷ್ಟವಾಗಿ ಕಾಣುತ್ತಿದ್ದರೂ ಕತೆಗಾರರಿಗೆ ಅದರ ಲಕ್ಷವೇ ಇಲ್ಲ. ತಿಗಟಿ ಪಗಟಿ ಎಂದು ತಮ್ಮ ಪುರಾಣವನ್ನೇ ಹೇಳುತ್ತಿದ್ದಾರೆ. [೩ನೇ ಪು. ೪೦ನೇ ಪಾಠ.]

ಶಿಕ್ಷಕ ಪರೀಕ್ಷಕರಲ್ಲಿ, ವೈದ್ಯ ಡಾಕ್ಟರರಲ್ಲಿ ತಾಳಮೇಳವಿಲ್ಲೆಂದು ಜನರು ಮಾತಾಡುತ್ತಾರೆ. ಆದರೆ ಕತೆಗಾರ ಚಿತ್ರಗಾರರ ಮೇಳತಪ್ಪಿ ಎಷ್ಟು ದಿವಸವಾಯಿತೋ ತಿಳಿಯುಲಿಲ್ಲ. ನನುಗೆ ತಿಳಿದರೇನು ತಿಳಿಯದೆ ಹೋದರೇನು. ಬಿಡಿರಿ. ಅದಾರೋ ಪರದೇಶಿ ಚಿತ್ರಗಾರರನ್ನು ಹುಡುಕಿತಂದು, ಮೂರ್ಖನೆಂದು ಬೈದು ಕಳಿಸಿದಶಿಕ್ಷಣ ವೀವಮಾಂಸೆಯ ಕರ್ತರಂಥ ಜನಗಳಿಗೂ ಈ ವಿಷಯ ತಿಳಿಯದೆ ಹೋಗಬೇಕೆ ?(ಶಿ. ವೀ. ಪು.೭೭)

ದೊಡ್ಡವರ ಸಮಾಚಾರವು ದೊಡ್ಡವರಿಗಿರಲಿ. ನಾವಿಷ್ಟರಲ್ಲೇ ಇರೋಣ. ಕ್ರಮಿಕ ಪುಸ್ತಕದಲ್ಲಿಯ ಚಿತ್ರಕತೆಗಳಲ್ಲಿ ಮೇಳವಾದರೆ ಸಾಕು.

ಬಣ್ಣದ ಚಿತ್ರವಿರಬೇಕೆಂದು ಬರೆಯಬಾರದೆ? ಇದೆಂಥ ಬೇಡಿಕೆ ಎಂದು ನೀವು ಅನ್ನಬಹುದು. ಅದೇನೋ ಹೇಳುತ್ತಾರಲ್ಲ. ಒಳ್ಳೊಳ್ಳೇ ದೇವರು ಉರುಳಿ ಹೋಗುವ ಮುಂದೆ ಕಳ್ಳಯೊಳಗಿನ ಕಲ್ಲಪ್ಪ ಕಾಯಿ ಬೇಡಿದನಂತೆ ! ರಾಜಾಧಿರಾಜರಾದ ಪಂಚಮ ಜಾರ್ಜ ಬಾದಶಹರೇ ಬಣ್ಣವಿಲ್ಲದೆ ನಿಂತಿರುವಾಗ ಕೂಲಿಯ ಶೇಖಮಹಮ್ಮದನ ಮುಖಕ್ಕೆ ಯಾರು ಬಣ್ಣ ಹಚ್ಚಬೇಕು ?

ಹಿಂದಕ್ಕೊಮ್ಮೆ ವಿಜಾಪುರದ ನವಕರ್ನಾಟಕಕಾರರು ಈಗಿನ ಕ್ರಮಿಕ ಪುಸ್ತಕವನ್ನೆಲ್ಲ ಬದಲುಮಾಡುವ ವಿಷಯವಾಗಿ ಬರೆದಿದ್ದರು. ಪತ್ರಕಾರರ ಕೆಲಸ, ಬರೆಯುವದು ಬರೆದಿದ್ದರು. ನಾವು ಪತ್ರಕಾರರಲ್ಲ ಇದರಿಂದ ನಮಗೆ ಹುಟ್ಟುವಳಿ ಇಲ್ಲ. ಇದೆಲ್ಲ ಕ್ರಮಿಕ ಪುಸ್ತಕ ಮೇಲ್ವಿಚಾರಕ ಮಹಾಶಯರ ದಿವ್ಯಚಿತ್ತಕ್ಕೆ ವಿದಿತವಾಗಿ ಚಿತ್ರಕತೆಗಳಲ್ಲಿ ಮೇಳವಾದರೆ, ನಮ್ಮ ಕಾಗದ ಮಸಿ ಖರ್ಚಾದದ್ದು ವ್ಯರ್ಥವಾಗುವದಿಲ್ಲ.

ಹೆಣ್ಣುಮಕ್ಕಳ ಟ್ರೇನಿಂಗ ಸಂಸ್ಥೆಯ ನಿಯಮಗಳು

೧ ಪ್ರಾಥಮಿಕ ಶಾಲೆಗಳ ಉಪಾಧ್ಯಾಯಿನಿಯರಿಗೋಸ್ಕರ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ.

೨ ಪ್ರತಿಯೊಂದು ಭಾಗದಲ್ಲಿ ಇಂತಹ ಸಂಸ್ಥೆಗಳನ್ನು ಮೆ॥ ಎ. ಇ. ಸಾ. ರವರ ಮೇಲ್ವಿಚಾರದಲ್ಲಿ ಮೆ॥ ಲೇಡೀ ಸುಪರಿಂಡೆಂಟರು ನಡೆಯಿಸುವರು. ಆಂತರಿಕ ವ್ಯವಸ್ಥೆಯ ದೆಸೆಯಿಂದಲೂ ತಪ್ಪು ಮಾಡಿದ ವಿದ್ಯಾರ್ಥಿನಿಯರ ಶಿಕ್ಷೆಯ ದೆಸೆಯಿಂದಲೂ ತಮಗೆ ಯೋಗ್ಯ ತೋರಿದ ನಿಯಮಗಳನ್ನು ಮಾಡಿಕೊಳ್ಳುವ ಅಧಿಕಾರವು ಮೆ. ಲೇಡೀ ಸುಪರಿಂಟೆಂಡೆಂಟರವರಿಗೆ ಇರುವದು. ಮೆ. ಎ. ಇ. ಸಾ॥ ರವರ ಆಲೋಚನೆಯಿಂದ ನಿಯಮಗಳಂತೆ ನಡೆಯದ ವಿದ್ಯಾರ್ಥಿನಿಯರನ್ನು ಹೊರಗೆ ಸಹ ಹಾಕುವರು.

೩ ಸರಕಾರದ ನಿಯಮಗಳಿಗನುಸರಿಸಿ, ವಿದ್ಯಾರ್ಥಿನಿಯರನ್ನು ಮೆ. ಇ. ಸಾ॥ ರವರ ಅಪ್ಪಣೆಯಿಂದ ಸಂಸ್ಥೆಯೊಳಗೆ ಸೇರಿಸಿಕೊಳ್ಳುವರು.

೪ ಈ ಸಂಸ್ಥೆಯಲ್ಲಿ ಪಗಾರಿ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳುವದಲ್ಲದೆ ಹೊರಗಿನಿಂದ ಬಂದವರನ್ನು ಬಿನ್ ಪಗಾರಿಯಿಂದ ಮೆ. ಎ. ಇ. ಸಾ॥ ರವರ ಇಚ್ಛೆಯ ಮೇರೆಗೆ ತೆಗೆದುಕೊಳ್ಳಲಾಗುವದು.

ಕೆಳಗೆ ಬರೆದ ನಿಯಮಗಳಿಗನುಸರಿಸಿ ವಿದ್ಯಾರ್ಥಿನಿಯರನ್ನು ತೆಗೆದುಕೊಳ್ಳುವರು.

(ಅ) ಉಮೇದವಾರರು ಗೊತ್ತು ಪಡಿಸಿದ ಫಾರ್ಮಿನಲ್ಲಿಯೇ ಅರ್ಜಿಯನ್ನು ಬರೆದು ತನ್ನ ನಡತೆಯ ಬಗ್ಗೆ ಇಬ್ಬರು ಸದ್ಗೃಹಸ್ಥರ ಸರ್ಟಿಫಿಕೇಟುಗಳನ್ನು ಜೋಡಿಸಿ ಕಳುಹಿಸಬೇಕು.

(ಬ) ಅರ್ಜದಾರಳು ಮದುವೆಯಾದವಳಿದ್ದರೆ ತನ್ನ ಗಂಡನ ಅಥವಾ ಸಂರಕ್ಷಕನ (ಉಮೇದವಾರಳು ವಿಧವೆಯಾಗಲಿ ಕುಮಾರಿಕೆಯಾಗಲಿ ಇದ್ದರೆ ಸಂರಕ್ಷಕನ) ಬರಹ ಮೂಲಕವಾದ ಒಪ್ಪಿಗೆಯನ್ನು ಅರ್ಜಿಯ ಕೂಡ ಕಳಿಸಬೇಕು. ಈ ಸಂಬಂಧವಾಗಿ ವಿಶೇಷ ಸಂಗತಿಗಳಿದ್ದರೆ ಮೆ. ಎ. ಇ. ಸಾ॥ ರು ವಿಚಾರಿಸುವರು.

ಟೀಪು—ಲಗ್ನವಾಗದ ಹುಡಿಗೆಯ ಹಾಗು ಗಂಡನನ್ನು ಬಿಟ್ಟವರ ಬಗ್ಗೆ ಕಾಯಿದೆಯಂತೆ ಸಂರಕ್ಷನ ದೆಸೆಯಿಂದ ಮ್ಯಾಜಿಸ್ಟ್ರೇಟರ ಎದುರಿಗೆ ಅವಳು ಕೂಟ್ಟ ಪ್ರತಿಜ್ಞಾಲೇಖವನ್ನು ಅರ್ಜಿಯ ಕೂಡ ಕಳುಹಿಸಿ ಕೊಡಬೇಕು.

(ಕ) ಗಂಡನು ಹುಚ್ಚನಿದ್ದರೆ ಅವನ ಸಂಬಂಧವಾಪ ಡಾಕ್ಟರ ಸರ್ಟಿಫಿಕೇಟಿನ ಮೇಲೆ ಮ್ಯಾಜಿಸ್ಟ್ರೇಟರ ಸಹಿಯು ಇರಬೇಕು. ಅಂದರೆ ಅವಳ ಸಮೀಪದ ಆಪ್ತನನ್ನು ಸಂರಕ್ಷಕನನ್ನಾಗಿ ಒಪ್ಪಿಕೊಳ್ಳಬಹುದು.

(ಡ) ವಿದ್ಯಾರ್ಥಿನಿಯರನ್ನು ಫಾರ್ಮಾಸಿಕದ ಮೊದಲಿನ ಅವಧಿಯು ಪ್ರಾರಂಭವಾದ ೧ ವಾರದ ಒಳಗಾಗಿ ಸೇರಿಸಿಕೊಳ್ಳುವರು. ಆ ಪ್ರಕಾರ ಬಾರದೆ ಇದ್ದವರನ್ನು ಮುಂದೆ ತೆಗೆದುಕೊಳ್ಳುವದಿಲ್ಲ.

(ಇ) ಪ್ರತಿಯೊಬ್ಬಳನ್ನು ಸೇರಿಸಿಕೊಳ್ಳುವಾಗ ಮೆ. ಇ. ಸಾ॥ ರವರ ನಿರ್ಣಯದ ಮೇರೆಗೆ ವ್ಯವಸ್ಥೆಯಾಗುವದು.

(ಫ) ೧೬ ವರ್ಷಕ್ಕಿಂತ ಕಡಿಮೆ ವಯಸುಳ್ಳವರನ್ನಾಗಲಿ ೨೫ ವರ್ಷಕ್ಕೆ ಮೀರಿದವರನ್ನಾಗಲಿ ಸಂಸ್ಥೆಯಲ್ಲಿ ತೆಗೆದುಕೊಳ್ಳುವದಿಲ್ಲ. ಕಾಯಂ ಶಿಕ್ಷಕಿಯರಾಗಿದ್ದವರಿಗೆ ಪರಮಾವಧಿ ವಯಸ್ಸು ೩೦ ವರ್ಷಗಳವರೆಗೆ ಇರುವದು.

(ಗ) ಉಮೇದವಾರಳು ಈ ಸಂಸ್ಥೆಯ ಜ್ಯೂನಿಯರ ೧ನೆಯ ವರ್ಷಕ್ಕೆ ಸೇರಬೇಕಾಗಿದ್ದರೆ ವ್ಹ. ಫಾ. ಪರೀಕ್ಷೆಯನ್ನಾಗಲಿ ಆಂಗ್ಲೋ ವ್ಹರ್ನಾಕ್ಯುಲರ ೫ನೆಯ ಇಯತ್ತೆಯನ್ನಾಗಲಿ ಪಾಸಾಗಿರಬೇಕು. ಆಂಗ್ಲೋ ವ್ಹರ್ನಾಕ್ಯುಲರ ೬ನೇ ಇಯತ್ತೆ ಪಾಸಾದವಳನ್ನು ಸೀನಿಯರ ಕ್ಲಾಸಿಗೆ ತೆಗೆದುಕೊಳ್ಳುವೆವು. ಅಂಥವಳು ಆ ವರ್ಷಕ್ಕೆ ಗೊತ್ತು ಪಡಿಸಿದ ೪೦ ಪಾಠಗಳನ್ನು ಟ್ರೇನಿಂಗಸಂಸ್ಥೆಯ ಅಧ್ಯಾಪಕರ ಮೇಲುವಿಚಾರದ ಕೆಳಗೆ ಕೊಡತಕ್ಕದ್ದು. ಯಾವಳೊಬ್ಬಳು ಮ್ಯಾಟ್ರಿಕ್ಯುಲೇಶನ್ ಅಥವಾ ಸ್ಕೂಲಫಾಯನಲ್ ಪರೀಕ್ಷೆಯನ್ನಾಗಲಿ ಅದಕ್ಕೆ ಸಮಾನವಾದ ಅಥವಾ ಅದಕ್ಕೂ ಹೆಚ್ಚಿನ ಪರೀಕ್ಷೆ ಪಾಸಾಗಿದ್ದರೆ ೨ನೆಯ ವರ್ಷದ ಕ್ಲಾಸಿಗೆ ಸೇರಿಕೊಳ್ಳುವರು; ಆದರೆ ಅಂಥವರು ಆ ವರುಷ ೬೦ ಪಾಠಗಳನ್ನು ಕೊಡತಕ್ಕದ್ದು.

(ಹ) ವಿದ್ಯಾರ್ಥಿನಿಯರ ಆರಿಸುವಿಕೆಯನ್ನು ಮೆ. ಇ. ಸಾ॥ ರವರು ಲೋಕಲ್ ಅಥಾರಿಟಿ ಮ್ಯುನಸಿಪಾಲಿಟಿಗಳ ಮತ್ತು ಖಾಸಗಿ ಸಂಸ್ಥೆಗಳ ಶಿಫಾರಸಿನ ಮೇರೆಗೆ ಮಾಡುವರು. ವಯಸ್ಸು ಯೋಗ್ಯತೆ ಇವು ಸರಿಯಾಗಿದ್ದ ಉಮೇದವಾರರನ್ನು ಮಾತ್ರ ತೆಗೆದುಕೊಳ್ಳುವೆವು.

(೬) ಉಮೇದವಾರಳು ಈ ಸಂಸ್ಥೆಗೆ ಸೇರುವಾಗ ಮೆಡಿಕಲ್ ಸರ್ಟಿಫಿಕೇಟನ್ನು ಹೊರಕಿಸಬೇಕಾಗುವದು. ಕಾಯಂ ನೌಕರಿಯೊಳಗೆ ಇದ್ದರೆ ಈ ಸರ್ಟಿಫಿಕೇಟಿನ ಅವಶ್ಯಕತೆಯಿಲ್ಲ. ಆದರೆ ಅವರು ಟ್ರೇನಿಂಗ ಹೊಂದಲಿಕ್ಕೆ ಸಮರ್ಥರಿರಬೇಕು.

(೭). ಡಿ. ಲೋ. ಬೋ. ನಿಂದ ಬಂದ ಉಮೇದವಾರರಿಗೆ ಸರಕಾರದವರು ಶಿಷ್ಯ ವೃತ್ತಿಗಳನ್ನು ಕೊಡುವರು. ಈ ವಿಷಯದಲ್ಲಿ ಸರಕಾರದವರು ಕಾಲಕಾಲಕ್ಕೆ ನಿಯಮಗಳನ್ನು ಮಾಡುವರು.

(೮) ವಿದ್ಯಾರ್ಥಿನಿಯರಿಗೆ ಕೊಡತ್ತಾದ ಶಿಷ್ಯವೃತ್ತಿಯು ೧೫ ರೂ. ಇರುವದು. ಈ ಸ್ಕಾಲರಶಿಪ್ಪು ಸೂಟಿಯ ತಿಂಗಳನ್ನು ಹೊರತು ಪಡಿಸಿ ವರ್ಷಕ್ಕೆ ೧೧ ತಿಂಗಳು ಮಾತ್ರ ದೊರೆಯುವದು. ೧ನೆಯ ವರ್ಷದ ಜ್ಯೂನಿಯರದಿಂದ ಸೀನಿಯರ ವರ್ಗಕ್ಕಾಗಲಿ ೧ನೆಯ ವರ್ಷದಿಂದ ೨ನೇಯ ವರ್ಷಕ್ಕಾಗಲಿ ಹೋಗುವ ವಿದ್ಯಾರ್ಥಿನಿಯರಿಗೆ ಈ ಬಿಡು ದಿನದ ಸ್ಕಾಲರಶಿಪ್ಪು ದೊರೆಯುವದು.

(೯) ಟ್ರೇನಿಂಗ ಸಂಸ್ಥೆಗೆ ಸೇರಿದ ಉಮೇದವಾರರಿಗೆ ಸಂಸ್ಥೆಗೆ ಹೊಂದಿದ ವಸತಿ ಗೃಹದಲ್ಲಿ ಇರಲು ಅನುಕೂಲವಿವೆ. ಆದರೆ ವಸತಿಗೃಹದಲ್ಲಿ ಸಾಕಷ್ಟು ಸ್ಥಳಾನುಕೂಲತೆಯು ಇಲ್ಲದಿದ್ದರೆ ಮಕ್ಕಳಿದ್ದ ಉಮೇದವಾರರಿಗೆ ಸ್ಥಳವು ದೊರೆಯಲಾರದು. ಇಂಥವರು ಹೊರಗೆ ಇದ್ದರೆ ತಾನು ಇರುವ ಸ್ಥಳವು ಯೋಗ್ಯವದೆ ಎಂಬದನ್ನು ಮೆ. ಲೇಡಿ ಸುಪರಿಂಟೆಂಡೆಂಟರಿಗೆ ತೋರಿಸಬೇಕು.

(೧೦) ಶಿಷ್ಯವೃತ್ತಿಯನ್ನು ಹೊಂದುವ ವಿದ್ಯಾರ್ಥಿನಿಯು ತನ್ನ ಸಂರಕ್ಷಣದಾರರ ಅಂದರೆ ಗಂಡ, ಭಾವ, ಮಾವ, ತಂದೆ, ಅಣ್ಣ ಮೊದಲಾದವರಿಂದ ಶಿಷ್ಯವೃತ್ತಿಯ ಬಗ್ಗೆ ಬರಹನೂಲಕವಾದ ಕರಾರಪತ್ರವನ್ನು ಬರೆಯಿಸಿ ತರತಕ್ಕದ್ದು. ಕಲಿಯುವ ಅವಧಿಯಲ್ಲಿ ಲಗ್ನವಾದರೆ ಗಂಡನು ಇಂಥ ಕರಾರ ಪತ್ರಿಕೆಗೆ ಬಾಧ್ಯನಾಗುವನು. ಆಗ ಅಂಥ ಕರಾರಪತ್ರವನ್ನು ಅವನಿಂದ ತರಬೇಕು.

ಯಾರೂ ವಾರಸದಾರರು ಇರದಿದ್ದರೆ ಮೆ. ಇ. ಸಾ।। ರವರ ಅಪ್ಪಣೆಯು ಮೇರೆಗೆ ತಾನೇ ಬರಕೊಡಬೇಕಾಗುವದು.

(೧೦) ಪ್ರತಿಯೊಂದು ಸಂಸ್ಥೆಯಲ್ಲಿಯೂ ಆ ಪ್ರಾಂತದ ಪ್ರಚಲಿತ ಭಾಷೆಯಲ್ಲಿ ಶಿಕ್ಷಣವು ನಡೆಯುವದು. ಈ ಸಂಸ್ಥೆಯಲ್ಲಿ ಕೆಳಗೆ ಬರೆಸ ಪ್ರಕಾರವಾಗಿ ವರ್ಗಗಳು ಇರುವವು.

(೧) ಜ್ಯೂನಿಯರ ೧ನೆಯವರ್ಷದ ತರಗತಿ

(೨) ಸೀನಿಯರ ೧ನೆಯವರ್ಷದ ತರಗತಿ

(೩) ೨ನೆಯವರ್ಷದ ತರಗತಿ

೧೧ ಪ್ರತಿಯೊಂದು ಟ್ರೇನಿಂಗ ಸಂಸ್ಥೆಯಲ್ಲಿ ವರ್ಷದಲ್ಲಿ ಅಭ್ಯಾಸ ನಡೆಯುವ ಅವಧಿಯು ೨ ಪ್ರಕಾರವಾಗಿರುತ್ತದೆ, ಮೊದಲನೆಯ ಅವಧಿಯು ೧೫ ನೆಯ ಜೂನ

ಂದ ೧೫ನೆಯ ಅಕ್ಟೋಬರದವರೆಗೆ ೨ನೆಯದು ೧ನೆಯ ದಿಶಂಬರದಿಂದ ಅವರ ಮುಂದಿನ ಇಸವಿಯ ಎಪ್ರಿಲ ತಿಂಗಳವರೆಗೆ ಇರುವದು.

೧೨ ವಿದ್ಯಾರ್ಥಿನಿಯರ ಹಾಜರಿ ನಡತೆ ಅಭ್ಯಾಸ ಇತ್ಯಾ ಮೊದಲನೆಯ ಅವಧಿಯಲ್ಲಿ (ಟರ್ಮಿನಲ್ಲಿ) ಸಮಾಧಾನಕರವಿಲ್ಲದಿದ್ದರೆ ಅವರ ಶಿಷ್ಯವೃತ್ತಿಯನ್ನು ಕಡಿಮೆ ಮಾಡ ಬಹುದು. ಅಥವಾ ಪೂರಾ ತೆಗೆದು ಬಿಡಬಹುದು. ಅಥವಾ ಅವಳನ್ನು ಸಂಸ್ಥೆಯ ಮುಖ್ಯಸ್ಥರ ಶಿಫಾರಸಿನ ಮೇರೆಗೆ ಮೆ. ಎ. ಇ. ಸಾಹೆ ರು ಹೊರಗೆ ಹಾಕಬಹುದು.

೧೩ ೨ನೆಯ ಅವಧಿಯ ಕೊನೆಗೆ ಮೆ. ಎ. ಇ. ಸಾಹೆ ರು ತಮ್ಮ ಕೈಕೆಳಗಿನ ಅಧಿಕಾರಿಗಳ ಅಥವಾ ವಿದ್ಯಾಖಾತೆಯ ಅಧಿಕಾರಸ್ಥರ ಸಹಾಯದಿಂದ ಸರ್ಟಿಫಿಕೇಟಿನ ಪರೀಕ್ಷೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡುವರು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರ ಹೆಸರನ್ನು ಅವರು ಪಡೆದ ಗುಣಗಳಿಗನುಸರಿಸಿ ಮುಂಬಯಿ ಗವ್ಹರ್ನ ಮೆಂಟ ಗ್ಯಾಝಿಟೀಯರನಲ್ಲಿ ಪ್ರಸಿದ್ಧಿಸುವರು.

೧೪ ಯಾವಳೊಬ್ಬ ವಿದ್ಯಾರ್ಥಿನಿಯು ಮೇಲೆ ಗೊತ್ತು ಪಡಿಸಿದ ೧ನೆಯ ೨ನೆಯ ವರ್ಷಗಳ ಅಭ್ಯಾಸಪತ್ರಿಕೆಯಲ್ಲಿ ಪೂರ್ಣ ಶಿಕ್ಷಣ ಪಡೆಯದಿದ್ದರೆ ಅವಳಿಗೆ ಪರೀಕ್ಷೆಗೆ ಕೂಡಲಿಕ್ಕೆ ಪರವಾನಗಿ ದೊರೆಯಲಾರದು.

೧೫ ಪ್ರತಿಯೊಬ್ಬ ವಿದ್ಯಾರ್ಥಿನಿಯು ಪರೀಕ್ಷೆಯಲ್ಲಿ ಒಟ್ಟಿಗೆ ೧೦೦ಕ್ಕೆ ೪೦ರಂತೆ ಗುಣಗಳನ್ನು ದೊರಕಿಸಬೇಕು. ಪ್ರತಿಯೊಂದು ಪದವಿನಲ್ಲಿ ೧೦೦ಕ್ಕೆ ೩೩½ ಕ್ಕಿಂತ ಕಡಿಮೆ ಯಿಲ್ಲದಷ್ಟು ಗುಣಗಳನ್ನು ದೊರಕಿಸಬೇಕು. ಶಿಕ್ಷಣವಿಚಾರ, ಕಲಿಸುವಕಲೆ ಈ ಪದವಿನಲ್ಲಿ ಮಾತ್ರ ೧೦೦ಕ್ಕೆ ೪೦ಕ್ಕಿಂತ ಕಡಿಮೆಯಿಲ್ಲದಷ್ಟು ಗುಣಗಳನ್ನು ಪಡೆಯಬೇಕು.

೧೬ ವಿದ್ಯಾರ್ಥಿನಿಯು ವರ್ಷದ ಕೊನೆಗೆ ಪರೀಕ್ಷೆ ಪಾಸಾಗದಿದ್ದರೆ ಅವಳನ್ನು ಸಂಸ್ಥೆಯಲ್ಲಿ ಇರಗೊಡುವದಿಲ್ಲ. ೨ನೆಯ ವರ್ಷದಲ್ಲಿ ನಾಪಾಸಾದ ಮೊದಲನೆಯ ವರ್ಷದ ಸರ್ಟಿಫಿಕೇಟನ್ನು ಕೊಡುವರು.

೧೭ ಸರಕಾರದವರು ಆಯಾ ಕಾಲಕ್ಕೆ ಪ್ರಸಿದ್ಧಪಡಿಸಿದ ನಿಯಮಗಳಿಗನುಸರಿಸಿ ೧ನೆಯ ವರ್ಷಕ್ಕಾಗಲಿ ೨ನೆಯ ವರ್ಷಕ್ಕಾಗಲಿ ಆರಿಸುವವನ್ನು ಸಂಸ್ಥೆಯ ಮುಖ್ಯಸ್ಥರ ಅಥವಾ ಅಧಿಕಾರಿಗಳ ಶಿಫಾರಸಿನ ಮೇರೆಗೆ ಮೆ. ಎ. ಇ. ಸಾಹೆ ರು ಮಾಡುವರು.

೧೮ ಯಾವದೊಂದು ಪರೀಕ್ಷೆಯಲ್ಲಿ ನಾಪಾಸಾದ ವಿದ್ಯಾರ್ಥಿನಿಯು ಅದೇ ಪರೀಕ್ಷೆಗೆ ಮೆ. ಎ. ಇ. ಸಾಹೆ ರವರ ಅಪ್ಪಣೆಯಿಂದ ಕೊಡಬಹುದು. ಆಗ ಕೆಳಗೆ ಬರೆದ ನಿಯಮಗಳಂತೆ ವ್ಯವಸ್ಥೆಯಾಗುವದು.

(೧) ಒಂದೇ ಪರೀಕ್ಷೆಗಾಗಿ ಆಯ್ಕೆಮಾದವಾರಳಿಗೆ ೨ ಬಾರಿಗಿಂತ ಹೆಚ್ಚಿಗೆ ಪರವಾನಿಗಿಯು ದೊರೆಯಲಾರದು. ಅಂದರೆ ಒಮ್ಮೆ ನಾಪಾಸಾದರೆ ಮುಂದೆ ಒಂದೇ

ಸಾರಿ ಪರೀಕ್ಷೆಗೆ ಕೂಡಲಿಕ್ಕೆ ಅಪ್ಪಣೆಯು ಇರುವದು. ಒಮ್ಮೆ ಕುಳಿತು ನಾಪಾಸಾದಾಗ ಅದರ ಮುಂದಿನ ಸಾರಿಗೆ ಕೂಡಲಿಕ್ಕೆ ಬೇನೆಯು ಇಲ್ಲನೆ ಮತ್ತೇನಾದರೂ ಸಬಲ ಕಾರಣವಿದ್ದರೆ ಮೆ. ಎ. ಇ. ಸಾ॥ ರ ಅಪ್ಪಣೆಯು ಮೇರೆಗೆ ಅದರ ಮುಂದಿನ ವರುಷ ಕೂಡಬಹುದು.

(೨) ಉಮೇದವಾರಳು ಒಂದೇ ವಿಷಯದಲ್ಲಿ ನಾಪಾಸಾಗಿ ಒಟ್ಟುಗೂಡಿಗಳಲ್ಲಿ ೧೦೦ಕ್ಕೆ ೪೫ರಂತೆ ಗುಣಗಳನ್ನು ಪಡೆದಿದ್ದರೆ ಅದರ ಮುಂದಿನ ಪರೀಕ್ಷೆಯಲ್ಲಿ ಅದೊಂದೇ ವಿಷಯದ ಪೂರ್ತಿಗೆ ಪರೀಕ್ಷೆಗೆ ಕೂಡಲು ಅಪ್ಪಣೆ ದೊರೆಯುವದು. ಹೀಗಿಲ್ಲದಿದ್ದರೆ ಪೂರಾ ಪರೀಕ್ಷೆಗೆ ಕೂಡಬೇಕಾಗುವದು.

(೩) ೧೫ನೆಯ ವರ್ಷದ ವಿದ್ಯಾರ್ಥಿನಿಗೆ ೨೦ನೆಯ ಸಾರಿ ಸಹ ನಾಪಾಸಾದರೆ ಮೆ. ಎ. ಇ. ಸಾ॥ ರು ಯೋಗ್ಯ ಕಂಡರೆ ಮತ್ತೊಮ್ಮೆ ಕೂಡಲಿಕ್ಕೆ ಅಪ್ಪಣೆ ಕೊಡುವರು. ಆಗ ಸಂಸ್ಥೆಗಳ ಮುಖ್ಯಸ್ಥರು ಶಿಫಾರಸು ಮಾಡಬೇಕಾಗುವದು. ಇಂಥ ವಿದ್ಯಾರ್ಥಿನಿಯರು ಎರಡಕ್ಕಿಂತ ಹೆಚ್ಚು ವಿಷಯಗಳನ್ನು ನಾಪಾಸಾಗಿರಬಾರದು.

ಮೇಲೆ ಬರೆದ ನಿಯಮಗಳು ೩ನೆ ಸಾರಿ ಪರೀಕ್ಷೆಗೆ ಕೂಡುವ ಉಮೇದವಾರಿಗೆ ಸಂಬಂಧಪಡುವವು.

೧೯ ಒಂದು ವೇಳೆ ಖಾಸಗಿ ಟ್ರೇನಿಂಗ ಸಂಸ್ಥೆಗಳಿಂದ ಬಂದ ವಿದ್ಯಾರ್ಥಿಗಳಿಗೆ ಸಹ ಸಂಸ್ಥೆಯಲ್ಲಿ ನಡೆಯುವ ಪರೀಕ್ಷೆಗೆ ಕೂಡಲಿಕ್ಕೆ ಪರವಾನಿಗಿಯು ದೊರೆಯುವದು ಆದರೆ ಅಂಥ ಟ್ರೇನಿಂಗ ಸಂಸ್ಥೆಗಳು ಇಂಥ ವಿಷಯಗಳನ್ನು ಕಲಿಸಲು ಯೋಗ್ಯವಿರುವ ನೆಂದು ಸರಕಾರದಿಂದ ಮಾನ್ಯವಾಗಿರಬೇಕು.

೧೫ನೆಯ ವರ್ಷಕ್ಕೆ ಪರೀಕ್ಷೆಗೆ ಕೂಡುವವರು ಮುಲ್ಕಿಪರೀಕ್ಷೆಯನ್ನಾಗಲಿ ಆಂಗ್ಲೋ ವ್ಹರ್ನಾಕ್ಯೂಲರ ೫ನೆಯ ಇಯತ್ತೆಯನ್ನಾಗಲಿ ಪಾಸಾಗಿರಬೇಕು. ಪರೀಕ್ಷೆಗೆ ಕೂಡುವ ಕ್ಲಾಸದಲ್ಲಿ ೧ ವರ್ಷ ವಿದ್ಯಾರ್ಥಿನಿಯಾಗಿರಬೇಕು. ೪ೊದಲನೆವರ್ಷದ ಸರ್ಟಿಫಿಕೇಟ ಪರೀಕ್ಷೆಗೆ ಕೂಡುವವರು ಜ್ಯೂನಿಯರ ಪರೀಕ್ಷೆ ಪಾಸಾಗಿರಲಿಕ್ಕೆ ಬೇಕು. ಅಥವಾ ಆಂಗ್ಲೋ ವ್ಹರ್ನಾಕ್ಯೂಲರ ೬ನೆಯ ಇಯತ್ತೆ ಪಾಸಾಗಿ ಸೀನಿಯರ ೧ನೆಯ ವರ್ಷದ ಕ್ಲಾಸಿನಲ್ಲಿ ೧ವರ್ಷ ಇರಬೇಕು.

ಮೇಲಿನಂತೆಯೇ ೨ನೆಯ ವರ್ಷದ ಪರೀಕ್ಷೆಗೆ ಕೂಡುವವರು ೧ನೆಯ ವರ್ಷದ ಪರೀಕ್ಷೆಯನ್ನು ಪಾಸಾಗಿರಬೇಕು. ಇಲ್ಲದಿದ್ದರೆ ವ್ಯಾಟ್ರಿಕ್ಯುಲೇಶನ್ ಅಥವಾ ಸಯ್ಕಲ್ ಲೀವ್ಹಿಂಗ ಅಥವಾ ಅದಕ್ಕೆ ಸಮಾನವಾದ ಯಾವದೊಂದು ಪರೀಕ್ಷೆ ಪಾಸಾಗಿರಬೇಕು. ಹಾಗು ೨ನೆಯ ವರ್ಷದ ಕ್ಲಾಸಿನಲ್ಲಿ ೧ವರ್ಷ ಇರಬೇಕು.

ಪರೀಕ್ಷೆಯು ಪರವಾನಿಗೆಯ ಅರ್ಜಿಗಳನ್ನು ಉಮೇದವಾರರು ತಮ್ಮ ಸಂಸ್ಥೆಗಳ ಮುಖ್ಯಸ್ಥರ ಮುಖಾಂತರ ಮಾಡಬೇಕು. ಸಂಸ್ಥೆಗಳ ಮುಖ್ಯಸ್ಥರು ಉಮೇದವಾರರ ನಡತೆ ಅಭ್ಯಾಸ ಪದ್ಧತಿಗಳ ಬಗ್ಗೆ ಶಿಫಾರಸ ಮಾಡಿರಬೇಕು.

ಪರವಾನಿಗಿ ದೊರೆಯಬೇಕಾದಾಗ ಅವಶ್ಯಕ ಸಂಗತಿಗಳು

(ಅ) ಜ್ಯೂನಿಯರ ಪರೀಕ್ಷೆಗಾಗಿ—ಪ್ರತಿಯೊಬ್ಬ ವಿದ್ಯಾರ್ಥಿನಿಯು ವರ್ಷದಲ್ಲಿ ಕಲಿಸುವ ಪಾಠಗಳ ೧೫ ಟಿಪ್ಪಣಿಗಳನ್ನು ತೋರಿಸಬೇಕು, ಹಾಗು ೩೦ ಪಾಠಗಳನ್ನು ನಿರೀಕ್ಷಿಸಿರಬೇಕು.

(ಬ) ಸೀನಿಯರಪರೀಕ್ಷೆಗಾಗಿ—ಪ್ರತಿಯೊಬ್ಬ ವಿದ್ಯಾರ್ಥಿನಿಯು ಮೇಲೆ ಬರೆದಂತೆ ೨೫ ಪಾಠಗಳ ಟಿಪ್ಪಣಿ ತೋರಿಸಬೇಕು. ಆಂಗ್ಲೋ ವ್ಹರ್ನಾಕ್ಯುಲರ ಟ್ರೆನಿಂಗ ಇಯತ್ತೆ ಪಾಸಾದವರು ೪೦ ಪಾಠಗಳ ಟಿಪ್ಪಣಿ ತೋರಿಸಬೇಕು.

(ಕ) ಫೈನೇವರ್ಷದ ಪರೀಕ್ಷೆಗಾಗಿ —ಪ್ರತಿಯೊಬ್ಬ ವಿದ್ಯಾರ್ಥಿನಿಯು ೪೦ ಪಾಠಗಳನ್ನು ಕೊಟ್ಟು ಅವುಗಳ ಟಿಪ್ಪಣಿ ತೋರಿಸಬೇಕು. ವ್ಯಾಟ್ರಿಕ್ಯುಲೇಶನ. ಪಾಸಾದವವರು ೬೦ ಪಾಠಗಳನ್ನು ಕೊಟ್ಟು ಅವುಗಳ ಟಿಪ್ಪಣಿ ತೋರಿಸ ಬೇಕು.

೨೦ ಯಾವ ವಿದ್ಯಾರ್ಥಿನಿಯು ಈ ಸಂಸ್ಥೆಯ ಸರ್ಟಿಫಿಕೇಟಿನ ಪರೀಕ್ಷೆಯಲ್ಲಿ ಪಾಸಾಗುವರೋ ಅಂಥವರಿಗೆ ಮೈ. ಎ. ಇ. ಸಾಹೇಬರು ಸರ್ಟಿಫಿಕೇಟುಗಳನ್ನು ಕೊಡುವರು

ದಿ. ಬ. ಕಂಬಳಿ ಸಿದ್ದಪ್ಪನವರ ಅಭಿನಂದನ

ಕವಿ— ಮಿ. ಮುಂಡರಗಿ

ಪದ್ಯ

ವಿಲಸಿತ ರಾಜರಂಜನವನಾಜನಮಾನಸ ತೋಷಗೈಯುವಾ ।
ಸುಲಲಿತ ಮಾರ್ಗದಿಂ ನಡೆವ ದುರ್ಲಭಶಕ್ತಿಸಮನ್ವಿತಂ ಕರಂ ॥
ಸಲಹಿದ ಮಾತೆ ಕನ್ನಡಿತಿಯೂಪರಿತಾಪ ವಿದಾರಣಾಂತರಂ ।
ನೆಲಸಿದನಲ್ತೆ ಮಂತ್ರಿಪದಪಟ್ಟದೆ ಕಂಬಳಿ ಸಿದ್ಧಭೂಪನು ॥

ಹೊಸ ಪುಸ್ತಕಗಳು

೨ನೆಯ ಭಾಗ — ಮುದಿಗನ್ನಡಿ

ಲೇ—ಎಂ. ಪಿ. ಪೂಜಾರ, ಕನ್ನಡ ಪಂಡಿತ, ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೨ನೆಯ ಇಯತ್ತೆಗೆ ತಕ್ಕ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬।೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕ ದಲ್ಲಿ ಆರಂಭದ ಕೆಲವು ಪುಟಗಳನ್ನು ಮಾತ್ರ ೩ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು. ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಪೋಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯ ಲ್ಪಟ್ಟಿದೆ. ೩ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪ ಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುನೆವು. ಬೆಲೆ ಹಳ್ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥ ಕರ್ತರಲ್ಲಿಯೂ, ನವ್ಮಲ್ಲಿಯೂ ಮೋರೆಯುವವು.

ಗಣಿತಾದರ್ಶ— (೨ನೆಯ ಇಯತ್ತೆಗೆ) ಲೇ—ಎಸ್. ಆರ್. ಕಟ್ಟಿ ಬಿ. ಎ. ಮತ್ತು ಜೋಶಿ

— ಜೋಶಿ ಬ್ರದರ್ಸ ಬುಕ್‌ಡಿಪೋಲೈನಬಜಾರ, ಧಾರವಾಡ.

ಜಾರಿಂಗಿರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ :—ಕೆಳಗೆ ಬರೆದ ಪತ್ರೆಯ ಮೇಲೆ ಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರುಹ್ಮಾ ಸ್ತ್ರ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಕಾಲೆ, ಋತುಗಳು, ಚಂದ್ರನಕಲೆಗಳು ಇತ್ಯಾದಿಗಳನ್ನು ತೋರಿಸುವ ಉಪಕರಣಗಳು, ಶೀಫ್ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ್ ದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ರೆಗೆ ಬಾಲ ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ :—

Kashibhai C. Patel
ಕಾಶೀಭಾಯಿ ಸಿ. ಪಟೇ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)
Sikshan Sahitya Karyalaya Dehgam (Ahamedabad)

REGISTERED NO B 2567

To
The Manager,
Kannada Prathamik Sikshana
Dharwar

LIST NO. ೧೨

ಪ್ರಕಟನೆ

ತಾರೀಖುಗಳು ಬದಲಾಗಿವೆ

ಓಪನ್ ಹಾಯ್‌ಸ್ಕೂಲು, ಸ್ಪೆಶಲ್ ಹಾಯ್‌ಸ್ಕೂಲು, ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಗಳ ಮತ್ತು ಮಹಮಡನ್ ಬರ್ಸರೀಫಂಡ ಹಾಗು ಕಾಜಿ ಶಹಾಬುದ್ದೀನ ಸ್ಕಾಲರ ಶಿಪ್ ಪರೀಕ್ಷೆಗಳ ತಾರೀಖುಗಳು ಬದಲಾಗಿ ೧೯೩೧ನೇ ಇಸವಿಯ ಫೇಬ್ರುವಾರಿ ತಿಂಗಳಿನ ೨೩–೨೪–೨೫ನೇ ತಾರೀಖುಗಳ ದಿವಸ ನಡೆಯುವವು.

ಕೆ. ಎಸ್. ವಕೀಲ,
ಎ ಇ. ಡ. ಭಾಗ

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಯು

ಈ ಪರೀಕ್ಷೆಯು ೧೯೩೧ನೆಯ ಇಸವಿಯ ಮಾರ್ಚ ತಿಂಗಳ ೧೦ನೇ ತಾರೀಖಿನ (ಮಂಗಳವಾರ) ದಿವಸ ಹಾಗು ತದುತ್ತರ ದಿವಸಗಳಲ್ಲಿ ನಡೆಯುವದು. ಧಾರವಾಡ ಜಿಲ್ಲೆಗೆ ಧಾರವಾಡ, ಗದಗ, ಹುಬ್ಬಳ್ಳಿ ಹೀಗೆ ೩ ಸೆಂಟರುಗಳಿರುವವು. ಉಳಿದ ಜಿಲ್ಲೆಗಳಲ್ಲಿ ಜಿಲ್ಲೆಯ ಸ್ಥಳವೇ ಸೆಂಟರಾಗಿರುವದು. ಅಲ್ಲಿಯ ಗ। ಹಾಯಸ್ಕೂಲ ಹೆ. ಮಾ. ರವರು ಪರೀಕ್ಷಾ ಕಮೀಟಿಯ ಚೇಅರಮನ್ನರಿರುವರು. ಅವರ ಕಡೆಗೆ ತಮ್ಮ ೩ರೂ. ಫೀ ಸಹಿತವಾಗಿ, ತಮ್ಮ ಅರ್ಜಿಗಳನ್ನು ತುಂಬಿ ಫೆಬ್ರುವರಿ ೧೫ನೇ ತಾರಿಖಿನ ಒಳಗಾಗಿ ಕಳಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಹಿಡಿಯುವದಿಲ್ಲ. ಉರ್ದು ವಿದ್ಯಾರ್ಥಿನಿಯರ ಪರೀಕ್ಷೆಯ ವ್ಯವಸ್ಥೆಯು ಎಲ್ಲ ಸೆಂಟರುಗಳಲ್ಲಿರುವದು.

ಧಾರವಾಡ
೨೦—೧೨—೧೯೩೦ } ಕೆ. ಎಸ್. ವಕೀಲ

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

Kannada Prathamik Sikshana

FEBRUARY 1931

ಸಂಪಾದಕ–ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.

ಸಂಪುಟ ೬ | ವರ್ಷ ೨ | ಫೆಬ್ರುವರಿ ೧೯೩೧ | ಸಂ. ೧೧

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ.
೧.	ಸ್ಫುಟವಿಚಾರ	೧
೨	ದಿವಾಣಬಹಾದ್ದೂರ ಕಂಬಳಿ ಇವರ ಅಭಿನಂದನ	೪
೩.	ದಿ. ಬ. ಕಂಬಳಿ ಇವರ ವಿಷಯವಾಗಿ ಪದ್ಯಗಳು	೬
೪.	ವಿಜಯನಗರದವರ ಕಾಲದಲ್ಲಿ ಶೈವ ವೈಷ್ಣವ ಪಂಥಗಳು ...	೮
೫.	ಬಾಲಶಿಕ್ಷಣ-	೧೦
೬.	ಪ್ಲೇಟೋನ ತತ್ವಜ್ಞಾನ	೧೨
೭.	ದೇವಿಯ ಪಾರ್ಥನೆ	೧೪
೮.	ಶರದ್ವರ್ಣನ	೧೫
೯.	ಮಕ್ಕಳಿಗಾಗಿ ತಂದೆತಾಯಿಗಳ ಕರ್ತವ್ಯವು	೧೬
೧೦.	ಇರಾಣ ದೇಶ	೨೫
೧೧.	ಪುಸ್ತಕ ಪರಿಚಯ	೨೭
೧೨.	ಪ್ರಕಟನೆಗಳು	೨೯
೧೩.	೧೯೩೧ನೆಯ ಇ.ಯಲ್ಲಿ ಆಗುವ ಗ. ಮಕ್ಕಳ ವ್ಹ. ಘಾ. ಪರೀಕ್ಷೆ	೩೧
೧೪.	ಹೆಣ್ಣುಮಕ್ಕಳ ವ್ಹ. ಘಾ. ಪರೀಕ್ಷೆಯ ವೇಳಾಪತ್ರಿಕೆ ...	೩೨

Printed by K. R. Bhise at the Karnatak Printing Works, Dharwar
Published by H. G. Deshpande, B. A.
Head-Master, Training College for Men, Dharwar, at his Office

ಗಣಿತದ ವಿಶೇಷ ಸಂಚಿಕೆ

ಗಣಿತ ವಿಷಯದ ಹೊಸ ಅಭ್ಯಾಸಪತ್ರಿಕೆಯ ವಿಷಯವೂ ಅದನ್ನು ಕಲಿಸು ರೀತಿಯೂ ಎಷ್ಟೋ ಶಿಕ್ಷಕರಿಗೆ ಗೊತ್ತಿರುವದಿಲ್ಲ. ಆದದರಿಂದ ಮಾರ್ಚ್ ತಿಂಗಳ ಪಾಠ ವಿಶೇಷ ಶಿಕ್ಷಣವನ್ನು ಪೂರಾ ಗಣಿತ ಸಂಚಿಕೆಯನ್ನಾಗಿ ಪ್ರಸಿದ್ಧಿಸಬೇಕೆಂದು ಮಾಡಿದ್ದೇವ

ಹೊಸ ಅಭ್ಯಾಸಪತ್ರಿಕೆಯ ವಿಷಯವಾಗಿ ಲೇಖಕರು ವಿಷಯಗಳನ್ನು ಸರಿಯಾ ಬರೆದು ಕಳಿಸಿಕೊಡಬೇಕು. ಈ ಪ್ರಕಾರ ಬರೆಯುವವರು ತಮ್ಮ ಲೇಖನವನ್ನು ೧೯-೩-೩ ನೆಯ ದಿವಸದ ಒಳಗಾಗಿ ನಮ್ಮ ಕಡೆಗೆ ಮುಟ್ಟುವಂತೆ ಕಳಿಸಿಕೊಡಬೇಕು.

ಜಾಹೀರಾತು

ಸ್ಯಾಂಪಲ್] ಉತ್ತಮ ಮಸೀ ಚೀಟುಗಳು [ಪುಕ್ಕಟೆ

ನೀಲೀಕಪ್ಪು, ಕೆಂಪು, ಜಾಲಬಳಿ ಮಸಿಯ ಚೀಟುಗಳು

ಈ ಕಂಪನಿಯು ಬಹಳ ಜನರಿಂದ ಶಿಫಾರಸ

ಪಡೆದು ಮೆಡಲ್ಲುಗಳನ್ನು

ಸಂಪಾದಿಸಿರುತ್ತದೆ.

ದರಗಳು

೧೦೦	ಚೀಟುಗಳಿಗೆ	೦—೭—೦
೫೦೦	,,	೨—೦—೦
೧೦೦೦	,,	೩—೮—೦
೦೦೦೦	,,	೩೦—೦—೦ (ರೇಲ್ವೆ ಫ್ರಿ

ಪೆಟ್ಟಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿ

ಕರ್ನಾಟಕ ಇಂಕ ಕಂಪನಿ, ಬಾಗಲಕೋಟ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು — ಹನುಮಂತ ಗೋವಿಂದರಾವ ದೇಶಪಾಂಡೆ, ಬಿ. ಎ.,

ಸಂಪುಟ ೬೭ ವರ್ಷ ೨೨	ಫೆಬ್ರುವರಿ ೧೯೩೧	ಸಂಚಿಕೆ ೧೧

ಸ್ಫುಟವಿಚಾರ

೧. **ಅಖಿಲ ಏಶಿಯಾಖಂಡದ ಶಿಕ್ಷಣ ಪರಿಷತ್ತು:**— ೧೯೩೦ನೆಯ ಇಸವಿಯ ದಿಶಂಬರ ತಿಂಗಳ ೨೬ನೆಯ ತಾರೀಖಿನ ದಿವಸ ಅಖಿಲ ಏಶಿಯಾಖಂಡದ ಶಿಕ್ಷಣ ಪರಿಷತ್ತು ಹಿಂದು ಜನರ ಅತಿಪವಿತ್ರಕ್ಷೇತ್ರವಾದ ಕಾಶೀ ಪಟ್ಟಣದಲ್ಲಿ ನೆರವೇರಿತು. ಈ ಮಹಾಪರಿಷತ್ತಿಗೆ ಚೀನ, ಜಪಾನ, ಫಿಲಿಪ್ಪೈನ್ಸ ಮೊದಲಾದ ದೇಶಗಳಿಂದ ಅನೇಕ ಪ್ರತಿನಿಧಿಗಳು ಆಗಮಿಸಿದ್ದರು. ಹಿಂದುಸ್ತಾನದ ಪ್ರತಿನಿಧಿಗಳು ಸಾವಿರಗಟ್ಟಲೆ ನೆರೆದಿದ್ದರು. ಕರ್ನಾಟಕದ ಪರವಾಗಿ ಶಿಕ್ಷಕ ಶಿಕ್ಷಿಕೆಯರೂ ಅಧಿಕಾರಿಗಳೂ ಒಟ್ಟಿಗೆ ಹದಿನಾರು ಜನರು ಈ ಸಭೆಗೆ ಹೋಗಿದ್ದರು. ಈ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಮೊದಲು ರವೀಂದ್ರನಾಥ ಟಾಗೋರರವರನ್ನು ನೇಮಿಸಬೇಕೆಂದು ಗೊತ್ತಾಗಿ ಅವರನ್ನು ಬಿನ್ನವಿಸಿಕೊಂಡಿದ್ದರು. ಆದರೆ ಅವರು ಪರದೇಶದಲ್ಲಿಯೇ ಇದ್ದವರಿಂದ ಪರಿಷತ್ತಿನ ವ್ಯವಸ್ಥಾಪಕರು ಜಗದೀಶ ಚಂದ್ರ ಬೋಸರನ್ನು ಕೇಳಿಕೊಂಡರು. ಆದರೆಕೆ ಲವು ತೊಂದರೆಗಳ ಮೂಲಕ ಈ ಕಾರ್ಯವನ್ನು ನೆರವೇರಿಸಲು ಅವರಿಗೆ ಅನುಕೂಲವಿರಲಿಲ್ಲ. ಕಟ್ಟಕಡೆಗೆ ಜಗತ್ತಿನ ವಿಶ್ವವಿದ್ಯಾಲಯಗಳಲ್ಲಿ ತತ್ವಜ್ಞಾನದ ವಿಷಯದಲ್ಲಿ ಅತಿವಿಖ್ಯಾತನೆಂದು ಹೆಸರಾದ ಪ್ರೊಫೆಸರ ರಾಧಾಕೃಷ್ಣನ್ ಇವರನ್ನು ಅಧ್ಯಕ್ಷ ಪದವಿಗೆ ಆರಿಸಿಕೊಂಡರು. ಅವರಿಗೆ ವಿಶೇಷ ಕಾಲಾವಧಿಯು ದೊರೆಯದ್ದರಿಂದ ತಮ್ಮ ಭಾಷಣವನ್ನು ಮುದ್ರಿಸಲಿಕ್ಕೆ ಅವಕಾಶವಿರಲಿಲ್ಲ ಆದದರಿಂದ ತಮ್ಮ ವಿಚಾರಗಳನ್ನು ಮುಖೋದ್ಗತವಾಗಿಯೇ ಹೇಳಿದರು. ಅವರು ನುಡಿದದ್ದೇನೆಂದರೆ, "ಹಿಂದುಸ್ತಾನವು ಏಶಿಯಾ ಖಂಡದ ಮಧ್ಯಸ್ಥಾನವನ್ನು ಆಕ್ರಮಿಸಿರುವದು, ಮತ್ತು ಅತಿ ಪ್ರಾಚೀನಕಾಲದಿಂದ ಜ್ಞಾನ, ಸುಸಂಸ್ಕೃತಿ, ಆಧ್ಯಾತ್ಮಿಕ ಜ್ಞಾನ ಇವುಗಳಲ್ಲಿ ಹಿಂದುಸ್ಥಾನವು ಜಗತ್ತಿನಲ್ಲಿ ಮಿಗಿಲಾದ ದೇಶವಾಗಿದೆ. ಕಾಶೀ ಪಟ್ಟಣವು ಇಂಥ ವಿದ್ಯೆಯ ಮುಖ್ಯ ಪೀಠವಾಗಿರುವದಲ್ಲವೆ ಅತಿ ಪವಿತ್ರಸ್ಥಳವಾಗಿದೆ. ಏಶಿಯಾ

ಯುರೋಪದಲ್ಲಿ ಇಂಥ ಜನರು ವಿಜ್ಞಾನಶಾಸ್ತ್ರಜ್ಞರೂ ವಿಶಾಲ ಬುದ್ಧಿವಂತರೂ ಆಗಿ ವರು. ಶಿಕ್ಷಣದ ಮುಖ್ಯ ಉದ್ದೇಶವು ಆತ್ಮಕ್ಕೆ ಸಂಸ್ಕಾರವುಂಟಾಗಬೇಕೆಂಬದಾಗಿಯೇ ಇರುವದು. ಸುಸಂಸ್ಕೃತಿಗೆ ಮಧುರ ವರ್ತನವೂ ಅಂತಃಸ್ಫೂರ್ತಿಯೂ ಅವಶ್ಯಕವು. ಇಂಥ ಸ್ಫೂರ್ತಿಯು ಕಾರ್ಯದಲ್ಲಿ ಪರಿಣಮಿಸಬೇಕಾದರೆ ನಮಗೆ ಒಂದು ಪ್ರಕಾರದ ಶಕ್ತಿಯು ಬೇಕು. ಇದೇ ಉದ್ದೇಶದಿಂದ ಹಿಂದುಸ್ತಾನದಲ್ಲಿ ಜನ್ಮ ತಾಳಿದ ಪ್ರಾಚೀನ ಕಾಲದ ಮಹನೀಯರಾದ ಗೌತಮ ಬುದ್ಧನೂ ಶಂಕರಾಚಾರ್ಯರೂ ಮಾಡಿದ ಉಪ ದೇಶ ವಚನಗಳು ಜಗತ್ತಿನಲ್ಲಿ ದುಮುದುಮಿಸುತ್ತಿರುವವು. ಶಿಕ್ಷಣದ ಈ ಉಚ್ಚಧ್ಯೇಯ ವನ್ನು ಕಾದುಕೊಳ್ಳಬೇಕಾದರೆ ನಮ್ಮ ಶಿಕ್ಷಣದಲ್ಲಿ ಸತ್ಯ, ನೀತಿ, ಉತ್ತಮ ಶೀಲ, ಜ್ಞಾನ, ಆಧ್ಯಾತ್ಮಿಕವಿಚಾರ ಇವುಗಳಿಗೆ ಪ್ರಾಶಸ್ತ್ಯವು ದೊರೆಯಲೇ ಬೇಕು. ಹಾಗಾದಲ್ಲಿ ಏಶಿಯಾ ಖಂಡದ ನಿವಾಸಿಗಳಲ್ಲಿ ಐಕ್ಯವೂ ಸಮತ್ವವೂ ಬಂಧುಭಾವವೂ ಉಂಟಾಗುವವು. ಹೀಗೆ ನಾವು ಹಿಂದುಸ್ತಾನವನ್ನು, ಏಶಿಯಾ ಖಂಡವನ್ನು, ಜಗತ್ತನ್ನು, ಉತ್ತರೋತ್ತರವಾಗಿ ಉತ್ತಮ ಸ್ಥಿತಿಗೆ ತರಲು ಯತ್ನಿಸುವಾ--

ಪಾಶ್ಚಾತ್ಯರ ವಿಜ್ಞಾನ ಶಾಸ್ತ್ರವು ಜಗತ್ತಿನ ಸುಖಕ್ಕೆ ಆವಶ್ಯಕವೆಂದು ತಿಳಿದರೆ ಪೌರ್ವಾತ್ಯ ದೇಶಗಳ ಆಧ್ಯಾತ್ಮಜ್ಞಾನವು ಮಾನವ ವರ್ಗದ ಮೋಕ್ಷಕ್ಕೆ ಅವಶ್ಯವೆಂದು ನಾನು ಹೇಳದೆ ಇರಲಾರೆನು.

ಪ್ರಿನ್ಸಿಪಾಲ ಶೇಷಾದ್ರಿಯವರು ಸ್ವಾಗತ ಕಮೀಟಿಯ ಅಧ್ಯಕ್ಷರಾಗಿದ್ದರು. ಐದೂ ದಿವಸ ಬೇರೆ ಬೇರೆ ಶಿಕ್ಷಣ ವಿಷಯಗಳ ಚರ್ಚೆಯಾಗಿ ನಿರ್ಣಯಗಳು ಪಾಸಾದವು. ಮತ್ತು ಶೈಕ್ಷಣಿಕ ಉಪಕರಣಗಳ ಪ್ರದರ್ಶನವು ನೆರವೇರಿಸಲ್ಪಟ್ಟಿತ್ತು. ಈ ಅವಧಿಯಲ್ಲಿ ಹಿಂದೂ ವಿಶ್ವವಿದ್ಯಾಲಯದ ವ್ಹಾಯಿಸ್ ಚಾನ್ಸಲರಾದ ಪಂಡಿತ ಮದನ ಮೋಹನ ಮಾಲ್ವೀಯವರು ಬಂಧಮುಕ್ತರಾಗಿ ಸಭೆಗೆ ಬಂದಿದ್ದರು. ಏಶಿಯಾ ಖಂಡದಲ್ಲಿ ಸೌಹಾರ್ದವು ಇದೇ ಪ್ರಕಾರ ಹೆಚ್ಚಾಗಲೆಂದು ಅಧ್ಯಕ್ಷರು ಕೊನೆಗೆ ಹಾರೈಸಿದರು.

೨. **ಏಶಿಯಾಖಂಡದ ಮಹಿಳೆಯರ ಪರಿಷತ್ತು** — ಏಸಿಯಾ ಖಂಡದ ಬೇರೆ ಬೇರೆ ದೇಶಗಳಲ್ಲಿ ಸೌಹಾರ್ದವೂ ಬಂಧು ಪ್ರೇಮವೂ ಹೆಚ್ಚಾಗುವದಕ್ಕಾಗಿ ಅನೇಕ ಸಂಘಗಳು ಪ್ರಯತ್ನಪಡುತ್ತಿವೆ. ಅವುಗಳಲ್ಲಿ ಮಹಿಳೆಯರ ಪರಿಷತ್ತು ಮಹತ್ವದ್ದು. ಈ ಪರಿಷತ್ತಿಗೆ ಚೀನ, ಜಪಾನ, ಇರಾಣ, ಸಿಂಹಳದ್ವೀಪ ಮೊದಲಾದ ದೇಶಗಳಿಂದ ದೊಡ್ಡ ದೊಡ್ಡ ಸ್ತ್ರೀಯರು ಬಂದಿದ್ದರು. ಈ ಪರಿಷತ್ತು ಲಾಹೋರದಲ್ಲಿ ಜನವರಿ ತಿಂಗಳ ಕಡೆಯ ವಾರದಲ್ಲಿ ಜರುಗಿತು. ಅಲ್ಲಿ ಕೊನೆಗಂಡ ನಿರ್ಣಯಗಳನ್ನು ಕೆಳಗೆ ಕೊಟ್ಟಿದ್ದೇವೆ.

೧ ಏಶಿಯಾದೊಳಗಿನ ಬಾಲಕಬಾಲಿಕೆಯರಿಗೆ ಫೀ ಇಲ್ಲದೆ ಪುಕ್ಕಟೆಯಾಗಿ ಒತ್ತಾಯದಿಂದ ಶಿಕ್ಷಣವನ್ನು ಕೊಡುವದು ಆಯಾ ದೇಶಗಳ ಕರ್ತವ್ಯವಾಗಿದೆ.

೨. ಏಶಿಯಾದೊಳಗಿನ ಎಲ್ಲ ಜನಾಂಗಗಳಲ್ಲಿ ಪರಸ್ಪರ ಸೌಹಾರ್ದವೂ ಶಾಳ್ಮೆಯೂ ಪ್ರೀತಿಯೂ ಉಂಟಾಗಿ ಶಾಂತತೆ ನೆಲೆಗೊಳ್ಳುವದಕ್ಕೋಸ್ಕರವಾಗಿ ಎಲ್ಲ

ಮತಗಳ ಸ್ಥಾಪಕರ ಜೀವನ ಚರಿತ್ರೆ ಬೋಧನೆಗಳ ವಿಷಯವನ್ನು ಇತಿಹಾಸದ ಅಭ್ಯಾ
ದಲ್ಲಿ ಅವಶ್ಯವಾಗಿ ಸೇರಿಸಬೇಕು. ಕಾಲೇಜಿನ ತರಗತಿಗಳಲ್ಲಿ ಮೇಲೆ ವಿವರಿಸಿದ ಧರ್ಮ
ಗಳ ವಿಚಾರಗಳನ್ನು ತುಲನಾತ್ಮಕ ರೀತಿಯಿಂದ ಅಭ್ಯಾಸಮಾಡಿಸಬೇಕು.

೩. ವಿದ್ಯಾರ್ಥಿಗಳಲ್ಲಿ ಅಲ್ಕೋಹಾಲ್, ಅಫೀಮು ಮೊದಲಾದ ಮಾದಕ ಪದಾರ್ಥ
ಗಳ ಚಟವು ಉಂಟಾಗದಂತೆ ಎಚ್ಚರಪಡಬೇಕು. ಈ ಪದಾರ್ಥಗಳನ್ನು ಸಿದ್ಧ
ಮಾಡುವ ವ್ಯವಸಾಯವನ್ನು ನಿಲ್ಲಿಸಬೇಕು. ಅದಕ್ಕಾಗಿ ತಕ್ಕ ನಿರ್ಬಂಧವನ್ನ
ಮಾಡಬೇಕು. ಒಟ್ಟಿಗೆ ಈ ಮಾದಕ ಪದಾರ್ಥಗಳ ಚಟವು ಇಲ್ಲದಂತಾಗಬೇಕು.

೪. ಜಪಾನರ ಹೊರತು ಏಶಿಯದ ಎಲ್ಲ ಜನಾಂಗದವರು ಆರೋಗ್ಯದ ವಿಷಯ
ವಾಗಿಯೂ, ಆಧುನಿಕ ಶಾಸ್ತ್ರಕ್ಕನುಸರಿಸಿ ಸ್ಥಾನಿಕ ಔಷಧ ಪದ್ಧತಿಗಳಲ್ಲಿ ಸುಧಾರ
ಣೆಯಿಸುವದಕ್ಕಾಗಿಯೂ, ರೋಗದ ಮೂಲಗಳನ್ನು ತಿಳಿದು ಹೊಸ ಪ್ರಯೋಗಗಳಿಂ
ದಕ್ಕ ಉಪಾಯಗಳನ್ನು ಕೈಕೊಳ್ಳುವದಕ್ಕಾಗಿಯೂ, ತಮ್ಮ ಹಣವನ್ನು ವಿನಿಯೋಗಿ
ಸಿಕ್ಕದ್ದು.

೫. ಏಶಿಯದ ಸ್ತ್ರೀಯರು ಆರ್ಥಿಕ ದೃಷ್ಟಿಯಿಂದ ದೇಶದ ಮೇಲೆ ಉಂಟಾಗು
ವ ಪರಿಣಾಮವನ್ನು ತಿಳಿದುಕೊಳ್ಳುವಷ್ಟು ಉಚ್ಚತರದ ಮಾನಸಿಕ ಸ್ಥಿತಿಯನ್ನು ಉಂಟ
ಮಾಡಿಕೊಳ್ಳುವದಕ್ಕಾಗಿ ಪ್ರಯತ್ನಿಸತಕ್ಕದ್ದು.

೬. ಅನೇಕ ಹೆಂಡಿರನ್ನು ಮಾಡಿಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕು. ಸ್ತ್ರೀಂ
ಗೆ ತಮ್ಮ ಮಕ್ಕಳ ಸಂರಕ್ಷಣೆ, ಆಸ್ತಿ, ವಿವಾಹದ ಬಿಡುಗಡೆ, ಮತದಾನದ ಅಧಿಕಾರ -
ವಿಷಯಗಳಲ್ಲಿ ಪುರುಷರ ಸಮಾನ ಬಾಧ್ಯತೆಯು ಇರಬೇಕು. ವಿವಾಹಿತ ಸ್ತ್ರೀಯರಿ
ಗೆ ಸ್ವತ್ರೀಯ ಹಕ್ಕು ಇರಬೇಕು.

೭. ಬಾಲವಿವಾಹವನ್ನು ತೆಗೆದುಹಾಕತಕ್ಕದ್ದು.

೮. ಪ್ರತಿಯೊಂದು ಜನಾಂಗಕ್ಕೂ ದೇಶಕ್ಕೂ ತಮ್ಮ ಸ್ವಂತ ಅಭಿಪ್ರಾಯವನ್ನ
ಸ್ಪಷ್ಟವಾಗಿ ವ್ಯಕ್ತಪಡಿಸುವದಕ್ಕೋಸ್ಕರ ಸಂಪೂರ್ಣ ಜವಾಬದಾರಿಯುಳ್ಳ ಸರಕಾ
ರವಿರಬೇಕು.

೯. ಎಲ್ಲ ಸ್ತ್ರೀಯರೂ ಲೀಗಆಫ್ ನೇಶನ್ಸಿಗೆ ಸಾಹಾಯ್ಯಮಾಡತಕ್ಕದ್ದು.

೧೦. ವೇಶ್ಯಾಗೃಹಗಳನ್ನು ತೆಗೆದುಹಾಕಬೇಕು. ಸಮ್ಮತಿ ವಯಸ್ಸನ್ನು ೧೮
ವರ್ಷಗಳವರೆಗೆ ಬೆಳಿಸಬೇಕು.

೧೧. ಕೆಲಸದಿಂದ ಉಪಜೀವಿಸುವ ಹೆಂಗಸರ ಕೆಲಸದ ವೇಳೆ, ಸಂಬಳ ಇವುಗ
ಳಿಗ್ಗೆ ಕಾಯಿದೆ ಮಾಡಬೇಕು. ಅವರ ಬೇನೆ, ವಾರ್ಧಕ್ಯ, ಅಪಘಾತ, ಪ್ರಸೂತಿ ವ್ಯವಸ್ಥೆ
ಯನೆ, ಔಷಧ ಇವುಗಳ ವ್ಯವಸ್ಥೆಯು ಯೋಗ್ಯವಾಗಿರುವಂತೆ ಮಾಡಬೇಕು.

ಹೀಗೆ ಅತಿಮಹತ್ವದ ನಿರ್ಣಯಗಳನ್ನು ಮಾಡಿನ್ಸರಿಂದ ಸ್ತ್ರೀಯರಲ್ಲಿ ಒಂದ
ವ್ಯಕಾರದ ಹೊಸ ಚೈತನ್ಯವು ಉಂಟಾಗಿದೆ.

ದಿವಾಣ ಬಹದ್ದೂರ ಕಂಬಳಿ ಇವರ ಅಭಿನಂದನ

एकचक्रो रथो यंता विकलो विषमाह्वयः ।
आक्रम्यत्येव तेजस्वी तथाप्यर्को नभस्थलम् ॥

ಜಗತ್ತಿನ ಭಾಗಗಳಲ್ಲಿ ಕಾಲಕಾಲಕ್ಕೆ ತಮ್ಮ ಕರ್ತವ್ಯಗಳನ್ನು ಉಜ್ವಲವಾಗಿ ಜರುಗಿಸಿ ಕೀರ್ತಿಶಾಲಿಗಳಾದ ಜನರು ಉದಯಹೊಂದುತ್ತಲಿರುವರು. ಅವರು ಲೋಕೋಪಕಾರ, ದೇಶ ಸೇವೆ, ಸಮಾಜ ಸೇವೆ, ಹೊಸ ಹೊಸ ಶೋಧ ಹೀಗೆ ಯಾವದಾದರೊಂದು ಕಾರ್ಯವನ್ನು ಪ್ರಾಮುಖ್ಯವಾಗಿಟ್ಟುಕೊಂಡು ಜಗತ್ತಿಗೆಲ್ಲ ಆದರ್ಶಪ್ರಾಯವಾಗುವರು. ಐಶ್ವರ್ಯ ಮೊದಲಾದ ಪೂರ್ವಾನುಕೂಲತೆಗಳಿದ್ದವರಲ್ಲಿ ಕೆಲವು ಗುಣಗಳಿದ್ದರೆ ಸಾಕು, ಅವರು ಸಹಜವಾಗಿ ಪ್ರಕಾಶಿಸುವರು. ತೇಜಸ್ವಿಗಳು ಅನನುಕೂಲ ಪರಿಸ್ಥಿತಿಯಿದ್ದರೂ ಲೆಕ್ಕಿಸದೆ ಮೇಲಕ್ಕೇರುವರು.

ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಸಿದ್ಧರಾದ ಅನೇಕ ಜನರ ಹೆಸರುಗಳನ್ನು ನಾವು ಕೇಳುತ್ತಿರುವೆವು. ಅವರ ಚರಿತ್ರಾತ್ಮಕ ಗ್ರಂಥಗಳು ಪ್ರಕಟವಾಗಿರುವವು. ನಮ್ಮ ಕರ್ನಾಟಕ ಪ್ರಾಂತವು ಮಾತ್ರ ಈ ವಿಷಯದಲ್ಲಿ ಎಂದಿನಿಂದಲೂ ಹಿಂದೆ ಬಿದ್ದಿರುವದು. ಈಗ ಅಲ್ಲಲ್ಲಿ ಉದಯ ಹೊಂದುತ್ತಲಿರುವ ಶ್ರೇಷ್ಠರಿಂದ ಕರ್ನಾಟಕವಾದರೂ ನೂತನ ಚೈತನ್ಯವುಳ್ಳದ್ದಾಗಿರುವದು. ಈ ಪ್ರಕಾರ ಅಲೌಕಿಕ ಗುಣಗಳಿಂದ

ಕರ್ನಾಟಕವನ್ನು ಅಂದಗೊಳಿಸಿದವರಲ್ಲಿ ದಿ. ಬ. ಸಿದ್ದಪ್ಪ ತೋಟಪ್ಪ ಕಂಬಳಿ ಇವರು ಒಬ್ಬರಾಗಿರುವರುನರು. ವಾಚಕರ ಅವಗಾಹನೆಗಾಗಿ ಅವರ ಸಂಕ್ಷಿಪ್ತ ಚರಿತ್ರೆಯನ್ನು ಇದರಡಿಯಲ್ಲಿ ಬರೆದಿದ್ದೇವೆ.

उद्यमः साहसं धैर्यं बुद्धिः शक्तिः पराक्रमः ।
षडेते यत्र वर्तंते तत्र देवः सहायकृत् ॥

ದಿ. ಬ. ಕಂಬಳಿಯವರು ವೀರಶೈವ ಸಮಾಜದ ಪಂಚಮಸಾಲಿಪಂಗಡದವರು. ಹುಬ್ಬಳ್ಳಿಯು ಇವರ ಊರು. ಅವರು ಚಿಕ್ಕಂದಿನಲ್ಲಿ ಅಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಹೊಂದಿ ಬಳಿಕ ಧಾರವಾಡ ಹಾಯಸ್ಕೂಲಿನಲ್ಲಿ ಕಲಿತು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದರು. ಮುಂದೆ ಪುಣೆಗೆ ಹೋಗಿ ಡೆಕ್ಕನ್ ಕಾಲೇಜದಲ್ಲಿ ಉಚ್ಚ ಶಿಕ್ಷಣ ಪಡೆದು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಮೊಪಲನೆಯ ತರಗತಿಯಲ್ಲಿ ಪಾಸಾದರು.

ಪರೀಕ್ಷೆ ಪಾಸಾದ ನಂತರ ಹುಬ್ಬಳ್ಳಿಯಲ್ಲಿ ವಕೀಲಿಯ ಉದ್ಯೋಗದಲ್ಲಿ ತಮ್ಮ ಕುಶಾಗ್ರ ಬುದ್ಧಿಯಿಂದ ಪ್ರಾವೀಣ್ಯ ಪಡೆದು ಪ್ರಸಿದ್ಧಿಯನ್ನು ಹೊಂದಿದರು.

ಕೇವಲ ದ್ರವ್ಯ ಸಂಪಾದಿಸಿ ಸ್ವಂತೋಪಭೋಗದಲ್ಲಿಯೇ ತೃಪ್ತಿ ಹೊಂದದೆ ಸಮಾಜ ಸೇವೆ ಮಾಡಬೇಕೆಂಬ ಸದುದ್ದೇಶದಿಂದ ಲೋಕಸತ್ತಾತ್ಮಕದ ಮೊದಲನೆಯ ಪಾವಟಿಗೆಯಂತಿರುವ ಹುಬ್ಬಳ್ಳಿಯ ಮ್ಯುನಸಿಪಾಲ್ಟಿಯ ಸಂಸ್ಥೆಯಲ್ಲಿ ಸಭಾಸದರಾದರು. ಅವರು ಅಲ್ಲಿ ಕರ್ತವ್ಯದಕ್ಷರಾಗಿ ಕೆಲಸ ಮಾಡಿದ್ದರಿಂದ ಜನ ಬೆಂಬಲವು ಒದಗಿ ಹುಬ್ಬಳ್ಳಿ ಮ್ಯುನಸಿಪಾಲ್ಟಿಯ ಸ್ಕೂ. ಬೋ. ಚೆಅರಮನ್, ವ್ಹಾ. ಪ್ರೆಸಿಡೆಂಡ, ಪ್ರೆಸಿಡೆಂಟ ಸ್ಥಳಗಳಲ್ಲಿ ಕ್ರಮವಾಗಿ ವಿರಾಜಮಾನರಾದರು. ಹಾಗೆಯೇ ಲೋಕಲ್‌ಬೋರ್ಡಿನ ಸದಸ್ಯರೂ ಬಳಿಕ ಪ್ರೆಸಿಡೆಂಟರೂ ಆದರು.

ಹುಬ್ಬಳ್ಳಿ ನಗರದಲ್ಲಿ ಇವರು ಬಹಳ ಸುಧಾರಣೆಗಳನ್ನು ಮಾಡಿದರು. ಬೋರಿಂಗದ ಸಾಹಾಯ್ಯದಿಂದ ಬಾವಿಗಳನ್ನು ತೋಡಿಸಿ ಶಹರಕ್ಕೆ ನೀರಿನ ಅನುಕೂಲತೆಯನ್ನು ಮಾಡಿದರು. ಅಂಕಡೊಂಕ ಸಂದಿಗಳಿದ್ದ ಸಂಕುಚಿತ ಓಣಿಗಳನ್ನು ವಿಸ್ತರಿಸಿ ಹವೆಯಾಡಲಿಕ್ಕೆ ಅನುಕೂಲವಾಗುವಂತೆ ರಾಜಮಾರ್ಗಗಳನ್ನು ಮಾಡಿಸಿದರು. ಪಟ್ಟಣದ ಜನರಿಗೆ ವಿಶ್ರಾಂತಿ ದೊರೆಯುಬೇಕೆಂದು ಮ್ಯುನಸಿಪಾಲ್ಟಿಯ ಕಟ್ಟಡದ ಸುತ್ತಲೂ ಸಾರ್ವಜನಿಕ ತೋಟವನ್ನು ಮಾಡಿಸಿದರು.

೧೯೨೮ ನೆಯ ಇಸವಿಯಲ್ಲಿ ವೀರಶೈವ ಸಮಾಜದ ೧೦ ನೆಯ ಮಹಾಸಭೆಯು ಬೆಂಗಳೂರಿನಲ್ಲಿ ನೆರೆದಾಗ ಆ ಸಭೆಯ ಅಧ್ಯಕ್ಷರಾದರು.

ಇವರ ಯೋಗ್ಯತೆಯು ಹೆಚ್ಚಿಗಿದ್ದುದರಿಂದ ಕರ್ತವ್ಯಕ್ಕೆ ತಕ್ಕ ಕ್ಷೇತ್ರವಿರಲೆಂದು ಮುಂಬಯಿ ಕಾಯಿದೆ ಕೌನ್ಸಿಲದ ಮೆಂಬರರಾದುದಲ್ಲದೆ ಆ ಕೌನ್ಸಿಲಿನಲ್ಲಿ ಡೆಪೂಟಿ ಪ್ರೆಸಿಡೆಂಟರಾದರು. ಕೌನ್ಸಿಲಿನಲ್ಲಿ ವತನ ಆಕ್ಟಿನ ಸುಧಾರಣೆಯನ್ನು ನವೀನವಾಗಿ ಮಂಡಿಸಿದರು.

Pg no 8 to 11

missing

ಈ ಪ್ರಕಾರ ತಾವು ಕೈಕೊಂಡ ಕಾರ್ಯಗಳಲ್ಲೆಲ್ಲ ಕರ್ತವ್ಯದಕ್ಷತೆಯನ್ನು ತೋರಿಸಿದರು. यशःशरीरावाप्तये ಎಂಬ ಉಕ್ತಿಗನುಸರಿಸಿ ಇವರ ಕೀರ್ತಿಯು ಬೆಳೆದು ಸರಕಾರಕ್ಕೂ ಜನತೆಗೂ ಕೂಡೇ ಬೇಕಾದರು. ಸರಕಾರದವರು ಇವರಿಗೆ ರಾವ ಬಹಾದ್ದೂರ, ದಿವಾಣ ಬಹಾದ್ದೂರ ಪದವಿಗಳನ್ನು ಕೊಟ್ಟರು. ಮತ್ತು ಈ ವರ್ಷ ಮುಂಬಯಿ ಗವರ್ನರರು ಇವರಿಗೆ ಮಂತ್ರಿಪದವನ್ನು ಕೊಟ್ಟು ಇವರನ್ನು ಗೌರವಿಸಿದರು. ಇವರ ಕಡೆ ಒಕ್ಕಲತನ, ಸಹಕಾರ, ಫಾರೆಸ್ಟ್ರಿ ಮೊದಲಾದ ಖಾತೆಗಳಿರುವವು. ಮನುಷ್ಯನು ಎಡೆಬಿಡದೆ ಪ್ರಯತ್ನಿಸಿದರೆ ಉಚ್ಚ ಸ್ಥಿತಿಗೆ ಮುಟ್ಟಬಹುದೆಂಬ ಸ್ಫೋಲ್ಪಂಕ್ತಿಯನ್ನು ದಿ. ಬ. ಕಂಬಳಿಯವರು ಕರ್ನಾಟದ ತರುಣರಿಗೆ ಹಾಕಿಬಿಟ್ಟಿರುವರು.

ದಿ. ಬ. ರವರು ಮಂತ್ರಿಪದವನ್ನು ಸಮರ್ಪಕವಾಗಿ ನಡೆಯಿಸಿ ಕರ್ನಾಟಕ ವಿಕೀಕರಣ, ಶಿಕ್ಷಣ, ಉದ್ಯೋಗ, ಕಲೆ ಇವುಗಳ ಉತ್ಕರ್ಷವಾಗುವಂತೆ ಪ್ರಯತ್ನಿಸುವರೆಂದು ಕೋರುತ್ತೇವೆ.

ದಿ. ಬ ಕಂಬಳಿಯವರ ವಿಷಯವಾಗಿ ಪದ್ಯಗಳು

ಕವಿ— ಕಾ. ಗು. ಶಿವಳ್ಳಿಯು, ಹುಬ್ಬಳ್ಳಿ

ಸಿವನೆ ನಿನ್ನಯ ಕರುಣದಿಂದಲಿ ।
ಯವನಿಯೊಳ್ ನರರೇಳ್ಗಿ ಪಡೆವರು ।
ಜವಗಿ ಕೀರ್ತಿಯ ಹೊಂದಿ ಭುವನದಿ ನಿತ್ಯ ಹೊಳೆಯುವರು ॥
ರವಿಯು ರಾವ್ ಬಹದ್ದೂರ ಕಂಬಳಿ ।
ಯವರರೀ ಖ್ಯಾತಿಂಗೆ ಸಾಕ್ಷಿಯು ।
ಇವರು ತೋಟಪ್ಪಾತ್ಮಜರು ಸಿದ್ಧಪ್ಪನಾಮಕರು ॥ ೧ ॥

ತೋರಿತಿವರಿಗೆಯಾದಿ ಬಡತನ ।
ಭಾರಿ ಕಷ್ಟವು ಬಂದರೆಯು ತಾವ್ ।
ಧೀರತನದಿಂ ಏರಿದರ್ ಎಲ್. ಎಲ್ ಬೀಯೆ ಮುಂತಾಗಿ ॥
ವೀರತನದ ವಕೀಲರೆನಿಸುತ ।
ತೀರುತಲಿ ಕಡೆಗಾದರೈ ತಾವ್ ।
ಚೇರಮನ್ ಪ್ರೆಸಿಡೆಂಟು ಮುನಸೀಪಾಲ್ಟಿ ಹುಬ್ಬಳ್ಳಿ ॥ ೨ ॥

ನೀರಿನಂತೆ " ಎಲ್ಲವೂ ವ್ಯರ್ಥವಾಗುವದು. ಹೆಚ್ಚು ಹಚ್ಚು ಅಭ್ಯಾಸ ಮಾಡಿದ ಶಿಕ್ಷಕನ ಬಾಯಿಂದ ಹೆಚ್ಚು ಹೆಚ್ಚು ಗಡಚಾದ ಶಬ್ದಗಳು ಹೊರಡುತ್ತವೆ. ಅಂಥ ಜಾಣನಾದ ಶಿಕ್ಷಕನು ಚಿಕ್ಕ ಬಾಲಕರಿಗೆ ಚೊಕ್ಕಾಗಿ ತಿಳಿಯುವಂತೆ ನಕ್ಕು ನಕ್ಕು ಕಲಿಸಿದರೆ, ಆ ಮಕ್ಕಳಿಗೆ ವಿಕ್ಕಾದ ಅಕ್ಕರತೆಯುಂಟಾಗಿ ಶಿಕ್ಷಣ ಕಾರ್ಯವು ಒಳ್ಳೇ ಸುಗಮವಾಗಿ ಸಾಗುವದು. ಗಹನ ಭಾಷೆಯು ಕೆಲಸದ್ದಲ್ಲ. ಉದಾ: ಒಬ್ಬ ಘನಪಂಡಿತನು ಸಂಜೆಯ ಮುಂದೆ ಅಳುತ್ತಿರುವ ಮಗನನ್ನು ಸುಮ್ಮನಿರಿಸಬೇಕೆಂದು ಸಂಧ್ಯಾರಾಗ, ತಾರೆ, ತಂಗಾಳಿ, ಚಂದ್ರ, ಬಿಳದಿಂಗಳು ಮುಂತಾದ ಎಷ್ಟೋ ವಿಷಯಗಳನ್ನು ವರ್ಣಿಸಿದರೂ ಆ ಮಗುವು ಸುಮ್ಮನಾಗಲಿಲ್ಲ. ಆಗ ಅವನ ಮಗಳು ಬಂದು ಎತ್ತಿಕೊಂಡು ತಿರುಗಿಸುತ್ತ ಹೋದಳು. ಹೋಯಿತು ಬಿಡು, ತಮ್ಮಾ ಅಲ್ಲಿನೋಡು, ಚಂದಪ್ಪನು ಗಿಡದ ಮೇಲೆ ಕೂತಿರುವನು. ಎಂದು ತೋರಿಸಿದ ಕೂಡಲೇ ಮಗುವು ಸುಮ್ಮನಾಗಿ ನಗುತ್ತ ಆಡತೊಡಗಿದನು. ತಿಳಿಯದ ಭಾಷೆಯಿಂದ ಘನಪಂಡಿತನು ತನ್ನ ಬಾಲಕನನ್ನು ಮತ್ತಿಷ್ಟು ಅಳಿಸಿದನು. ತಿಳಿಯುವ ಭಾಷೆಯಿಂದ ಅವನ ಮಗಳು ನಗಿಸಿದಳು. ಆ ನಗೆಯು ಸುಲಭವಾದ ಭಾಷೆಯ ಪರಿಣಾಮವಲ್ಲವೆ ?

ಭಾಷೆಯ ದ್ವಾರದಿಂದಲೇ ವಿಷಯದ ಜ್ಞಾನವಾಗತಕ್ಕದ್ದಿರುತ್ತದೆ. ಆದ್ದರಿಂದ ಶಿಕ್ಷಕರು, ಅದರ ಬಗ್ಗೆ ಒಳ್ಳೇ ಎಚ್ಚರ ಪಡತಕ್ಕದ್ದು. ಶಿಕ್ಷಕನಿಗೆ ಸಹಜವಾಗಿ ಗೊತ್ತಿದ್ದ ಸಂಗತಿಗಳನ್ನು ಬಾಲಕರು ನೂತನವಾದ ಸಂಗತಿಗಳೆಂದು ತಿಳಿದು, ಆನಂದ ಪಡುತ್ತಾರೆ. ಈ ಪ್ರಕಾರ ಸಹಜವಾಗಿದ್ದ ಸಂಗತಿಗಳನ್ನು ಬಾಲಕರು ಆನಂದಿಸುವಂತೆ ಹೇಳುತ್ತ ಮನೆಯಲ್ಲಿ ತಾಯಿತಂದೆಗಳ ಕೂಡ ಎಷ್ಟು ಅಕ್ಕರತೆಯಿಂದ ಇರುವರೋ ಅಷ್ಟೇ ಅಕ್ಕರತೆಯಿಂದ ಬಾಲಕರು ಸಾಲೆಯಲ್ಲಿ ಇರುವಂತೆ ಶಿಕ್ಷಕನ ವರ್ತನವು ಇರತಕ್ಕದ್ದು. ವಯಸ್ಸನ್ನು ಒಟ್ಟು ಗುರ್ತಿಸಬೇಕಾದರೆ ಶಿಕ್ಷಕನಾರು ? ಬಾಲಕನಾರು ? ಎಂಬುದು ಸಹ ಒಂದು ವೇಳೆ ತಿಳಿಯಕೂಡದು. ತೀರ ಆರಂಭದ ಬಾಲಕರಿಗೆ ಪಾಟಿ ಪೆನ್ಸಿಲುಗಳನ್ನು ಸಹ ಹಿಡಿಯಲಿಕ್ಕೆ ಗೊತ್ತಿರುವದಿಲ್ಲ. ಒಂದು ವೇಳೆ ಹಿಡಿಯಲಿಕ್ಕೆ ಬಂದರೂ 'ಅ' ಅಕ್ಷರವನ್ನು 'ಇ' ಹೀಗೆ ಬುಡಮೇಲು ಮಾಡಿ ಬರೆಯುವರು. ಇಂಥ ಪ್ರಸಂಗದಲ್ಲಿ ಶಿಕ್ಷಕನು ರೊಚ್ಚಿನಿಂದ ಆ ಚಿಕ್ಕ ಬಾಲಕನನ್ನು ಚಪ್ಪನೆ ಛಡಿಯಿಂದ ಚುಚ್ಚಲು ಆ ಮಗುವು ಸಾಲೆಯನ್ನು ನೆಚ್ಚದೆ ಗಚ್ಚಮಾಡಿ ಬಿಡುತ್ತಾನೆ. ಮುಂದೆ ಅವನನ್ನು ಒತ್ತಾಯದಿಂದ ಸಾಲೆಗೆ ರೂಢಿಮಾಡಬೇಕಾದರೆ ೧–೨ ವರ್ಷಗಳು ಸಹಜವಾಗಿ ಬೇಕಾಗುವವು.

ಬಾಲಕರ ವರ್ಗವನ್ನು ಕಲಿಸಕ್ಕೆ ಸದಯಾಂತಃಕರಣಯೂ, ಅನುಭವಿಕನೂ, ಬುದ್ಧಿವಂತನೂ, ಅದ ಶಿಕ್ಷಕನನ್ನು ನಿಯಮಿಸಬೇಕು. ಇಂಥ ಶಿಕ್ಷಕರು ಫ್ರೆಂಡರಾದವರು ಇರುವದು ಒಳ್ಳೆಯ ಇಷ್ಟವಾದದ್ದು. ಶಿಕ್ಷಕನೆಂದರೆ ಚಿಕ್ಕ ಬಾಲಕರ ಪಾಲಕನು. ಹೇಗಂದರ ತೋಟವವನು ತನ್ನ ತೋಟದಲ್ಲಿ ಸಸಿಗಳನ್ನು ಹಚ್ಚಿ ನೀರುಗೊಬ್ಬರಗಳನು ಸರಿಯಾಗಿ ಹಾಕಿ ಜೋಪಾನ ಮಾಡಿ ಬೆಳಿಸುವಂತೆ ಶಿಕ್ಷಕನಾದರೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶ

Pg No 7 to 10

Missing

ಈ ಪ್ರಕಾರ ತಾವು ಕೈಕೊಂಡ ಕಾರ್ಯಗಳಲ್ಲೆಲ್ಲ ಕರ್ತವ್ಯದಕ್ಷತೆಯನ್ನು ತೋರಿಸಿದರು. ಶಕ್ತಃಪ್ರಣಯೇರಾಚಾರ್ಯಃ ಎಂಬ ಉಕ್ತ್ಯನುಸರಿಸಿ ಇವರ ಕೀರ್ತಿಯು ಬೆಳೆದು ಸರಕಾರಕ್ಕೂ ಜನತೆಗೂ ಕೂಡೇ ಬೇಕಾದರು. ಸರಕಾರದವರು ಇವರಿಗೆ ರಾವ ಬಹಾದ್ದೂರ, ದಿವಾಣ ಬಹಾದ್ದೂರ ಪದವಿಗಳನ್ನು ಕೊಟ್ಟರು. ಮತ್ತು ಈ ವರ್ಷ ಮುಂಬಯಿ ಗವರ್ನರರು ಇವರಿಗೆ ಮಂತ್ರಿಪದವನ್ನು ಕೊಟ್ಟು ಇವರನ್ನು ಗೌರವಿಸಿದರು. ಅವರ ಕಡೆ ಒಕ್ಕಲತನ, ಸಹಕಾರ, ಫಾರೆಸ್ಟ್ರಿ ಮೊದಲಾದ ಖಾತೆಗಳಿರುವವು. ಮನುಷ್ಯನು ಎಡೆಬಿಡದೆ ಪ್ರಯತ್ನಿಸಿದರೆ ಉಚ್ಚ ಸ್ಥಿತಿಗೆ ಮುಟ್ಟಬಹುದೆಂಬ ಸೋಲ್ಪಂಕ್ತಿಯನ್ನು ದಿ. ಬ. ಕಂಬಳಿಯವರು ಕರ್ನಾಟದ ತರುಣರಿಗೆ ಹಾಕಿಬಿಟ್ಟಿರುವರು.

ದಿ. ಬ. ರವರು ಮಂತ್ರಿಪದವನ್ನು ಸಮರ್ಥಕವಾಗಿ ನಡೆಯಿಸಿ ಕರ್ನಾಟಕ ಏಕೀಕರಣ, ಶಿಕ್ಷಣ, ಉದ್ಯೋಗ, ಕಲೆ ಇವುಗಳ ಉತ್ಕರ್ಷವಾಗುವಂತೆ ಪ್ರಯತ್ನಿಸುವರೆಂದು ಕೋರುತ್ತೇವೆ.

ದಿ. ಬ ಕಂಬಳಿಯವರ ವಿಷಯವಾಗಿ ಪದ್ಯಗಳು

ಕವಿ— ಶಾ. ಗು. ಶಿವಶಿಷ್ಟರು, ಹುಬ್ಬಳ್ಳಿ

ಸಿವನೆ ನಿನ್ನಯ ಕರುಣದಿಂದಲಿ ।
ಯವನಿಯೊಳ್ ನರರೇಳ್ಗೆ ಪಡೆವರು ।
ಜವನಿ ಕೀರ್ತಿಯ ಹೊಂದಿ ಭುವನದಿ ನಿತ್ಯ ಹೊಳೆಯುವರು ॥
ರವಿಯು ರಾವ್ ಬಹದ್ದೂರ ಕಂಬಳಿ ।
ಯವರರೀ ಮಾತಿಂಗೆ ಸಾಕ್ಷಿಯು ।
ಇವರು ತೋಟಪ್ಪಾತ್ಮಜರು ಸಿದ್ಧಪ್ಪನಾಮಕರು ॥ ೧ ॥

ತೋರಿತಿವರಿಗೆಯೂದಿ ಬಡತನ ।
ಭಾರಿ ಕಷ್ಟವು ಬಂದರೆಯು ತಾವ್ ।
ಧೀರತನದಿಂ ಏರಿದಂ ಎಲ್. ಎಲ್ ಬೀಯೆ ಮುಂತಾಗಿ ॥
ವೀರತನದ ವಕೀಲರೆನಿಸುತ ।
ತೀರುತಲಿ ಕಡೆಗಾದರೈ ತಾವ್ ।
ಚೇರಮನ್ ಪ್ರೆಸಿಡೆಂಟು ಮುನಸೀಪಾಲ್ಟಿ, ಹುಬ್ಬಳ್ಳಿ ॥ ೨ ॥

ಇರಿನಂತೆ " ಎಲವೂ ವೇರ್ಯವಾಗುವದು. ಹೆಚ್ಚು ಹೆಚ್ಚು ಅಭ್ಯಾಸ ಮಾಡಿದ ಶಿಕ್ಷಕನ ಬಾಯಿಂದ ಹೆಚ್ಚು, ಹೆಚ್ಚು, ಗಡಚಾದ ಶಬ್ದಗಳು ಹೊರಡುತ್ತವೆ. ಅಂಥ ಜಾಣನಾದ ಶಿಕ್ಷಕನು ಚಿಕ್ಕ ಬಾಲಕರಿಗೆ ಚೊಕ್ಕಾಗಿ ತಿಳಿಯುವಂತೆ ನಕ್ಕು ನಕ್ಕು ಕಲಿಸಿದರೆ, ಆ ಮಕ್ಕಳಿಗೆ ವಿಕ್ಕಾದ ಅಕ್ಕರತೆಯುಂಟಾಗಿ ಶಿಕ್ಷಣ ಕಾರ್ಯವು ಒಳ್ಳೇ ಸುಗಮವಾಗಿ ಸಾಗುವದು. ಗಹನ ಭಾಷೆಯು ಕೆಲಸದ್ದಲ್ಲ. ಉದಾ: ಒಬ್ಬ ಘನಪಂಡಿತನು ಸಂಜೆಯ ಮುಂದೆ ಅಳುತ್ತಿರುವ ಮಗನನ್ನು ಸುಮ್ಮನಿರಿಸಬೇಕೆಂದು ಸಂಧ್ಯಾರಾಗ, ತಾರೆ, ತಂಗಾಳಿ, ಚಂದ್ರ, ಬೆಳದಿಂಗಳು ಮುಂತಾದ ಎಷ್ಟೋ ವಿಷಯಗಳನ್ನು ವರ್ಣಿಸಿದರೂ ಆ ಮಗುವು ಸುಮ್ಮನಾಗಲಿಲ್ಲ. ಆಗ ಅವನ ಮಗಳು ಬಂದು ಎತ್ತಿಕೊಂಡು ತಿರುಗಿಸುತ್ತ ಹೋದಳು. ಹೋಯಿತು ಬಿಡು, ತಮ್ಮಾ ಅಲ್ಲಿನೋಡು, ಚಂದಪ್ಪನು ಗಿಡದ ಮೇಲೆ ಕೂತಿರುವನು. ಎಂದು ತೋರಿಸಿದ ಕೂಡಲೇ ಮಗುವು ಸುಮ್ಮನಾಗಿ ನಗುತ್ತ ಆಡತೊಡಗಿದನು. ತಿಳಿಯದ ಭಾಷೆಯಿಂದ ಘನಪಂಡಿತನು ತನ್ನ ಬಾಲಕನನ್ನು ಮತ್ತಿಷ್ಟು ಅಳಿಸಿದನು. ತಿಳಿಯುವ ಭಾಷೆಯಿಂದ ಅವನ ಮಗಳು ನಗಿಸಿದಳು. ಆ ನಗೆಯು ಸುಲಭವಾದ ಭಾಷೆಯ ಪರಿಣಾಮವಲ್ಲವೆ ?

ಭಾಷೆಯ ದ್ವಾರದಿಂದಲೇ ವಿಷಯದ ಜ್ಞಾನವಾಗತಕ್ಕದ್ದಿರುತ್ತದೆ. ಆದ್ದರಿಂದ ಶಿಕ್ಷಕರು, ಅದರ ಬಗ್ಗೆ ಒಳ್ಳೇ ಎಚ್ಚರ ಪಡತಕ್ಕದ್ದು. ಶಿಕ್ಷಕನಿಗೆ ಸಹಜವಾಗಿ ಗೊತ್ತಿದ್ದ ಸಂಗತಿಗಳನ್ನು ಬಾಲಕರು ನೂತನವಾದ ಸಂಗತಿಗಳೆಂದು ತಿಳಿದು, ಆನಂದ ಪಡುತ್ತಾರೆ. ಈ ಪ್ರಕಾರ ಸಹಜವಾಗಿದ್ದ ಸಂಗತಿಗಳನ್ನು ಬಾಲಕರು ಆನಂದಿಸುವಂತೆ ಹೇಳುತ್ತ ಮನೆಯಲ್ಲಿ ತಾಯಿತಂದೆಗಳ ಕೂಡ ಎಷ್ಟು ಅಕ್ಕರತೆಯಿಂದ ಇರುವರೋ ಅಷ್ಟೇ ಅಕ್ಕರತೆಯಿಂದ ಬಾಲಕರು ಸಾಲೆಯಲ್ಲಿ ಇರುವಂತೆ ಶಿಕ್ಷಕನ ವರ್ತನವು ಇರತಕ್ಕದ್ದು. ವಯಸ್ಸನ್ನು ಬಿಟ್ಟು ಗುರ್ತಿಸಬೇಕಾದರೆ ಶಿಕ್ಷಕನಾರು ? ಬಾಲಕನಾರು ? ಎಂಬುದು ಸಹ ಒಂದು ವೇಳೆ ತಿಳಿಯಕೂಡದು. ತೀರ ಆರಂಭದ ಬಾಲಕರಿಗೆ ಪಾಟ ಪೆನ್ಸಿಲುಗಳನ್ನು ಸಹ ಹಿಡಿಯಲಿಕ್ಕೆ ಗೊತ್ತಿರುವದಿಲ್ಲ. ಒಂದು ವೇಳೆ ಹಿಡಿಯಲಿಕ್ಕೆ ಬಂದರೂ 'ಅ' ಅಕ್ಷರವನ್ನು 'ಅ' ಹೀಗೆ ಬುಡಮೇಲು ಮಾಡಿ ಬರೆಯುವರು. ಇಂಥ ಪ್ರಸಂಗದಲ್ಲಿ ಶಿಕ್ಷಕನು ರೊಚ್ಚಿನಿಂದ ಆ ಚಿಕ್ಕ ಬಾಲಕನನ್ನು ಛಪ್ಪನೆ ಛಡಿಯಿಂದ ಚುಚ್ಚಲು ಆ ಮಗುವು ಸಾಲೆಯನ್ನು ನೆಚ್ಚದೆ ಗಚ್ಚಮಾಡಿ ಬಿಡುತ್ತಾನೆ. ಮುಂದೆ ಅವನನ್ನು ಒತ್ತಾಯದಿಂದ ಸಾಲೆಗೆ ರೂಢಿಮಾಡಬೇಕಾದರೆ ೧–೨ ವರ್ಷಗಳು ಸಹಜವಾಗಿ ಬೇಕಾಗುವವು.

ಬಾಲಕರ ವರ್ಗವನ್ನು ಕಲಿಸಕ್ಕೆ ಸದಯಾಂತಃಕರುಣೆಯೂ, ಅನುಭವಿಕನೂ, ಬುದ್ಧಿವಂತನೂ, ಅದ ಶಿಕ್ಷಕನನ್ನು ನಿಯಮಿಸಬೇಕು. ಇಂಥ ಶಿಕ್ಷಕರು ಟೀಂಡರಾದವರು ಇರುವದು ಒಳ್ಳೆಯ ಇಷ್ಟವಲ್ಲವಿದ್ದು. ಶಿಕ್ಷಕನಂದರೆ ಚಿಕ್ಕ ಬಾಲಕರ ಪಾಲಕನು. ಹೇಗಂದರೆ ತೋಟವನು ತನ್ನ ತೋಟದಲ್ಲಿ ಸಸಿಗಳನ್ನು, ಹಚ್ಚಿ ನೀರುಗೊಬ್ಬರಗಳನ್ನು ಸರಿಯಾಗಿ ಹಾಕಿ ಜೋಪಾನ ಮಾಡಿ ಬೆಳಿಸುವಂತೆ ಶಿಕ್ಷಕನಾದರೂ ವಿದ್ಯಾರ್ಥಿಗಳಿಗೆ ಮಾರ್ಗದರ್ಶ

ಕನಾಗಿ, ಅವರನ್ನು ನೋಡಿ ಮೊದಲೇ ಮುಂಗಂಡು ಅದರಲ್ಲಿದ್ದ ಕುಂದುಕೊರತೆಗಳನ್ನು ಹೋಗಲಾಡಿಸಿ ಅವರಲ್ಲಿ ಅಂಕುರರೂಪದಿಂದ ಇದ್ದ ಶಾರೀರಿಕ ಮಾನಸಿಕ ಮತ್ತು ನೈತಿಕ ಇತ್ಯಾದಿಸಾಮರ್ಥ್ಯಗಳು ಪರಿಪೂರ್ಣವಾಗುವಂತೆ ಮಾದರಿ ತೆಗೆದುಕೊಳ್ಳುವ ಮನುಷ್ಯನನ್ನು ಅಂದರೆ ನಾಗರಿಕನನ್ನು ಮಾಡುವನು.

ಬಾಲಶಿಕ್ಷಣದ ಮುಖ್ಯವಾದ ಉದ್ದೇಶವು.—ಈ ಉದ್ದೇಶವು ಈಡೇರ ಬೇಕಾದರೆ ಸರಕಾರದವರೂ ಸಮಾಜದ ಮುಂದಾಳುಗಳೂ ಕೆಳಗಿನ ಕುಂದುಕೊರತೆಗಳನ್ನು ಹೊಗಲಾಡಿಸುವದು ಅವಶ್ಯವು.

(ಅ) ಯಾವತ್ತೂ ಪ್ರಾಥಮಿಕ ಶಾಲೆಗಳಲ್ಲಿ 'ಕಿಂಡರ ಗಾರ್ಟನ' ಮತ್ತು 'ಮಾಂಟೇಸೋರಿ' ಪದ್ಧತಿಯಂತೆ ಯಾವತ್ತೂ ಉಪಕರಣಗಳ ಸಿದ್ಧತೆ ಇರಬೇಕು.

(ಬ) ಶಿಕ್ಷಣ ಕಾರ್ಯವು ಸುಗಮವಾಗಿ ಸಾಗಬೇಕಾದರೆ ಟ್ರೇಂಡ ಶಿಕ್ಷಕರು ಅತ್ಯವಶ್ಯವಾಗಿ ಬೇಕೇಬೇಕು. ಆದ್ದರಿಂದ ಬ್ರಿಟಿಶ ಮತ್ತು ಸಂಸ್ಥಾನ ಗಳಲ್ಲಿದ್ದ ಯಾವತ್ತೂ ಅನ್ ಟ್ರೇಂಡ ಶಿಕ್ಷಕರನ್ನು ಟ್ರೇಂಡ ಶಿಕ್ಷಕರನ್ನು ಮಾಡುವದಕ್ಕಾಗಿ ಮೊದಲಿನಂತೆ ಟ್ರೇನಿಂಗ ಕಾಲೇಜ ಸಂಸ್ಥೆಗಳನ್ನು ಸ್ಥಾಪಿಸಬೇಕು.

(ಕ) ಇಯತ್ತೆಗಳಲ್ಲಿ ಇರತಕ್ಕ ಅಭ್ಯಾಸ ಪಠ್ರಿಕೆಯ ಕ್ರಮಗಳನ್ನು ಹೆಚ್ಚು ಕಡಿಮೆ ಮಾಡಬೇಕು. ಮತ್ತು ಬಾಲಕರ ವರ್ಗಕ್ಕೆ ಹಚ್ಚತಕ್ಕ (ಪ್ರಾಯಮುರ) ಬಾಲ ಬೋಧಿನಿಯಲ್ಲಿ ಹಲವು ಗಡಚಾದ ಒತ್ತಕ್ಷರಗಳು ಅಂದರೆ ಖಗವ್ಯಗ್ರ, ಷಟ್ಪದ ಇತ್ಯಾದಿ ಅನೇಕ ಶಬ್ದಗಳು ಇರುತ್ತವೆ. ಆದ್ದರಿಂದ ಅವುಗಳನ್ನು ರದ್ದುಪಡಿಸಿ ಹೊಸದೊಂದು ಪುಸ್ತಕ ರಚಿಸಿ ಅದನ್ನು ಸರಕಾರದವರು ಮಂಜೂರ ಮಾಡಬೇಕು.

ಪ್ಲೇಟೋನ ತತ್ವಜ್ಞಾನ

ಲೇಖಕ:— ದೇ. ಗೋ. ಜೋಶಿ. ಅ. ವಾ. ಎ. ಫ್ಹಿ. ಸ್ಕೂಲ. ಗುಡಗೇರಿ

(ಕಳೆದ ತಿಂಗಳಿನಿಂದ ಮುಂದುವರದುದು)

ಈಪ್ರಕಾರ ಸಾಮಾನ್ಯವಾಗಿ ಜ್ಞಾನವೆಂದರೇನು ? ಅದನ್ನು ಹೇಗೆ ದೊರಕಿಸ ಬೇಕೆಂಬದು ವಿವರಿಸಲ್ಪಟ್ಟಿತು. ಇನ್ನು ಇದೇ ವಿಷಯದಲ್ಲಿ ಸಮಾವೇಶವಾಗುವ ಅಂದರೆ ಈಗ ವಿವೇಚಿಸಿದ ವಿಷಯಕ್ಕಿಂತ ಭಿನ್ನವಾಗಿರುವ ಪ್ಲೇಟೋನ ಬೇರೊಂದು ತತ್ವ ವಿಷಯದ ಕಡೆಗೆ ಹೊರಳುವಾ.

ಮಕ್ಕಳಿಗಾಗಿ ತಂದೆ ತಾಯಿಗಳ ಕರ್ತವ್ಯವು

ಲೇಖಕ—ಶಾಂತೇಶ, ಧಾರವಾಡ.

ಮಕ್ಕಳಿಂದಲೇ ಮನೆಗೆ ಬೆಲೆಯು ಬರುವದು. ಅದರಂತೆಯೇ ಸಂತತಿಯಿಂದಲೇ ಮಾನವನು ಕೆಡುವದು. ವರ್ತುಲಕ್ಕೆ ಆರಂಭದ ಹಾಗು ಅಂತ್ಯದ ಬಿಂದುವು ಒಂದೇ ಆಗಿರುವಂತೆ ಮನೆತನದ ಏಳುವಿಕೆ ಬೀಳುವಿಕೆಗೆ ಮಕ್ಕಳೇ ಕಾರಣವಾಗಿದ್ದಾರೆ. ಶಾಲೆಯ ಶಿಕ್ಷಣಕ್ಕಿಂತ ಮೊದಲೇ ಹುಡುಗರಲ್ಲಿ ಕೆಲವು ಸಂಗತಿಗಳು ಗಟ್ಟಿಯಾಗಿ ನಿಲ್ಲುತ್ತವೆ. ಮಕ್ಕಳ ಶಿಕ್ಷಣವು ಹುಟ್ಟಿದಂದಿನಿಂದಲೆ ಆರಂಭವಾಗುವದು. ಕೇವಲ ಧನವೇ ಮನುಷ್ಯನ ಸುಖದ ಸಾಧನವೆಂದು ತಿಳಿದು ಮಕ್ಕಳಿಗಾಗಿ ಅದನ್ನು ಕೂಡಿಸಿಡುವ ಮೊದಲು ಮಕ್ಕಳದೆಸೆಯಿಂದ ನಾವು ಏನುಮಾಡಬೇಕೆಂದು ಕೆಳಗೆ ವಿಚಾರಿಸಿರುವೆವು.

ಬಲವಾದ ದೇಹದಲ್ಲಿ ಗಟ್ಟಿಯಾದ ಮನಸ್ಸು ನಿಲ್ಲುವದು, ಎಂದೆನ್ನುವ ವಾಡಿಕೆಯುಂಟು. ಮನುಷ್ಯನ ಸಕಲೈಶ್ವರ್ಯಗಳು ದೇಹವನ್ನು ಅವಲಂಬಿಸಿರುವವು. ಅದೊಂದು ನೆಟ್ಟಗಿಲ್ಲದಿದ್ದರೆ ಉಳಿದದ್ದು ಏನಿದ್ದರೂ ವ್ಯರ್ಥವಾಗುವದು. ಅನೇಕ ಚಟಗಳಿಂದಾಗಲಿ, ಅನುವಂಶಿಕ ಬೇನೆಗಳಿಂದಾಗಲಿ ಕೂಡಿದವರ ಸಂತತಿಯು ಕೆಡುವದು. ಅನುವಂಶಿಕ ಬೇನೆ ಇದ್ದವರು ಲಗ್ನವನ್ನೇ ಮಾಡಿಕೊಳ್ಳಬಾರದು. ಮಿಕ್ಕವರು ಯಾವ ಚಟಗಳನ್ನೂ ಆಶ್ರಯಿಸದೆ ಬ್ರಹ್ಮಚರ್ಯವ್ರತವನ್ನು ತಕ್ಕವಯಿಸ್ಸಿನವರೆಗೆ ಪಾಲಿಸಬೇಕು. ಇಂತಹ ದಂಪತಿಗಳಿಂದ ಗಟ್ಟಿಯಾದ ಸಂತತಿಯು ಜನಿಸುವದು. ಬ್ರಹ್ಮಚರ್ಯವ್ರತವನ್ನು ಪಾಲಿಸಿದವರು ತೇಜಸ್ವಿಗಳಾಗುವರು. ಬ್ರಹ್ಮಚರ್ಯವ್ರತಪಾಲನದಿಂದ ಅವಯವಗಳು ಸದೃಢವಾಗುವಂತೆ ಆಂತರಿಕ ಶಕ್ತಿಗಳಾದರೂ ಬೆಳೆಯುತ್ತವೆ. ಚಿಕ್ಕಂದಿನಲ್ಲಿ ಯೋಗ್ಯವಾಗಿ ಬೆಳೆದವರು ಪ್ರೌಢಾವಸ್ಥೆಯಲ್ಲಿ ಒದಗುವ ಕಷ್ಟಗಳನ್ನೂ ಬಂದ ಬೇನೆಗಳನ್ನೂ ಸಹಿಸಿಕೊಳ್ಳುವರು. ಕಷ್ಟದ ಕೆಲಸಗಳಿಗೆ ಸೊಪ್ಪುಹಾಕದೆ ಹೊಡೆದು ಹಾಕುವ ಬಲವುಳ್ಳವರಾಗುವರು. ತಂದೆ ತಾಯಿಗಳು ದೃಢಕಾಯರೂ ಆರೋಗ್ಯವುಳ್ಳವರೂ ಆಗಿದ್ದರೆ ಸಂತತಿಯೂ ಹಾಗೆಯೇ ಆಗುವದು. ಈ ನಿಯಮವನ್ನು ವನುಷ್ಯೇತರ ಪ್ರಾಣಿಗಳಲ್ಲಿಕೂಡ ದಿನಾಲು ನೋಡುತ್ತೇವೆ. ಬಲವುಳ್ಳ ಪ್ರಾಣಿಗಳೂ ಸಸ್ಯಾದಿಗಳೂ ಬೆಲೆಬಾಳುವವು. ಹಾಗೆಯೇ ಸಂತತಿಯು ತಕ್ಕ ಪೋಷಣೆಯಿಂದ ಜಗತ್ತಿನಲ್ಲಿ ನಾಲ್ಕು ದಿವಸ ಬಾಳಿ ಜಗತ್ತಿನ ಪ್ರಗತಿಗೆ ಸಾಧಕವಾಗುವದು.

ಜನ್ಮದಾತೃಗಳು ತಕ್ಕ ಸಂತತಿಯನ್ನು ಹೊಂದಿದರೆ ತೀರಲಿಲ್ಲ. ಆಮೇಲೆ ಶಿಶುಗಳ ಯೋಗ್ಯ ರಕ್ಷಣೆಯ ಭಾರವು ಅವರಿಗಂಟುವದು. ಮನುಷ್ಯನ ಶೈಶವ ಹಾಗೂ ವಾರ್ಧಕ್ಯ ಈ ಅವಸ್ಥೆಗಳು ಪರಾಧೀನವಾಗಿರುವವು. ವಾರ್ಧಕ್ಯದ ಅವಸ್ಥೆಯು ಕೊನೆಯದಾಗಿರುವದರಿಂದ ಪರರಿಗೆ ತಿರಸ್ಕರಣೀಯವಾದರೂ ಅಂಥವರಿಗೂ ಜೀವವು ಬೆಲ್ಲಕ್ಕಿಂತ ಸಿಹಿ

Pg no 13 to 16

Missing

ಕನಾಗಿ, ಅವರನ್ನು ನೋಡಿ ಮೊದಲೇ ಮುಂಗಂಡು ಅದರಲ್ಲಿದ್ದ ಕುಂದುಕೊರತೆಗಳನ್ನು ಹೋಗಲಾಡಿಸಿ ಅವರಲ್ಲಿ ಅಂಕುರರೂಪದಿಂದ ಇದ್ದ ಶಾರೀರಿಕ ಮಾನಸಿಕ ಮತ್ತು ನೈತಿಕ ಇತ್ಯಾದಿಸಾಮರ್ಥ್ಯಗಳು ಪರಿಪೂರ್ಣವಾಗುವಂತೆ ಮಾದರಿ ತೆಗೆದುಕೊಳ್ಳುವ ಮನುಷ್ಯನನ್ನು ಅಂದರೆ ನಾಗರಿಕನನ್ನು ಮಾಡುವನು.

ಬಾಲಶಿಕ್ಷಣದ ಮುಖ್ಯವಾದ ಉದ್ದೇಶವು.—ಈ ಉದ್ದೇಶವು ಈಡೇರ ಬೇಕಾದರೆ ಸರಕಾರದವರೂ ಸಮಾಜದ ಮುಂದಾಳುಗಳೂ ಕೆಳಗಿನ ಕುಂದುಕೊರತೆಗಳನ್ನು ಹೊಗಲಾಡಿಸುವದು ಅವಶ್ಯವು.

(ಅ) ಯಾವತ್ತೂ ಪ್ರಾಥಮಿಕ ಶಾಲೆಗಳಲ್ಲಿ 'ಕಿಂಡರ ಗಾರ್ಟನ' ಮತ್ತು 'ಮಾಂಟೇಸೋರಿ' ಪದ್ಧತಿಯಂತೆ ಯಾವತ್ತೂ ಉಪಕರಣಗಳ ಸಿದ್ಧತೆ ಇರಬೇಕು.

(ಬ) ಶಿಕ್ಷಣ ಕಾರ್ಯವು ಸುಗಮವಾಗಿ ಸಾಗಬೇಕಾದರೆ ಟ್ರೇಂಡ ಶಿಕ್ಷಕರು ಅತ್ಯವಶ್ಯವಾಗಿ ಬೇಕೇಬೇಕು. ಆದ್ದರಿಂದ ಬ್ರಿಟಿಶ ಮತ್ತು ಸಂಸ್ಥಾನ ಗಳಲ್ಲಿದ್ದ ಯಾವತ್ತೂ ಅನ್ ಟ್ರೇಂಡ ಶಿಕ್ಷಕರನ್ನು ಟ್ರೇಂಡ ಶಿಕ್ಷಕರನ್ನು ಮಾಡುವದಕ್ಕಾಗಿ ಮೊದಲಿನಂತೆ ಟ್ರೇನಿಂಗ ಕಾಲೇಜ ಸಂಸ್ಥೆಗಳನ್ನು ಸ್ಥಾಪಿಸಬೇಕು.

(ಕ) ಇಯತ್ತೆಗಳಲ್ಲಿ ಇರತಕ್ಕ ಅಭ್ಯಾಸ ಪಠ್ಯಕ್ರಮಗಳನ್ನು ಹೆಚ್ಚು ಕಡಿಮೆ ಮಾಡಬೇಕು. ಮತ್ತು ಬಾಲಕರ ವರ್ಗಕ್ಕೆ ಹೆಚ್ಚುತಕ್ಕ (ಪ್ರಾಯಮುರ) ಬಾಲ ಬೋಧಿನಿಯಲ್ಲಿ ಹಲವು ಗಡಚಾದ ಒತ್ತಕ್ಷರಗಳು ಅಂದರೆ ಖಗಮೃಗ, ಷಟ್ಪದ ಇತ್ಯಾದಿ ಅನೇಕ ಶಬ್ದಗಳು ಇರುತ್ತವೆ. ಆದ್ದರಿಂದ ಅವುಗಳನ್ನು ರದ್ದುಪಡಿಸಿ ಹೊಸದೊಂದು ಪುಸ್ತಕ ರಚಿಸಿ ಅದನ್ನು ಸರಕಾರದವರು ಮಂಜೂರ ಮಾಡಬೇಕು.

ಪ್ಲೇಟೋನ ತತ್ವಜ್ಞಾನ

ಲೇಖಕ:— ದೇ. ಗೋ. ಜೋಶಿ. ಬಿ. ಎ. ಎಸ್. ಎಲ್. ಸ್ಕೂಲ. ಗುಡಗೇರಿ

(ಕಳೆದ ತಿಂಗಳಿನಿಂದ ಮುಂದುವರಿದುದು)

ಈಪ್ರಕಾರ ಸಾಮಾನ್ಯವಾಗಿ ಜ್ಞಾನವೆಂದರೇನು ? ಅದನ್ನು ಹೇಗೆ ದೊರಕಿಸ ಬೇಕೆಂಬದು ವಿವರಿಸಲ್ಪಟ್ಟಿತು. ಇನ್ನು ಇದೇ ವಿಷಯದಲ್ಲಿ ಸಮಾವೇಶವಾಗುವ ಅಂದರೆ ಈಗ ವಿವೇಚಿಸಿದ ವಿಷಯಕ್ಕಿಂತ ಭಿನ್ನವಾಗಿರುವ ಪ್ಲೇಟೋನ ಬೇರೊಂದು ತತ್ವ ವಿಷ

ಮಕ್ಕಳಿಗಾಗಿ ತಂದೆ ತಾಯಿಗಳ ಕರ್ತವ್ಯವು

ಲೇಖಕ—ಶಾಂತೇಶ, ಧಾರವಾಡ.

ಮಕ್ಕಳಿಂದಲೇ ಮನೆಗೆ ಬೆಲೆಯು ಬರುವದು. ಅದರಂತೆಯೇ ಸಂತತಿಯಿಂದಲೇ ಮನೆತನವು ಕೆಡುವದು. ವರ್ತುಲಕ್ಕೆ ಆರಂಭದ ಹಾಗು ಅಂತ್ಯದ ಬಿಂದುವು ಒಂದೇ ಆಗಿರುವಂತೆ ಮನೆತನದ ಏಳುವಿಕೆ ಬೀಳುವಿಕೆಗೆ ಮಕ್ಕಳೇ ಕಾರಣವಾಗಿದ್ದಾರೆ. ಶಾಲೆಯ ಶಿಕ್ಷಣಕ್ಕಿಂತ ಮೊದಲೇ ಹುಡುಗರಲ್ಲಿ ಕೆಲವು ಸಂಗತಿಗಳು ಗಟ್ಟಿಯಾಗಿ ನಿಲ್ಲುತ್ತವೆ. ಮಕ್ಕಳ ಶಿಕ್ಷಣವು ಹುಟ್ಟಿದಂದಿನಿಂದಲೆ ಆರಂಭವಾಗುವದು. ಕೇವಲ ಧನವೇ ಮನುಷ್ಯನ ಸುಖದ ಸಾಧನವೆಂದು ತಿಳಿದು ಮಕ್ಕಳಿಗಾಗಿ ಅದನ್ನು ಕೂಡಿಸಿಡುವ ಮೊದಲು ಮಕ್ಕಳದೆಸೆಯಿಂದ ನಾವು ಏನುಮಾಡಬೇಕೆಂದು ಕೆಳಗೆ ವಿಚಾರಿಸಿರುವೆವು.

ಬಲವಾದ ದೇಹದಲ್ಲಿ ಗಟ್ಟಿಯಾದ ಮನಸ್ಸು ನಿಲ್ಲುವದು, ಎಂದೆನ್ನುವ ವಾಡಿಕೆಯುಂಟು. ಮನುಷ್ಯನ ಸಕಲೈಶ್ವರ್ಯಗಳು ದೇಹವನ್ನು ಅವಲಂಬಿಸಿರುವವು. ಅದೊಂದು ಸಿಟ್ಟಿಗಿಲ್ಲದಿದ್ದರೆ ಉಳಿದದ್ದು ಏನಿದ್ದರೂ ವ್ಯರ್ಥವಾಗುವದು. ಅನೇಕ ಚಟಗಳಿಂದಾಗಲಿ, ಅನುವಂಶಿಕ ಬೇನೆಗಳಿಂದಾಗಲಿ ಕೂಡಿದವರ ಸಂತತಿಯು ಕೆಡುವದು. ಅನುವಂಶಿಕ ಬೇನೆ ಇದ್ದವರು ಲಗ್ನವನ್ನೇ ಮಾಡಿಕೊಳ್ಳಬಾರದು. ಮಿಕ್ಕವರು ಯಾವ ಚಟಗಳನ್ನೂ ಆಶ್ರಯಿಸದೆ ಬ್ರಹ್ಮಚರ್ಯವ್ರತವನ್ನು ತಕ್ಕವಯಿಸ್ಸಿನವರೆಗೆ ಪಾಲಿಸಬೇಕು. ಇಂತಹ ದಂಪತಿಗಳಿಂದ ಗಟ್ಟಿಯಾದ ಸಂತತಿಯು ಜನಿಸುವದು. ಬ್ರಹ್ಮಚರ್ಯವ್ರತವನ್ನು ಪಾಲಿಸಿದವರು ತೇಜಸ್ವಿಗಳಾಗುವರು. ಬ್ರಹ್ಮಚರ್ಯವ್ರತಪಾಲನದಿಂದ ಅವಯವಗಳು ಸದೃಢವಾಗುವಂತೆ ಆಂತರಿಕ ಶಕ್ತಿಗಳಾದರೂ ಬೆಳೆಯುತ್ತವೆ. ಚಿಕ್ಕಂದಿನಲ್ಲಿ ಯೋಗ್ಯವಾಗಿ ಬೆಳೆದವರು ಪ್ರೌಢಾವಸ್ಥೆಯಲ್ಲಿ ಒದಗುವ ಕಷ್ಟಗಳನ್ನೂ ಬಂದ ಬೇನೆಗಳನ್ನೂ ಸಹಿಸಿಕೊಳ್ಳುವರು. ಕಷ್ಟದ ಕೆಲಸಗಳಿಗೆ ಸೊಪ್ಪುಹಾಕದೆ ಹೊಡೆದು ಹಾಕುವ ಬಲವುಳ್ಳವರಾಗುವರು. ತಂದೆ ತಾಯಿಗಳು ದೃಢಕಾಯರೂ ಆರೋಗ್ಯವುಳ್ಳವರೂ ಆಗಿದ್ದರೆ ಸಂತತಿಯೂ ಹಾಗೆಯೇ ಆಗುವದು. ಈ ನಿಯಮವನ್ನು ಮನುಷ್ಯೇತರ ಪ್ರಾಣಿಗಳಲ್ಲಿಕೂಡ ದಿನಾಲು ನೋಡುತ್ತೇವೆ. ಬಲವುಳ್ಳ ಪ್ರಾಣಿಗಳೂ ಸಸ್ಯಾದಿಗಳೂ ಬೆಲೆಬಾಳುವವು. ಹಾಗೆಯೇ ಸಂತತಿಯು ತಕ್ಕ ಪೋಷಣೆಯಿಂದ ಜಗತ್ತಿನಲ್ಲಿ ನಾಲ್ಕು ದಿವಸ ಬಾಳಿ ಜಗತ್ತಿನ ಪ್ರಗತಿಗೆ ಸಾಧಕವಾಗುವದು.

ಮಾತಾಪಿತೃಗಳು ತಕ್ಕ ಸಂತತಿಯನ್ನು ಹೊಂದಿಸಿರೆ ತೀರಲಿಲ್ಲ. ಆಮೇಲೆ ಶಿಶುಗಳ ಯೋಗ್ಯ ರಕ್ಷಣೆಯ ಭಾರವು ಅವರಿಗಂಟುವದು. ಮನುಷ್ಯನ ಶೈಶವ ಹಾಗೂ ವಾರ್ಧಕ್ಯ ಈ ಅವಸ್ಥೆಗಳು ಪರಾಧೀನವಾಗಿರುವವು. ವಾರ್ಧಕ್ಯದ ಅವಸ್ಥೆಯು ಕೊನೆಯದಾಗಿರುವದರಿಂದ ಪರರಿಗೆ ತಿರಸ್ಕರಣೀಯವಾದರೂ ಅಂಥವರಿಗೂ ಜೀವವು ಬಿಲ್ಲಕ್ಕಿಂತ ಸಿಹಿ

ಯಾಗಿರುವದು ಸ್ವಾಭಾವಿಕವು. ಕಷ್ಟನೋವುಗಳು ಜೀವ ಮಾತ್ರಕ್ಕೆ ಸಮಾನವಾಗುವದರಿಂದ ಅವರನ್ನು ಬಲಕಣ್ಣಿನಿಂದ ಕಾಣುವದು ಕ್ರಮಪ್ರಾಪ್ತವಾದ ಧರ್ಮವಾಗಿದೆ. ಆದರೆ ಚಿಕ್ಕಮಕ್ಕಳ ಮಾತು ಹಾಗಲ್ಲ, ಇವರಿಂದಲೇ ಮುಂದೆ ನೂತನ ಜಗತ್ತಾಗುವದರಿಂದ ಅವರ ಆರೈಕೆಯನ್ನು ದಕ್ಷತೆಯಿಂದಲೂ ಮಮತೆಯಿಂದಲೂ ಮಾಡಬೇಕಾಗುವದು; ಇಷ್ಟೇ ಅಲ್ಲ. ಇಂಥ ತಂದೆತಾಯಿಗಳು ಬಡವರಾಗಿದ್ದರೆ ಸಮಾಜದವರೂ ಸರಕಾರದವರೂ ಆ ಸಂತತಿಯ ಯೋಗಕ್ಷೇಮವನ್ನು ವಹಿಸಬೇಕಾಗುವದು. ಯುರೋಪದ ದೇಶಗಳಲ್ಲಿ ಕೂಲಿಕುಂಬಳಿ ಮಾಡುವ ಜನರ ಮಕ್ಕಳ ಆರೈಕೆ ಶಿಕ್ಷಣಗಳಿಗಾಗಿ ಸಾಮಾಜಿಕ ಸಂಸ್ಥೆಗಳಿರುವವು. ನಮ್ಮಲ್ಲಿ ಸುಧಾರಣೆಯು ಇಲ್ಲದ್ದರಿಂದ ಸಮಾಜ ಸಂಸ್ಥೆಗಳ ಪ್ರಾದುರ್ಭಾವವಾಗಿಲ್ಲ. ಸಮಾಜವು ಪುಷ್ಟವಾಗಲಿಕ್ಕೆ ತಕ್ಕ ಉದ್ಯೋಗಗಳ ಬೆಂಬಲವು ಬೇಕು. ಉದ್ಯೋಗದ ಅಭಾವದಿಂದ ದಾರಿದ್ರ್ಯವು ಜನಿಸಿ ತನ್ಮೂಲಕ ಅಸೂಯ ಕ್ಷುಲ್ಲಕ ಸ್ವಾರ್ಥ, ಮೊದಲಾದ ದಾರಿದ್ರ್ಯ ಜನ್ಯ ಗುಣಗಳು ಬೆಳೆದು ಸಮಾಜಗಳು ಕ್ಷೀಣವಾಗುವವು. ತಿಪ್ಪೆಯಲ್ಲಿ ರತ್ನಗಳು ಕಳೆದು ಹೋಗುವಂತೆ ಮಕ್ಕಳು ಪೋಷಣೆಯಿಲ್ಲದೆ ಮೃತಿಮಾರ್ಗವನ್ನು ಐದುವವು. ನಮ್ಮ ದೇಶದಲ್ಲಿ ಚಿಕ್ಕಮಕ್ಕಳ ಸಾವಿನ ಸಂಖ್ಯೆಯು ಒಟ್ಟು ಸಂಖ್ಯೆಗೆ ಮುಕ್ಕಾಲು ಪಾಲಿಗೆ ಸಮೀಪಿಸಿದೆ. ಒಟ್ಟಿಗೆ ಜನರ ಆಯುಃಪರಿಮಿತಿಯು ೨೨ಕ್ಕೆ ಬಂದಿದೆ. ಈ ದಾರಿದ್ರ್ಯ ಗೆದ್ದಲಿಯ ಹೊಡೆತವು ಸಂತತಿಗಂತೂ ವಿಶೇಷವಾಗಿ ಅಂಟಿರುವದು. ಇದ್ದದ್ದರಲ್ಲಿಯಾದರೂ ಸುಧಾರಣೆ ಹೊಂದುವದು ಪ್ರತಿಯೊಬ್ಬನ ಕೈಯಲ್ಲಿರುವದರಿಂದ ಎದೆಗೆಡುವ ಕಾರಣವಿಲ್ಲ. 'यत्ने कृते यदि न सिध्यति कोऽत्र दोषः ।' ಎಂಬಂತೆ ಶಿಶುರಕ್ಷಣೆಯ ಸಾಮಾನ್ಯ ಉಪಾಯಗಳನ್ನರಿತು ಅವನ್ನು ಎಚ್ಚರದಿಂದ ಸಾಧಿಸಿದರೆ ಜಯವು ದೊರೆದೇ ದೊರೆಯುವದು.

ತಕ್ಕ ಆಹಾರ, ಉಡುತೊಡುಗೆ, ನಿದ್ರೆ, ವಿರಾಮ, ಬೈಲಾಹವೆ ಇವೇ ಮೊದಲಾದವು ಶಿಶುರಕ್ಷಣೆಯ ಅಂಗಗಳಾಗಿರುವವು.

ಧೂಳಿಯಲ್ಲಿ ಕೆಟ್ಟ ಜಂತುಗಳು ಸೇರಿರುತ್ತವೆ. ಹೊಲಸು ಸ್ಥಳದ ವಾಯುವಿನಲ್ಲಿಯೂ ಅಪಾಯಕಾರಕ ಜಂತುಗಳು ನೆಲೆಸಿರುತ್ತವೆ. ಇವು ಶ್ವಾಸದ ಕೂಡ ಒಳಗೆ ಹೋಗಿ ಶರೀರವನ್ನು ಕೆಡಿಸುತ್ತವೆ. ಶಿಶುಗಳ ಮುಖ್ಯಾಹಾರವು ಹಾಲು ಒಂದೇ ಆಗಿರುವದರಿಂದ ಅದು ಧೂಳಿಯಿಂದ ದೂಷಿತವಾಗಿ ತೀರಿತು. ಮಕ್ಕಳಿಗೆ ಅಪಚನ, ಹೊರಕಡಿ ಮೊದಲಾದ ರೋಗಗಳು ಉಂಟಾಗುವವು. ಕಾರಣ ಹಾಲಿನಲ್ಲಿ ಧೂಳಿಯು ಬೀಳದಂತೆಯೂ ಪಾತ್ರೆಗಳಲ್ಲಿ ಏನೂ ಬೀಳದಂತೆಯೂ ಸೂಕ್ಷ್ಮತಂತಿಯ ಜಾಳಿಗೆಯ ಜರಡಿಯನ್ನು ಮುಚ್ಚಿಡಬೇಕು. ಗಟ್ಟಿಯಾದ ಪದಾರ್ಥದಿಂದ ಮುಚ್ಚಿದರೆ ಹಾಲು ಬಳಲಿ ಕೆಡುವವು. ಸಾಧ್ಯವಿದ್ದಮಟ್ಟಿಗೆ ಆಗಿಂದಾಗ ಹಿಂಡಿದ ಹಾಲು ಕಾಸಿ, ಆರಿಸಿ ಹಾಕುವದು ಉತ್ತಮ. ಇಲ್ಲದೆ ಇದ್ದರೆ ದಿನಸಕ್ಕೆ ೨ ಸಾರೆ ಯಾದರೂ ತಂದು ಜೋಕೆಯಿಂದ ಇಟ್ಟು ಹಾಕಬೇಕು.

ಒಪ್ಪೆ ಬಟ್ಟೆಗಳು ಹುಡುಗರ ತೊಟ್ಟಿಲಿನಲ್ಲಿ ಉಳಿಯುವ ಸಂಭವವಿರುತ್ತವೆ. ಅಗಿಂದಾಗ ಬಿಸಿಲಲ್ಲಿ ಒಣಗಿಸಿ ಅವನ್ನು ಬದಲಿಸುತ್ತಿರುವ ರೂಢಿಯನ್ನೇ ಇಟ್ಟುಕೊಳ್ಳಬೇಕು. ಅವು ಬಿಳಿಯ ಬಣ್ಣದವಿದ್ದರೆ ಉತ್ತಮ. ನಮ್ಮ ಜನರಂತೂ ನಿಶ್ಚಯವಾಗಿ ಕರಿಯ ಬಟ್ಟೆಗಳನ್ನೂ ನೀರು ಹಿಡಿಯುವ ತಟ್ಟುಗಳನ್ನೂ ಉಪಯೋಗಿಸುವರು. ಅವು ಹೊಲಸಾದದ್ದು ತಟ್ಟನೆ ತಿಳಿಯುವದಿಲ್ಲ. ತಟ್ಟುಗಳು ಬೇಗ ಒಣಗುವದಿಲ್ಲ. ಒಣಹಾಕಿದಾಗ ದಪ್ಪನಾದ ಬಟ್ಟೆಗಳಲ್ಲಿ ಹುಳ ಹುಪ್ಪಡಿಗಳು ಸೇರಿಕೊಳ್ಳುವ ಸಂಭವವಿರುತ್ತದೆ. ತೀರ ಸಣ್ಣ ಸಂಗತಿಗಳಲ್ಲಿ ಆಗುವ ತಪ್ಪುಗಳ ಸಂಖ್ಯೆಯೇ ಹೆಚ್ಚು; ಆದಕಾರಣ ಜಾಗ್ರತೆಯಿಂದ ಇಂಥ ವಿಷಯಗಳಲ್ಲಿ ಮನಸ್ಸುಹಾಕಬೇಕು. ಎಂಥ ಮಹತ್ವದ ಕೆಲಸಗಳಿದ್ದರೂ ಬಿಟ್ಟು ಈ ಕೆಲಸವನ್ನು ತಂದೆ ತಾಯಿಗಳು ಮಾಡಬೇಕು. ಆದ್ದರಿಂದ ಅನುಭವಿಕರಾದವರೇ ಮಾತಾ ಪಿತೃಪದಕ್ಕೆ ಯೋಗ್ಯರು. ಹಾಗಿಲ್ಲದಿದ್ದವರು ಅನುಭವಿಕರ ಮಾತನ್ನಾದರೂ ಕಿವಿಗೊಟ್ಟು ಆಲಿಸಬೇಕು. ತಾಯಿ ತಂದೆಗಳ ಜವಾಬುದಾರಿಯು ಈ ವಿಷಯದಲ್ಲಿ ಬಹಳ ಕಠಿನವಾಗಿರುವದು. ಇಂಥ ಕಠಿನ ಕೆಲಸಗಳೆಲ್ಲ ಅಂತಃಕರುಣದ ಭರದಲ್ಲಿ ಶ್ರಮತೋರದೆ ಮುಗಿದು ಹೋಗುವವು.

ಮಕ್ಕಳನ್ನು ಬೈಲುಹವೆಗೆ ಎತ್ತಿಕೊಂಡು ಹೋಗಬೇಕು. ಭೂಷಣದ ಬಿಳೀ ಅರಿವೆಯನ್ನು ತೊಡಿಸಿಕೊಂಡು ಎತ್ತಿಕೊಂಡು ಹೋಗುವದು ಚಂದವೂ ಶಿಷ್ಟಾಚಾರವೂ ಆಗಿರುವದು. ಬಡವರಿಗೆ ಇತ್ತ ಈ ಕೆಲಸ, ಅತ್ತ ಆ ಕೆಲಸ ಹೀಗೆ ತೊಡಗುತ್ತಿದ್ದರೂ ಕೆಲಸ ಬದಲು ಮಾಡುವದೇ ವಿಶ್ರಾಂತಿಯೆಂದೂ ಹೊಸರುಚಿಯೆಂದೂ ಭಾವಿಸಿದರೆ ನಿಜವಾಗಿ ಅದೇ ರೂಢಿಯೇ ಬೀಳುವದು.

ಮನೆಯಲ್ಲಿ ಸಿಟ್ಟು ಸಿಡಕುತನ ಕೆಟ್ಟ ಬೈಗಳು ಹಾಗೂ ಹೀಗೂ ಕ್ರಮ ಪ್ರಾಪ್ತವಾಗಿ ಇಳಿದಿರುವವು. ಕೆಲಕೆಲವರಂತೂ ಸಿಟ್ಟುಬಂದಾಗ ಕೈಬಾಯಿಗಳ ಭೆಟ್ಟಿಯನ್ನು ಮೇಲಿಂದಮೇಲೆ ಮಾಡಿಸುವದನ್ನು ಕಣ್ಮುಚ್ಚಿ ನೋಡುವೆವು. ಇಂಥ ತಂದೆತಾಯಿಗಳಿಂದ ಹುಡುಗರು ಹಟಮಾರಿಗಳಾಗುವರು. ಇಂಥ ದುಷ್ಟತಿಗಳು ಬಡತನದ ಸ್ಥಿತಿಯುವರಲ್ಲಿಯೇ ಹೆಚ್ಚು. ಅನೇಕ ತಾಪಗಳೂ ಕೆಲಸವೂ ಹೆಚ್ಚಿದಾಗ ಗಟ್ಟಿ ಮನಸ್ಸು ಇಲ್ಲದಿದ್ದರೆ ಹೀಗಾಗಿ ಬಾಲಕರು ಮುಂದೆ ಅವರಿಗಿಂತ ಒಂದಡಿ ಮುಂದೆ ಇಟ್ಟು ಕ್ರೋಧಾವೇಶಯುಕ್ತರಾಗಿ ನ್ಯಾಯಗಂಟರಾಗುವರು. ಈ ತರಹದ ಡೊಂಬೆಗಳುಳ್ಳ ಪ್ರಪಂಚದಲ್ಲಿ ಶಿಶುಗಳ ದೇಹದ ಮೇಲೆಯೂ ಮನಸ್ಸಿನ ಮೇಲೆಯೂ ಕೆಟ್ಟ ಪರಿಣಾಮಗಳು ಪರಿಣಮಿಸುವವು.

ದೈವುಳ್ಳವರಿಗೆ ಆಳುಗಳು ಕೈಯಲ್ಲಿ ಸಿಗುವದರಿಂದ ಅವರು ಪರಾವಲಂಬಿಗಳಾಗುವರು. ಆ ಸ್ಥಿತಿಯು ಮೊದಲಿಗಿಂತ ಕೆಡಕಾಗಿರುವದು. ಅವುಗಳನ್ನು ಆಡಿಸುವಾಗ ಅಂತಃಕರುಣದಿಂದ ನೋಡುತ್ತ ಕೂತರೆ ಇಲ್ಲವೆ ಬೈಲಲ್ಲಿ ತಿರುಗಾಡುವಾಗ ಅವರನ್ನು ನಿರೀಕ್ಷಿಸಿದರೆ ಅವರಲ್ಲಿ ಭಾವಬೋಧಕ ಹಾವಭಾವಗಳು ಕ್ರಮದಿಂದ ಉಂಟಾಗುವ ಚಮತ್ಕಾರವು ತೋರುವದು. ಏನಾದರೂ ಚಮತ್ಕಾರ ಕಂಡರೆ ಒಂದಾನೊಂದು ದಿವಸ

ಕೈಮುಂದೆ ಮಾಡಿ ಹಿರಿಯರಂತೆ ತೋರಿಸುವವು, ನಗುವವು, ಕೈಯಲ್ಲಿ ಹಿಡಿಯದಂತೆ ಹಾರಿಹಾರಿ ಬೀಳುವವು. ಇವೇ ಮುಂದೆ ಉತ್ಸಾಹ, ಚಟುವಟಿಕೆ, ಮುಮತೆಗಳಾಗಿ ಪರಿಣಮಿಸುವವು. ಮಕ್ಕಳನ್ನು ಎಂದೂ ಬಡಿಯದೆ ಹಾಗೆಯೇ ಲಾಲನೆಪಾಲನೆ ಮಾಡಿ ತಕ್ಕ ರೀತಿಯಿಂದ ಬೆಳಿಸಿ ಒಂದೇ ದಿನ ಹೊಡೆದರೆ ಅವರ ಭಾವದಲ್ಲಿ ವಿಲಕ್ಷಣತ್ವವು ತೋರುವದು. ಕೆಲ ಹೊತ್ತು ಸ್ತಬ್ಧವಾಗುವವು. ಆ ಮೇಲೆ ತಾಯಿ ಬಡೆದರೆ ತಂದೆಯ ಕಡೆಗೆ ಒನ್ಮುಲಿ ಹೋಗುವವು. ಇವೇ ಲಕ್ಷಣಗಳು ಮುಂದೆ ಸಿಟ್ಟು ಸ್ವಾಭಿಮಾನಗಳಾಗಿ ಪರಿಣಮಿಸುವವು. ಶಾಂತತೆಯಿಂದಲೂ, ಸುವ್ಯವಸ್ಥೆಯಿಂದಲೂ ರಕ್ಷಿಸಿದರೆ ಇಂಥ ಎಲ್ಲ ಗುಣಗಳ ಅಂಕುರಗಳು ಸರ್ವತೋಪರಿ ಬೆಳೆಯುವವು. ಇಲ್ಲದಿದ್ದರೆ ಹಾಳುಮರದಂತೆ ಸಿಕ್ಕಹಾಗೆ ಬೆಳೆಯುವವು.

ಉಪವಾಸಕ್ಕಿಂತಲೂ ಕೆಟ್ಟ ಆಹಾರವು ಕೆಡಕಾಗಿರುವದು. ಆದದರಿಂದ ಬಡತನ ಸಿರಿವಂತಿಗೆಗಳಿಗಿಂತಲೂ ಅಲಕ್ಷ್ಯವೇ ಅನಾರೋಗ್ಯದ ಮೂಲವಾಗಿರುವದು.

ಈ ರೀತಿಯಾಗಿ ಶೈಶವಾವಸ್ಥೆಯನ್ನು ಕಳೆದರೆ ಮುಂದೆ ಅವರು ಮಾತುಗಳನ್ನೂ ಓಡಾಡುವದನ್ನೂ ಅರಿತು ಆಟವಾಡಲುದ್ಯುಕ್ತರಾಗುವರು. ಅಂಥ ವೇಳೆಯಲ್ಲಿ ಅವರಿಗೆ ತಕ್ಕ ಉಪಕರಣಗಳನ್ನು ಕೊಟ್ಟು ಧೈರ್ಯ, ಹವ್ಯಾಸ, ಸ್ವಾವಲಂಬನ, ಸ್ವಾಭಿಮಾನ ಜನಕವಾದ ಆಟಗಳನ್ನೂ, ಮುಂದೆ ವ್ಯಾಯಾಮಗಳನ್ನೂ ಮಾಡಿಸಬೇಕು. ತಕ್ಕ ವಯಸ್ಸಿನಲ್ಲಿ ಈಸುವದು, ಕುದುರೇ ಏರುವದು, ಬಾಯಿಸಿಕಲ್ಲು ನಡೆಸುವದು ಇವನ್ನು ಮೊದಲೇ ಕಲಿಸಿಬಿಡುವದು ಉತ್ತಮ.

ನಾವು ಅವರ ದೇಹದ ಮೇಲೆ ಲಕ್ಷ್ಯವಿಟ್ಟು ಮನಃಪೂರ್ವಕ ಸಂರಕ್ಷಿಸುವದನ್ನು ಚಿಕ್ಕಂದಿನಿಂದ ಹುಡುಗರು ಅರಿತರೆ ಅವರೂ ತಮ್ಮ ದೇಹದ ಮೇಲೆ ತಾವೇ ಲಕ್ಷ್ಯ ತೆಗೆದುಕೊಳ್ಳುವರು.

ಈ ದೇಹವೆಂಬುದು ಈಶ್ವರನು ಕೊಟ್ಟ ವರವಾಗಿರುವದು. ಇದನ್ನು ಯೋಗ್ಯ ರೀತಿಯಿಂದ ರಕ್ಷಿಸಿ ಬುದ್ಧಿಶಕ್ತಿಗಳ ಸಾಹಾಯ್ಯದಿಂದ ತಕ್ಕ ಕರ್ತವ್ಯವನ್ನು ಮಾಡಿ ಜಯಶೀಲನಾಗಬೇಕೆಂಬ ಹವ್ಯಾಸವು ಅವರಲ್ಲಿ ಉಂಟಾಗುವಂತೆ ತಾಯಿತಂದೆಗಳ ರಕ್ಷಣೆಯು ಧ್ಯೇಯದ ಒಲವು ಇರಬೇಕು. ವೀರ ಅಭಿಮನ್ಯುವು ಹದಿನಾಲ್ಕೇ ವರ್ಷದವನಿದ್ದರೂ ಕ್ಷತ್ರಿಯ ರಣಕರ್ತವ್ಯಕ್ಕಾಗಿ ಹಾತೊರೆದದ್ದು ಭಾರತದಲ್ಲಿ ಕಂಡುಬರುವದು. ಶಿವಾಜಿಯು ತಾಯಿ ಹತ್ತಿರ ಬೆಳೆದ ಪರಿಸ್ಥಿತಿಯ ನಿರೀಕ್ಷಣೆಯಿಂದ ತನ್ನ ಭಾವನೆಗನುಚಿತವಾದ ಕರ್ತವ್ಯ ನಿಷ್ಠನಾದನು ಡ್ಯೂಕ ಆಫ್ ವೆಲ್ಲಿಂಗ್ಟನ್ನನು ಮುಂದೆ ಜಯಶೀಲನಾದಾಗ ಬಾಲ್ಯ ದಲ್ಲಿಯ ಬೈಲೊಳಗಿನ ಆಟಗಳ ನೆನಪನ್ನು ಮಾಡಿಕೊಂಡು ಹಸನಮುಖಿಯಾಗುತ್ತಿದ್ದನು. ಒಟ್ಟಾರೆ ಪೂರ್ವಸ್ಮರಣೆಯೇ ಬಲವತ್ತರವಾಗಿರುವದರಿಂದ ಶೈಶವ ಕೌಮಾರ ವಸ್ಥೆಗಳ ಲಾಲನೆಪಾಲನೆಗಳ ಕಡೆಗೆ ಲಕ್ಷ್ಯಕೊಟ್ಟರೆ ಪ್ರಾಯದಲ್ಲಿ ಬುದ್ಧಿಹೇಳುವ

ನಯಂಕರ ಉಪದೇಶದ ಭಾರವೇ ಇಳಿದುಹೋಗುವದು. ಇಲ್ಲದಿದ್ದರೆ ಅದೊಂದು ಏದೆಬಿಯ್ಯದ ಕೆಲಸವಾಗಿ ಉಳಿಯುವದು.

ತಾಯಿತಂದೆಗಳಲ್ಲಿ ಮಕ್ಕಳನ್ನು ಯೋಗ್ಯ ರೀತಿಯಿಂದ ಬೆಳೆಯಿಸುವ ಶಕ್ತಿಯೂ ಬುದ್ಧಿಯೂ ಇಲ್ಲದಿದ್ದರೆ ಮನಸ್ಸಿಗೆ ಬಂದಂತೆ ಹರಟೆಹೊಡೆಯುವದೂ ಆಲಸ್ಯತನವೂ ಕೆಲಸಕ್ಕೆ ಬೇಸರಪಡುವ ಗುಣವೂ ಆಜ್ಞೋಲ್ಲಂಘನೆಯೂ ಇವೇ ಮೊದಲಾದವು ಪರಿಸ್ಥಿತಿಗನುಸರಿಸಿ ಬದಲುಬದಲಾಗಿ ನೆಲೆಗೊಳ್ಳುವವು.

ಮಕ್ಕಳು ಅವಿದ್ಯಾವಂತರೂ ಅವಿವೇಕಿಗಳೂ ಆಗಿ ಸಿರಿವಂತರ ಮನೆತನದ ಗೌರವವನ್ನು ಕಳೆದ ಉದಾಹರಣೆಗಳು ಹೇರಳವಾಗಿರುವವು.

ಮುಂದೆ ಹುಡುಗರು ಅಡ್ಡದಾರಿ ಹಿಡಿಯುವ ಗುಣವು ಕೌಮಾರಾವಸ್ಥೆಯಲ್ಲಿಯೇ ಇವರ ಆಟನೋಟ, ಮಾತು, ಸಂಗತಿ ಇತ್ಯಾದಿಗಳಿಂದ ಒಡೆದು ತೋರಲಾರಂಭಿಸುವದು. ಆಗ ಆ ಹುಡುಗರ ಮೇಲೆ ಪಾಲಕರ ಬಲಾತ್ಕಾರವು ಆರಂಭವಾಗುವದು. ತಕ್ಕ ವೇಳೆಗೆ ತಕ್ಕ ಬಲಾತ್ಕಾರವು ಉಂಟಾದರೆ ಆಗಲಾದರೂ ಸುಧಾರಣೆಯಾಗುವದು. ಅದು ಇರುವ ದೊಂದು, ತಾವು ಮಾಡುವದೆಂದು ಹೀಗಾದರೆ ಇದ್ದದ್ದು ಸಹ ಹಳಿಸಿಹೋಗುವದು. ಆಗ ತಾಯಿತಂದೆಗಳು ಶಿಕ್ಷಕರನ್ನೂ, ಶಿಕ್ಷಕರ ಪರಿಸ್ಥಿತಿಯನ್ನೂ, ಅಧಿಕಾರಿಗಳು ಶಿಕ್ಷಕರನ್ನೂ ಬೈಯಲಾರಂಭಿಸುವರು. ಕುಣಿಯಲು ಬಾರದೆ ಇವ್ವರೆ ಅಂಗಳ ಡೊಂಕವೆಂಬಂತೆ ಅತ್ರಿವರ್ಗರ (ಬಾಲಕ, ಪಾಲಕ, ಶಿಕ್ಷಕ,) ಸ್ಥಿತಿಯಾಗುವದು.

ಶೈಶವಾವಸ್ಥೆಯು ತಪ್ಪಿಹೋದರೂ ಕೌಮಾರಾವಸ್ಥೆಯಲ್ಲಿಯಾದರೂ ಮಕ್ಕಳ ವಿಷಯವಾಗಿ ಮಾಡತಕ್ಕ ಕರ್ತವ್ಯಗಳು ತಪ್ಪಿಹೋಗುವವು.

ಕ್ಷಣವೆಂದರೆ ಕೇವಲ ಉಪದೇಶವಲ್ಲ; ವಿದ್ಯಾರ್ಥಿಗಳೆಂದರೆ ಕೇವಲ ಜ್ಞಾನದ ರಾಶಯುಳ್ಳ ಕೊತ್ತಿಗೆಯಲ್ಲ, ಕೇವಲ ನೈತಿಕ ಮತ್ತು ಧಾರ್ಮಿಕ ಶಿಕ್ಷಣದಿಂದ ಹುಡುಗರನ್ನು ಸುನೀತಿವಂತರನ್ನಾಗಿ ಮಾಡುವದು ಸಂಶಯಾತ್ಮಕವಾಗಿರುತ್ತದೆ. ಶಿಕ್ಷಣವು ಹೃದಯವನ್ನು ಸುಧಾರಿಸುವದಿಲ್ಲ. ಬರಿಯ ಉಪದೇಶಕ್ಕಿಂತ ಉದಾಹರಣೆಯು ಮಕ್ಕಳ ಸುಧಾರಣೆಗೆ ಹೆಚ್ಚು ಸಹಾಯಕಾರಿಯಾಗಿರುವದು.

ಕೇವಲ ವಿಚಾರಕ್ಕನುಸರಿಸಿರುವಂಥ ಆಯುಷ್ಯವು ಸಾಧ್ಯವಾಗಿರುವದು ಕಾಲ್ಪನಿಕವೇ ಸರಿ. ಜಗತ್ತಿನಲ್ಲಿ ದೋಷರಹಿತವಾಗಿರುವ ನೀರು ದುರ್ಮಿಲವಾಗಿರುವಂತೆ ಮೇಲೆ ಬರೆದಂಥ ಆಯುಷ್ಯವನ್ನಾದರೂ ಕಾಣುವದು ಅಸಾಧ್ಯ. ಹೀಗೆ ಯಾಕಾಗುತ್ತಿದ್ದೀತು, ಎಂಬದಾಗಿ ವಿಚಾರಿಸುವದು ಆವಶ್ಯಕವಾಗಿದೆ ಎಷ್ಟೇ ಕಲಿತರೂ 'ಕುದುರೆಗೊಂದು ಗೋಮು, ವೆಂಬಂತೆ ಒಬ್ಬೊಬ್ಬರಲ್ಲಿ ಒಂದೊಂದು ಕೊರತೆಗಳು ಕಂಡೇ ಕಾಣುತ್ತವೆ. ಜ್ಞಾನ ಗಳಿಸಿದವರಿಗೆ ಅದು ಗೊತ್ತು ಇರುತ್ತದೆ. ಸಾಕ್ರೆಟೀಸನು ಕೂಡ ದೊಡ್ಡವನಾಥ ಬಳಿಕ ತನ್ನ ಸಿಟ್ಟು ಕಡಿಮೆಮಾಡುವದಕ್ಕೆ ಒಳ್ಳೆಯ ಉಪಾಯವನ್ನು ಹುಡು

ಕಿಟ್ಟುಕೊಂಡನು. ಅದೇನೆಂದರೆ, ತಾನು ಸಿಟ್ಟಿಗೆದ್ದಾಗ ಎಚ್ಚರ ಕೊಡಲಿಕ್ಕೆ ಮಿತ್ರರಿಗೆ ತಿಳಿಸಿದನು. ಆ ರೀತಿಯಾಗಿ ಅವರು ಮಾಡಿದಕೂಡಲೆ ತನ್ನ ಮೂರ್ಖತನವು ನೆನಪಾಗಿ ಪಶ್ಚಾತ್ತಾಪ ಪಡಲು ಉಗ್ರ ಚಿಹ್ನವೂ ಧ್ವನಿಯೂ ಕಡಿಮೆಯಾಗಿ ಮೌರೆಯು ಶಾಂತವಾಗುತ್ತಿದ್ದಿತು. ಹೆಚ್ಚು ಉಣ್ಣುವದರಿಂದ ಸೌಖ್ಯಾಭಿಲಾಷೆಯು ಬೆಳೆದು ಅದರ ಕೂಡ ಅಲಕ್ಷ್ಯ, ಸೋಮಾರಿತನ, ಸೊಕ್ಕು ಬೆಳೆಯುತ್ತವೆಂದು ಅವನು ಬಗೆದಿದ್ದನು. ಸೌಖ್ಯಾಭಿಲಾಷೆಯನ್ನೇ ಧ್ಯೇಯವನ್ನಾಗಿಟ್ಟುಕೊಂಡು ಕೀಯುವ ಹಾಗು ಅಧ್ಯಯನ ಮಾಡಿಸುವ ನಾವು ಮೇಲಿನ ಮಾತಿನಂತೆ ವಿಚಾರಿಸಲು ಕೆಸರಿನಿಂದ ಕೆಸರನ್ನು ತೊಳೆದು ನಿರ್ಮಲವಾಗುವ ಸಮಯವನ್ನು ನಿರೀಕ್ಷಿಸುತ್ತ ಕುಳಿತಂತೆ ಆಗಿದೆ. ಎಂಬ ಸಂಗತಿಯು ಗೊತ್ತಾಗುವದು.

ಮನುಷ್ಯನ ಮನಸ್ಸು ಶುಭ್ರ ವಸ್ತ್ರದಂತೆಯೂ ಕ್ಯಾಮರಾದೊಳಗಿನ ಬಿಳಿಯ ಕನ್ನಡಿಯಂತೆಯೂ ಇರುವದು. ಅವು ಮುಂದೆ ಬಂದುನಿಂತ ಪರಿಣಾಮಗಳನ್ನು ಗಟ್ಟಿಯಾಗಿಟ್ಟು ಕೊಂಡು ಬಿಡುವವು. ಅವು ಚಲೋ ಸಂಗತಿಯಿದ್ದರೆ ಬಾಧೆಯಿಲ್ಲ. ಇಲ್ಲದಿದ್ದರೆ ಶುಭ್ರವಸ್ತ್ರವೂ ಕನ್ನಡಿಯೂ ಮಲಿನವಾಗಿ ಹೋಗುತ್ತವೆ. ಮುಂದೆ ಎಷ್ಟು ತೊಳೆದರೂ ಮಾಲಿನ್ಯವು ಕಡಿಮೆಯಾಗಿತೇ ಹೊರತು ಹೋಗಲರಿಯದು. ಆದದರಿಂದ ಮಕ್ಕಳ ಆರಂಭದ ಮನಸ್ಸೂ, ಆ ಮನಸ್ಸಿನ ಮೊದಲನೆಯ ಕ್ಷೇತ್ರವಾದ ಮನೆಯೂ ಆ ಗೃಹಕ್ಕೆ ಗುರುವಿನಂತೆ ಇರುವ ಕುಟುಂಬವೂ ಇವು ಮಹತ್ವವಾದವಾಗಿರುವವು. ಮನುಷ್ಯತ್ವದ ರೂಪರೇಖೆಯು ಅಲ್ಲಿಯೇ ಒಡಮೂಡುವದು, ಮಕ್ಕಳ ಆಯುಷ್ಯದ ಭಾವಿ ಸೌಖ್ಯದ ಸಾಧನಗಳ ಬುತ್ತಿಗಂಟು ಕಟ್ಟುವ ಸಮಯವು ಅಲ್ಲಿಯೇ ಇರುವದು. ಆದ್ದರಿಂದ ಮಕ್ಕಳ ಸುಧಾರಣೆಯನ್ನು ಬಯಸುವವರು ಮನೆಯಲ್ಲಿಯೇ ಎಚ್ಚರಪಡುವದು ಅಗತ್ಯದ ಮಾತಾಗಿರುತ್ತದೆ.

ಸುಧಾರಿಸಿದ ಮನಸ್ಸು ಜಾಣ್ಮೆಯಿಂದ ಶರೀರಕ್ಕೆ ಆಜ್ಞೆ ಮಾಡುವದು; ಪ್ರೀತಿಯಿಂದ ಶರೀರವನ್ನು ಆಳುವದು; ಎಚ್ಚರಿಕೆಯಿಂದ ನಮಗೆ ಹಿತವಾಗುವಂತೆ ನಡೆದು ಜೋಪಾನ ಮಾಡುವದು; ಧರ್ಮ ನೀತಿಗಳಿಂದ ಶರೀರವನ್ನು ಅಂಕಿತದಲ್ಲಿಟ್ಟುಕೊಳ್ಳುವದು. ಮುಖ್ಯವಾಗಿ ಮನಸ್ಸು ತನ್ನ ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡು ಪರಸ್ಪರ ವ್ಯಾಪಾರ ಧರ್ಮಗಳು ವ್ಯತ್ಯಕ್ರಮವಾಗದಂತೆ ನೋಡಿಕೊಂಡು ನಡೆದರೆ ಆ ಮನುಷ್ಯನಿಗೆ ಇಹಪರ ಸೌಖ್ಯಗಳು ಲಭಿಸುವವು. ಇಲ್ಲದಿದ್ದರೆ ಸ್ವೇಚ್ಛಾಚಾರಿ ಇಂದ್ರಿಯಗಳು ಸ್ವಾಧೀನದಲ್ಲಿ ಉಳಿಯದೆ ನಾಶವುಂಟಾಗುವದು.

ಸಾಕ್ರೆಟೀಸನು ಹೇಳುವದೇನೆಂದರೆ– ತನ್ನ ತಪ್ಪುಗಳನ್ನು ಸಂಪೂರ್ಣವಾಗಿ ತಿಳಿಯಲಿಕ್ಕೆ ಯತ್ನಿಸುವವನೇ ಎಲ್ಲರೊಳಗೆ ಜಾಣನು. ಹಾಗು ತನ್ನ ತಪ್ಪುಗಳನ್ನು ಸಂಪೂರ್ಣವಾಗಿ ತಿದ್ದುವ ಕೆಲಸವನ್ನು ನಡಿಸಿರುತ್ತೇನೆಂದು ತಿಳಿದುಕೊಳ್ಳುವ ಮನುಷ್ಯನೇ ಸುಖಿಯು

ಆರಂಭಕ್ಕೆ ಅನೇಕ ಸಂಗತಿಗಳಿಗೆ ಕೈಹಾಕಿ ಯಾವದನ್ನೂ ಮಾಡಲಿಕ್ಕೆ ಹಿಂಜರಿಯುವಂತೆ ಮಾಡದೆ ಮಕ್ಕಳ ಒಂದೇ ಒಂದು ಸಂಗತಿಯ ವಿಷಯಕ್ಕೆ ಹೆಚ್ಚು ಲಕ್ಷ ಕೊಟ್ಟರೆ ಸಾಕು. ಅದೇನೆಂದರೆ ಮಕ್ಕಳ ತಪ್ಪು ಸಣ್ಣದೇ ಇರಲಿ, ದೊಡ್ಡದೇ ಇರಲಿ, ಅದನ್ನು ಹುಡುಕಿಕೊಂಡು ತಕ್ಕ ಸಾಧನಗಳಿಂದ ಅವರು ಅದನ್ನು ಸುಧಾರಿಸಿಕೊಳ್ಳುವದು. ಉಪದೇಶದಿಂದಲೂ ವರ್ತನೆಯಿಂದಲೂ ಇದೊಂದೇ ವಿಷಯವನ್ನು ಕಲಿಸಿದರೆ ಸಾಕು. ಎಲ್ಲ ಲಾಗುಗಳಿಗೂ ವ್ಯಾಯಾಮಗಳಿಗೂ ಬ್ಯಾಲನ್ಸ (ಸಮತೂಕವು) ಒಂದೇ ಮೂಲಾಧಾರವಾಗಿರುವಂತೆ ಮನುಷ್ಯನಲ್ಲಿ ಸುಧಾರಿಸುವ ಬುದ್ಧಿಯೊಂದು ನೆಲಿಸಿದರೆ ತೀರಿತು. ಕಾಲಕಾಲಕ್ಕೆ ತಕ್ಕಂತೆ ವ್ಯತ್ಯಸ್ತಮಾಡಿಕೊಂಡು ತನ್ನ ಸುಧಾರಣೆ ತನಗೆ ತಾನೇ ಆಗಿ ಅಂಥ ಮನುಷ್ಯನು ಸುಖಿಯಾಗುವನು. ತನ್ನೊಳಗೆ ತಾನೇ ಶೋಧಿಸುವ ಕೆಲಸದಲ್ಲಿ ಇದ್ದರೆ ಪಂಚೇಂದ್ರಿಯಗಳ ನ್ಯಾಯಾಧೀಶರೂ ಅವನಲ್ಲಿಯೇ ವಾಸಿಸಿ ಅವನಿಗೆ ಯೋಗ್ಯ ಸಲಹೆಗಳನ್ನು ಕೊಡುವರು, ಇದೇ ಒಂದು ಮಾತು ತಿಳಿಯದ್ದರಿಂದ ಜಗತ್ತಿನಲ್ಲಿ ಅನೇಕ ಅನ್ಯಾಯಗಳು ಉಂಟಾಗುವವು.

ಮನೆಯಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡುತ್ತೇವೆ. ಬಾಯಿಂದ ದೊಡ್ಡ ಮಾತುಗಳನ್ನು ಮಾತ್ರ ಆಡುತ್ತೇವೆ. ಶಬ್ದಗಳು ಭೂಮಾತೆಯ ಪುತ್ರಿಯರೆಂದೂ ಕೃತಿಗಳು ಸ್ವರ್ಗದ ಪುತ್ರರೆಂದೂ ಗಾದೆಯಮಾತು ಹಿಂದೀ ಭಾಷೆಯಲ್ಲಿದೆ. ಇದಕ್ಕೆ ವಿಪರೀತವಾಗಿ ಮಾತು ಒಂದು, ಕೃತಿಯೊಂದು. ಇದು ನೈತಿಕ ದೃಷ್ಟಿಯಿಂದ ಭಯಂಕರವಾಗಿರುವದು. ಮನೆಯಲ್ಲಿ ತಾಯಿಗೆ ಮಹತ್ವವು ಹೆಚ್ಚುಬೇಕು. ಅವಳು ಮನೆಯಲ್ಲಿ ಜವಾಬುದಾರಿಯ ಸ್ಥಳವನ್ನು ಸ್ವೀಕರಿಸಬೇಕು. ನಿಜವಾಗಿ ಅವಳಿಗೆ ಯೋಗ್ಯ ಮರ್ಯಾದೆಯು ಸಿಗುವದು ಕಡಿಮೆ. ಸುಶಿಕ್ಷಿತ ತಂದೆಯು ತಾನೇ ಸರ್ವಜ್ಞನಿರುವನೆಂದೆಣಿಸುತ್ತಾನೆ. ಹೆಂಡತಿಯು ಅಶಿಕ್ಷಿತಳಿದ್ದರೆ ಶಿಕ್ಷಣಕೊಟ್ಟು ಅನುಕೂಲಳನ್ನಾಗಿ ಮಾಡಿಕೊಳ್ಳಬೇಕು. ತನ್ನ ಮಕ್ಕಳ ದೃಷ್ಟಿಯಿಂದ ಅವಳಿಗೆ ಸಾಕಷ್ಟು ಮಹತ್ವವನ್ನು ತೋರಿಸದೆ ಇರುವದು ಅವನಿಗೆ ಹಿತವಲ್ಲ.

ಮನೆಯಲ್ಲಿ ನಾವು ಮಾಡುವ ಇನ್ನು ಕೆಲವು ತಪ್ಪುಗಳು—

೧) ಮನೆಯು ಖಾನಾವಳಿಯಲ್ಲ, ಕಾರಖಾನೆಯಲ್ಲ, ಅದು ಪ್ರೀತಿಯ ಸಹಾನುಭೂತಿಯ ತವರು ಮನೆಯು. ಮನೆಯ ಯಜಮಾನನು ಹೊರಬಿದ್ದ ಕೂಡಲೆ ಮನೆಯು ಮರು ಸ್ವೇಚ್ಛೆಯಿಂದ ನಡೆಯುವದಾದರೆ ಅದು ಮನೆ ಎನಿಸಿಕೊಳ್ಳಲಾರದು. ಹುಡುಗರು ಮನೆಯಿಂದ ಹೊರಬಿದ್ದು ಹೋಗಲು ಯತ್ನಿಸುವದು ಯಾವಾಗಲೂ ಕಾಣುತ್ತದೆ. ಇದು ಅವ್ಯವಸ್ಥೆಯೆಂದು ತಿಳಿಯಬಾರದು. ಮನೆಯಲ್ಲಿ ಸ್ವಾತಂತ್ರ್ಯವಿಲ್ಲವೆಂಬುದೇ ಇದರ ಮೂಲ ಕಾರಣವು. ಒಮ್ಮೊಮ್ಮೆ ತಾಯಿ ತಂದೆಗಳು ವ್ಯವಸ್ಥೆಯ ಅತಿರೇಕದಿಂದ ತಮ್ಮ ಮಕ್ಕಳು ಮಾನವೀಯ ಪ್ರಾಣಿಗಳೆಂಬದನ್ನು ಸಹ ಮರೆತು ಬಿಡುತ್ತಾರೆ. ನಾವು ನಮ್ಮ ಸರಿಕರೊಡನೆ ಕೂಡಿ ಇರುವಾಗ ಹೆಚ್ಚು ಆನಂದವೃತ್ತಿಯಲ್ಲಿರುತ್ತೇವೆಂದು ತಿಳಿಯುತ್ತೇವೆ. ಹುಡುಗರಿಗೆ ಚಿಲ್ಲೋ ಸಹವಾಸವು ಮಹತ್ವದ್ದೇಸರಿ. ಆದರೂ [illegible]ಕ್ಕಾಗಿ ಮಕ್ಕಳನ್ನು

ಹೊರಗೆ ಹೋಗುವದನ್ನೇ ಪ್ರತಿಬಂಧಿಸುವದು ನೆಟ್ಟಗಲ್ಲ. ಯಾವ ತಂದೆಯು ತನ್ನ ಮಗನನ್ನು ಹಗಲಿರುಳು ಕಾಯುತ್ತಿರುವನೋ, ಯಾವನು ಆರಿಸಿವವರ ಹೊರತಾಗಿ ಉಳಿದವರ ಜೊತಿಗೆ ಅವನನ್ನು ಬಿಡುವದಿಲ್ಲವೋ ಅವನು ತನ್ನ ಮಗನಿಗೆ ನಿಜವಾಗಿ ಕೆಡಕನ್ನು ಮಾಡುವನು. ಎಂದು ಹೇಳಬಹುದು.

ಮಕ್ಕಳು ಸಣ್ಣವರಿದ್ದಾಗ ಸ್ವಂತನಾಗಿ ಊಟಮಾಡಲಿಕ್ಕೂ ಹಾಸುಗೆ ಹಾಸಿಕೊಳ್ಳಲಿಕ್ಕೆ ಯತ್ನಿಸುವರು. ತಮ್ಮ ಸಾಮಾನುಗಳನ್ನು ತಮ್ಮ ಹತ್ತರ ಇಟ್ಟುಕೊಳ್ಳಲಿಕ್ಕೆ ಪಾತೊರೆಯುವರು. ಮೆಲ್ಲ ಮೆಲ್ಲಗೆ ಸ್ವಾತಂತ್ರ್ಯಕೊಟ್ಟು ಅವರನ್ನು ಸ್ವಾವಲಂಬಿಗಳನ್ನೂ ಅನುಭವಿಕರನ್ನೂ ಮಾಡಿಕೊಳ್ಳಬೇಕು. ಈ ತರಹದ ಸ್ವಾವಲಂಬನನೇ ಸ್ವಂತದ ನಿರೀಕ್ಷಣೆಯೇ ಮುಂದೆ ಹೊಸ ಹೊಸ ಶೋಧಗಳಿಗೆ ಕಾರಣವಾಗುವದು. ಈ ಪ್ರಕಾರ ಸ್ವಾವಲಂಬನವ ಚಟವಿಲ್ಲದವರು ಮುಂದೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಲಿಕ್ಕೆ ಸಮರ್ಥರಾದರೂ ತನ್ನ ಅರಿವೆ ಅಂಗಡಿ, ಪುಸ್ತಕ, ವಸ್ತುಗಳ ಬಗ್ಗೆ ಎಚ್ಚರಪಡುತ್ತಿರುವದಿಲ್ಲ. ಒಮ್ಮೊಮ್ಮೆ ಇಂಥವರು ಮರವಿನಿಂದಾಗಲಿ ಅಲಕ್ಷದಿಂದಾಗಲಿ ವಸ್ತುಗಳನ್ನು ಕಳೆದುಕೊಳ್ಳುವರು.

(೨) ಮಕ್ಕಳ ಸುತ್ತಲು ಅಸತ್ಯದ ವಾತಾವರಣವಿರುತ್ತದೆ. ಸಾವುಕಾರರು ತನ್ನ ಮಕ್ಕಳ ಎದುರಿಗೇ ಬಡರೈತರ ಲೆಕ್ಕಪತ್ರಗಳಲ್ಲಿ ಹೆಚ್ಚುಕಡಿಮೆಮಾಡುವರು. ಕೆಲವರು ಹಿರಿಯರು ತಾವು ಮನೆಯಲ್ಲಿದ್ದರೂ ಕೆಲವು ಕಾರಣಗಳ ಮೂಲಕ ಬಂದವರ ಎದುರಿಗೆ ಅಪ್ಪನು ಇಲ್ಲವೆಂದು ಮಕ್ಕಳಿಂದಲೇ ಹೇಳಿಸುವರು. ಅಧಿಕಾರಿಗಳು ಬಂದಾಗ ಕೆಳಗಿನವರು ಚಾವಡಿಯಲ್ಲಿ ಗಡಬಿಡಿಯಿಂದ ಓಡಾಡುವದು ಹುಡುಗರ ಕಣ್ಣಿಗೆ ಬೀಳುತ್ತದೆ. ಇವೆಲ್ಲ ವುಗಳ ಮರ್ಮವು ಹುಡುಗರಿಗೆ ಚಿಕ್ಕಂದಿನಲ್ಲಿಯೇ ಗೊತ್ತಾಗುತ್ತದೆ.

(೩) ಕೆಲವರು ಹಿರಿಯರು ತಮ್ಮ ಗೌರವಕ್ಕಾಗಿ ಮಕ್ಕಳಿಗೆ ಅಂಜಿಕೆಯಿಡಬೇಕೆಂದು ಅವರನ್ನು ದೂರವಿಡುತ್ತಾರೆ. ನಿಕಟ ಸಂಬಂಧನನ್ನೇ ಇಡುವದಿಲ್ಲ. ಮತ್ತೆ ಕೆಲವರು ಹೀಗೆ ಬೆದರಿಕೆ ಇಡದಿದ್ದರೂ ಮಕ್ಕಳನ್ನು ವಿಚಾರಿಸುವದಕ್ಕೆ ವೇಳೆಯೇ ಉಳಿಯುವದಿಲ್ಲವೆಂದು ಕಾರ್ಯ ಗೌರವವನ್ನು ಕೊಚ್ಚುವರು. ಹೀಗೆಮಾಡದೆ ಸುಶಿಕ್ಷಿತರು ತಮ್ಮ ಮಕ್ಕಳ ವಿಷಯವಾಗಿ ಎಚ್ಚರ ಪಡುವದಲ್ಲದೆ ಊರೊಳಗಿನ ಅಶಿಕ್ಷಿತ ಬಂಧುಗಳಲ್ಲಿ ಕೂಡಿಕೊಂಡು ಸಹಾನುಭೂತಿಯನ್ನೂ ಚಪಲತನವನ್ನೂ ತೋರಿಸಿ ಅವರನ್ನು ದುಸ್ಥಿತಿಯೊಳಗಿಂದ ಪಾರಾಗುವಂತೆ ಮಾಡಿದರೆ ಅವರ ಮಕ್ಕಳನ್ನು ಸಹ ಸುಧಾರಿಸಿದ ಶ್ರೇಯಸ್ಸಿಗೆ ಪಾತ್ರವಾಗುವರು. ಸಾರ್ವಜನಿಕ ಸೇವಾತತ್ಪರವಾದ ಸಂಘಗಳು ಅನೇಕ ಕಡೆಗಳಲ್ಲಿ ಇಂಥ ಕಲ್ಯಾಣದ ಕೆಲಸವನ್ನು ಎಷ್ಟೋಮಟ್ಟಿಗೆ ಮಾಡಿರುವವು. ಇಂಥ ಸಂಘಗಳು ದೊಡ್ಡ ಪಟ್ಟಣಗಳಲ್ಲಿ ಮಾತ್ರ ಇರುವವು. ಅವುಗಳಲ್ಲಿ ಸಹ ತಥ್ಯ ಸಂಗತಿಗಳ ಕೊರತೆಯು ಇರುವುದು. ತನ್ನ ಅಶಿಕ್ಷಿತ ಬಂಧುಗಳ ವಿಷಯವಾಗಿ ಏನಾದರೂ ಹಿತಮಾಡಿದ್ದೆನೆಂದು ತನ್ನ ಸದಸದ್ವಿವೇಕ ಬುದ್ಧಿಯು ಹೇಳುವವರೆಗೆ ಸುಶಿಕ್ಷಿತ ಮನುಷ್ಯನು ತಾನಾಗಿಯೆಂದು ತಿಳಿಯಬಾರದು. (ಸಂಗ್ರಹ)

ಇರಾಣ

ಮಿ. ಆರ್. ಎಸ್. ಕುಂಬಾರ ಕಟ್ಟಿಮನಿ ಗೌಡ್ರ ಆಟ್ ಲಾ ಸ್ಕ್ರ್. ಧಾರವಾಡ.

ಶಿರಾಜ ಪಟ್ಟಣವು ಇರಾಣ ದೇಶದಲ್ಲಿ ಎಂದಿನಿಂದಲೂ ಸುಪ್ರಸಿದ್ಧವಾದದ್ದು. ಆ ಪಟ್ಟಣದ ಸೌಂದರ್ಯಕ್ಕೆ ಸಾದಿ, ಹಾಫೀಜ ಕವಿಗಳ ಜನ್ಮಭೂಮಿಯೆಂದೆನಿಸಿಕೊಂಡಂದಿನಿಂದ ಮತ್ತಿಷ್ಟು ಕಳೆ ಬಂದಿದೆ. ಈ ಊರ ಆಗ್ನೇಯಕ್ಕೆ 'ಪರ್ಶಿಪೋಲೀಸ' ಅಥವಾ ಪಾರ್ಶಪುರವೆಂಬ ಹೆಸರಿನ ಸ್ಥಳವಿದೆ. ನಮ್ಮಲ್ಲಿಯ ಹಂಪೀ ಕ್ಷೇತ್ರದಂತೆ ಅದರ ಸ್ಥಿತಿಯಾಗಿದೆ. ಹಾಳು ಬಿದ್ದ ದೊಡ್ಡ ದೊಡ್ಡ ಗೋಡೆಗಳೂ ಕಾಲು ಮುರಿದು ಬಿದ್ದ ಗೊಂಬೆಗಳೂ, ದೊಡ್ಡ ದೊಡ್ಡ ಗೋಡೆಗಳಲ್ಲಿಯ ವಾತಾಯನಗಳೂ ಹಳೆಯ ಸೊಬಗಿನ ಸಾಕ್ಷಿಗಳಾಗಿವೆ.

ಇರಾಣದ ಪೂರ್ವೇತಿಹಾಸ:–ಇರಾಣವೆಂಬ ಶಬ್ದವು ಆರ್ಯನ್ ಶಬ್ದದ ರೂಪಾಂತರವು. ಹಿಂದಕ್ಕೆ ಈ ದೇಶದಲ್ಲಿ ಆರ್ಯರು ಈಗ ಫಾರ್ಸ್‌ವೆಂಬ ಪ್ರಾಂತವಿರುವ ಸ್ಥಳದಲ್ಲಿರುತ್ತಿದ್ದರು. ಅವರು ಆಳಿದ ಭಾಗಕ್ಕೆಲ್ಲ 'ಪರ್ಸಿಯಾ' ಎಂಬ ಹೆಸರು ಬಿದ್ದಿತು. ಆರ್ಯರ ಸಂಬಂಧದಿಂದ ಪಾರ್ಸಿಗಳೂ ಹಿಂದೂ ಜನರೂ ಒಂದೇ ವರ್ಗದವರೆಂದು ಹೇಳಬಹುದು. ಫಾರ್ಸೀಯ ಧರ್ಮಗ್ರಂಥದ ಶಬ್ದಗಳೂ ವೇದ ಗ್ರಂಥದ ಶಬ್ದಗಳೂ ಒಂದಕ್ಕೊಂದು ಹೋಲುತ್ತವೆ. ಅದರಂತೆಯೇ ದೇವತೆಗಳ ವಿಷಯದಲ್ಲಿಯೂ ಪೂಜಾವಿಧಾನದಲ್ಲಿಯೂ ಹಿಂದೂ ಫಾರ್ಸೀ ಧರ್ಮಗಳಲ್ಲಿ ಸಾಮ್ಯವು ಇರುವದು. ಆಗಿನ ಕಾಲಕ್ಕೆ ಹರಡಿದ ಎಲ್ಲ ಧಾರ್ಮಿಕ ವಿಷಯಗಳನ್ನೆಲ್ಲ ಒಟ್ಟುಗೂಡಿಸಿ 'ಝುರತುಷ್ಟ್ರ' ಎಂಬ ಮಹಾ ಪುರುಷನು ಪಾರ್ಸೀ ಧರ್ಮದ ರೂಪವನ್ನು ಕೊಟ್ಟನು. ಅಗ್ನಿಯನ್ನು ದೇವರ ಆತ್ಮಿಕ ತೇಜವೆಂದು ತಿಳಿದು ಪೂಜಿಸತಕ್ಕದ್ದೆಂದು ಸಾರಿದನು. ಆಗಿನ ಕಾಲದ ಪಾರ್ಸಿಗಳು ದೊಡ್ಡ ದೊಡ್ಡ ರಾಜ್ಯಗಳನ್ನೂ ಬಹಳವೇಕೆ, ಸಾಮ್ರಾಜ್ಯವನ್ನು ಸಹ ಸಹ ಆಳಿದರು. ಅವರಲ್ಲಿ ಒಬ್ಬಿಬ್ಬರ ಇತಿಹಾಸವನ್ನು ಸ್ವಲ್ಪ ಮಟ್ಟಿಗೆ ಹೇಳುವೆವು.

ಅವರಲ್ಲಿ ಡರಾಯುಸನೆಂಬವನು ಸಿಂಧು ನದಿಯಿಂದ ಗ್ರೀಸದ ವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದನು. ಅವನಲ್ಲಿ ಕುದುರೇ ಸವಾರರ ಹಾಗು ಕಾಲದಳದ ದೊಡ್ಡ ಸೈನ್ಯವಿದ್ದಿತು. ಅರಸನು ಒಳ್ಳೇ ಅಭಿಮಾನಿಯಾಗಿದ್ದನು. ಈ ಗುಣದ ಪ್ರಕಾಶವು ಅವನ ಸೈನ್ಯದಲ್ಲೆಲ್ಲ ತೋರುತ್ತಿದ್ದಿತು. ಅವನು ತನ್ನ ಕೈಕೆಳಗಿನ ಜನರನ್ನು ದಯೆಯಿಂದ ನೋಡುತ್ತಿದ್ದನು. ಕರ್ತವ್ಯದಕ್ಷರನ್ನು ಆರಿಸಿ ಅವರಿಗೆ ಸೈನ್ಯದಲ್ಲಿ ಮಹತ್ವದ ಸ್ಥಳಗಳನ್ನು ಕೊಡುತ್ತಿದ್ದನು. ಅವನ ರಾಜಧಾನಿಯೇ ಮೇಲೆ ಉಲ್ಲೇಖಿಸಿದ ಪಾರ್ಶಪುರವೆಂಬುದು. ಅವನು ತನ್ನ ಸಾಮ್ರಾಜ್ಯದಲ್ಲಿ ೨೦ ಇಲಾಖೆಗಳನ್ನು ಮಾಡಿ ಒಂದೊಂದು ಭಾಗಕ್ಕೆ 'ಸತ್ರಪ್ಸ' ಎಂಬ ಹೆಸರಿನ ಅಧಿಕಾರಿಯನ್ನು ನೇಮಿಸಿ

ದ್ದನು. ಈ ಎಲ್ಲ ಭಾಗಗಳಿಗೂ ಪರಸ್ಪರ ಸಂಬಂಧವು ಉಳಿಯಲಿಕ್ಕೆ ತೀವ್ರ ವೇಗದ ಟಪಾಲುಗಳ ವಾಹನಗಳನ್ನು ಸರಕಾರದಿಂದ ಗೊತ್ತುಮಾಡಿದ್ದನು. ಒಕ್ಕಲತನ ವ್ಯಾಪಾರಗಳ ಕಡೆಗೂ ಚನ್ನಾಗಿ ಲಕ್ಷ್ಯವನ್ನು ಪೂರಯಿಸಿದ್ದನು. ತನ್ನ ರಾಜಧಾನಿಯಲ್ಲಿ ಎತ್ತರವಾದ ಭವ್ಯವಾದ ಮಂದಿರಗಳನ್ನು ಕಟ್ಟಿಸಿದ್ದನು. ಅವನ ಮಗನಾದ ಝುರ್ಕ್ಸೀಜ ಅಥವಾ ಕ್ಷಯಾರ್ಷನೆಂಬವನಾದರೂ ತಂದೆಯಂತೆಯೇ ಪ್ರತಾಪಿಯಾಗಿದ್ದನು. ಅವನಾದರೂ ತಂದೆಯಂತೆಯೇ ಭವ್ಯವಾದ ರಾಜಮಂದಿರಗಳನ್ನು ಕಟ್ಟಿಸಿದನು. ಮುಂದೆ ಆರ್ತಕ್ಷತ್ರ ಅಥವಾ ಅರ್ದೇಸರನೆಂಬ ರಾಜನು ಪಟ್ಟಕ್ಕೇರಿದನು. ಮೊದಲಿನ ಭವ್ಯವಾದ ವಿಸ್ತಾರವಾದ ರಾಜ್ಯವು ಅರಸನಿಂದ ತೂಗಲಿಕ್ಕಾಗದ ಹಾಗಾಯಿತು. ಮುಂದೆ ಈ ರಾಜ್ಯ ಶಕಟವು ಜಗದ್ವಿಖ್ಯಾತನಾದ ಅಲೆಕ್ಸಂದರನ ದೌಡಿನಿಂದ ಲಿಕಿಲಿಕಿಯಾಗಿ ಹೋಯಿತು. ಅಲೆಕ್ಸಂದರನು ೩೨ ವರ್ಷದ ಪ್ರಾಯಸ್ಥನಿದ್ದಾಗ ಅದೇ ಪಾರ್ಶಪುರದ ರಾಜಮಂದಿರದಲ್ಲಿ ಸುಂದರ ಸ್ತ್ರೀಯರೊಡನೆ ಮೋಹಕಮದ್ಯದಿಂದ ಗುಂಗಾಗಿ ವಿಲಾಸವನ್ನು ಅನುಭವಿಸುತ್ತಿದ್ದನು. ಒಮ್ಮೆ ಶರೆಯಿಂದ ಎಚ್ಚರಿಲ್ಲದ ಸ್ಥಿತಿಯಲ್ಲಿದ್ದಾಗ ಸುಮ್ಮನೆ ಸಿಟ್ಟಗೆದ್ದು ಆ ಪಟ್ಟಣದ ಭವ್ಯ ಮಂದಿರಗಳನ್ನು ಸುಡಲಿಕ್ಕೆ ಅಪ್ಪಣೆ ಕೊಟ್ಟನಂತೆ. ಜಗತ್ತಿನ ಮಹಿಮೆಯು ಮನುಷ್ಯನ ವಿಚಾರಕ್ಕೆ ಮೀರಿದ್ದು ! ಎಂಥವನಾದರೂ ಈ ಲೀಲೆಗನುಸರಿಸಿ ನಡೆಯುವನೇ ಹೊರತು ಯುಕ್ತಾಯುಕ್ತ ವಿಚಾರ ಮಾಡುವದಿಲ್ಲ. ಒಂದು ವ್ಯಕ್ತಿಯು ಶ್ರಮಪಟ್ಟು ಅಲ್ಲಿಯ ನಿವಾಸಿಗಳಿಂದಲೇ ಕಟ್ಟಿಡ ಕಟ್ಟಿಸಿದ್ದರೆ ನುತ್ತೊಬ್ಬನು ಸಿಟ್ಟಗೆದ್ದು ಅಲ್ಲಿಯ ನಿವಾಸಿಗಳಿಂದಲೇ ಅದನ್ನು ಹಾಳುಮಾಡಿಸುವನು. ಅಲೆಕ್ಸಂದರನು ಎಷ್ಟೋ ಸತ್ಕೃತ್ಯಗಳನ್ನು ಮಾಡಿದರೂ ಇರಾಣ ದೇಶದಲ್ಲಿ ಆತನು ಮಾಡಿದ ಅನಸ್ವಿತ ಕೃತ್ಯಗಳು ಆತನ ಕೀರ್ತಿಗೆ ದೃಷ್ಟಿತಾಗಬಾರದೆಂದು ಕಪ್ಪಾಗಿ ಈಗಲೂ ಉಳಿದಿವೆ. ಇರಾಣೀ ಸ್ತ್ರೀಯರ ಸುಂದರಿಯರೆಂದು ಇತಿಹಾಸ ಪ್ರಸಿದ್ಧಿಯುಂಟು. ತನ್ನ ಶಿಪಾಯಿಗಳಿಗೆ ಬಲಾತ್ಕಾರದಿಂದ ಅಲ್ಲಿಯ ಸ್ತ್ರೀಯರನ್ನು ಲಗ್ನ ಮಾಡಿದನು. ಈ ಕಲಂಕದ ಪರಿಮಾರ್ಜನಕ್ಕಾಗಿ ಎಷ್ಟೋ ಇತಿಹಾಸಕಾರರು ಗ್ರೀಸ, ಇರಾಣ ದೇಶಗಳ ಸಂಯುಕ್ತ ಸಂತತಿಯಿಂದ ಮುಂದೆ ಒಂದೇ ರಾಷ್ಟ್ರವನ್ನುಂಟುಮಾಡಬೇಕೆಂದು ಹವಣಿಸಿ ಈ ಪ್ರಕಾರ ಮಾಡಿದನೆಂದು ಬಣ್ಣಿಸಿದರಂತೆ. ಅದು ಹೇಗೇ ಇರಲಿ. ಪಾರ್ಶಪುರದ ವೈಭವವು ಶಿಕಂದರನಿಂದ ಮಣ್ಣು ಪಾಲಾಯಿತು. ಇದು ಮಾತ್ರ ನಿಜವು. ಕಾಲಪುರುಷನು ಅತಿಶಯ ಶಕ್ತಿವಂತನೂ ಅನಂತಭುಜನೂ ಇರುವನು. ಅವನ ರಚನೆಯು ಯಾರಿಗೂ ತಿಳಿಯದು. ಈ ಮಂದಿರಗಳ ಕೂಡ ಅಲ್ಲಿ ಸ್ಥಾಪಿತವಾದ ಧರ್ಮವೂ ಕೂಡ ಹೇಳದೆಯೇ ಕೇಳದೆಯೇ ಹೊರಟು ಹೋಗುವ ಪ್ರಸಂಗವು ಮುಂದೆ ಬಂದಿತು.

ಪರ್ಸಿಯನ್ ರಾಜವಂಶದ ೪೫ನೇ ತಲೆಯವನಾದ ಯಝುದೇರ್ಝುರ್ದ ಎಂಬ ಅರಸನು ಆಳುವಾಗ (ಇ. ಸ. ೬೫೧) ಮುಸಲ್ಮಾನೀ ಧರ್ಮದ ಖಲೀಪ ಉಮರನು ಇಲ್ಲಿಗೆ ದೌಡು ಮಾಡಿ ಪರ್ಶಿಯಾ ರಾಜನನ್ನು ಪೂರಾ ಸೋಲಿಸಿದನು. ಹಾಗು ಮುಂದೆ

ಮುಸಲ್ಮಾನರು ಪರ್ಷಿಯನ್ನರಿಗೆ ತಮ್ಮ ಧರ್ಮದ ದೀಕ್ಷೆ ಕೊಡಲಾರಂಭಿಸಿದರು. ಅವರ ಉಪಟಳದಿಂದ ಖುರಾಸಾನಾ ಪ್ರಾಂತಕ್ಕೆ ಪಾರ್ಸೀಯರು ಹೋದರು. ಅಲ್ಲಿಯೂ ಹೀಗೆಯೇ ಆಗಲು ಅವರ್ಮುಝ್ ನಡುಗಡ್ಡೆಗೂ ಬಳಿಕ ಹಿಂದುಸ್ತಾನಕ್ಕೂ ಬಂದರು ಕಟ್ಟೆಯ ಕಲ್ಲು ಕಟ್ಟೆಗೆ ಕೂತಿತೆಂಬಂತೆ ಆರ್ಯವಂಶಜರು ಆರ್ಯವಂಶಜರಿದ್ದಲ್ಲಿಗೆ ಬಂದರು. ಈಗಲೂ ಅವರು ಸುರಕ್ಷಿತೆಯಿಂದ ತಮ್ಮ ಜೀವನ ಸರ್ವಸ್ವವಾದ ಧರ್ಮವನ್ನು ಇಂಗ್ಲಿಷ ಸಾರ್ವಭೌಮರ ಕೃಪೆಯಿಂದ ಪಾಲಿಸುತ್ತಲಿರುವರು. ಇರಾಣ ದೇಶದಲ್ಲಿ ಈಗ ೪, ೫ ಸಾವಿರ ಪಾರ್ಸೀ ಧರ್ಮದವರು ಇರುವರು.

ಇಂದ್ರಪ್ರಸ್ಥ, ರೋಮ, ಬಾಬಿಲನ್ ಈ ಪಟ್ಟಣಗಳ ಅವಶೇಷಗಳ ನಿರೀಕ್ಷಣೆಯ ಭಾವನೆಯೇ ಈ ಪಾರ್ಶ್ವಪುರದ ನಿರೀಕ್ಷಣೆಯಿಂದ ಉಂಟಾಗುತ್ತದೆ.

ಇರಾಣೇ ಆಖಾತವು ವ್ಯಾಪಾರದ ಪಡಮೂಲಿಯಾಗಿದೆ. ಇಲ್ಲಿಯ ಸುಶಿಕ್ಷಿತರಿಗೂ ಕೂಡ ಇರಾಣ ದೇಶದ ವಿಷಯವಾಗಿ ಪೂರ್ಣ ಸಂಗತಿಯು ಗೊತ್ತಿರುವದಿಲ್ಲ. ಆದರೆ ಇರಾಣೇ ಆಖಾತದೊಳಗಿನ ಬಂದರಗಳಲ್ಲಿರುವ ಇರಾಣೇ ಜನರಿಗೆ ಹಿಂದುಸ್ತಾನದ ವಿಷಯವಾಗಿ ವಿಶೇಷ ಸಂಗತಿಯು ಗೊತ್ತಿರುತ್ತದೆ.

ಇರಾಣೇ ಇಖಾತದ ಬಂದರಗಳಲ್ಲಿ ಮುಸ್ಕತ ಬಂದರವು ವ್ಯಾಪಾರಕ್ಕೆ ಅನುಕೂಲವಾದದ್ದಿರುತ್ತದೆ. ಇರಾಣಿ ಆಖಾತದಲ್ಲಿ ಮುತ್ತುಗಳನ್ನು ತೆಗೆಯುವದು ಬಹು ಕಷ್ಟಮಯವಾದದ್ದು. ಇದನ್ನು ಒಬ್ಬ ಕವಿಯು ಬಹಳ ಚಮತ್ಕಾರದಿಂದ ಬಣ್ಣಿಸಿದ್ದಾನೆ. ಇರಾಣದ ತಪ್ಪಲು ಪ್ರದೇಶದಿಂದ ಸಮುದ್ರ ದಂಡೆಗೆ ಬಂದ ಕೂಡಲೆ ಹವೆಯು ಬದಲಾಗಿ ಮನಸ್ಸಿಗೆ ಆನಂದವೆನಿಸುತ್ತದೆ. ಅಲ್ಲಿ ಬೇರೆ ಬೇರೆ ದೇಶಗಳಿಂದ ಬಂದ ಬೇರೆ ಬೇರೆ ಮಾದರಿಯ ಜನರನ್ನು ಒಂದೇ ವೇಳೆಗೆ ನೋಡಿ ಕೌತುಕವೆನಿಸುತ್ತದೆ.

ಪುಸ್ತಕ ಪರಿಚಯ

೧ **ಶಿಶುಶಿಕ್ಷಣ**— ಪುಟ ೧–೪೪ **ಲೇಖಕ**— ಎಂ. ಬಿ. ವಿ. ಮಠ

ಈ ಪುಸ್ತಕವು ಬಾಲಕರ ವರ್ಗಕ್ಕೆ ಬೇಕಾದ ಓನುಬರಹ, ಕಥೆ, ಪದ್ಯ ಡ್ರಾಯಿಂಗ ಮೊದಲಾದ ವಿಷಯಗಳಿಂದ ಕೂಡಿದೆ.

ಅಕ್ಷರಗಳನ್ನು ಕಲಿತಬಳಿಕ ಅವುಗಳ ಉಪಯೋಗವಾಗುವಂತೆ ಕೆಳಗೆ ಸಣ್ಣ ವಾಕ್ಯಗಳನ್ನು ಕೊಟ್ಟಿದ್ದು ಅನುಕೂಲವಾಗಿದೆ. ಆದರೆ ಅಂಥ ವಾಕ್ಯಗಳುಳ್ಳ ಸುಲಭ ಕಥೆಗಳನ್ನು ಬಾಲಕರಿಗಾಗಿ ಕೊಟ್ಟಿದ್ದರೆ ಒಳಿತಾಗುತ್ತಿತ್ತು. ಈ ಪುಸ್ತಕದ ಕಥೆಗಳು ಹೆಚ್ಚು ಕಲಿತ ಬಾಲಕರಿಗೆ ಮಾತ್ರ ಉಪಯೋಗ ಬೀಳುವಂತೆ ಅವೆ.

ಹೊಸ ಅಭ್ಯಾಸಪತ್ರಿಕೆಯಲ್ಲಿ ಹೇಳಿದ ಪ್ರಕಾರ ಡ್ರಾಯಿಂಗ, ಮೊದಲಾದ ನೂತನ ಪದ್ಧತಿಗಳನ್ನು ಸೇರಿಸಿದರೆ ಒಳಿತಾಗುವಂತೆ ಅದೆ; ಯಾಕಂದರೆ ಯಾವ ಬಾಲ ಬೋಧಿನಿಯಲ್ಲಿಯೂ ಹೊಸ ಪದ್ಧತಿಯ ಉಲ್ಲೇಖವು ಇರುವದಿಲ್ಲ.

೨ **ಹೊಸ ಅಂಕಲಿಪಿ ಭಾಗ ೧** ಹಾಗು ಭಾಗ ೨ ಪುಟ ೧–೩೬

ಗ್ರಂಥಕರ್ತ— ವಿ. ಎಸ್. ಎಸ್. ಗುರಿಕಾರ

ಮೊದಲನೆಯ ಭಾಗದಲ್ಲಿ ಅಕ್ಷರಗಳ ಅವಯವಗಳನ್ನು ತಿಳಿಸಿ ಉಚ್ಚಾರ ಸೌಲಭ್ಯ ದಂತೆ ಅಕ್ಷರಗಳ ಗುಂಪುಗಳನ್ನು ಮಾಡಿದ್ದಾರೆ.

ಬಾಲಕರಿಗೆ ಓದಲಿಕ್ಕೆ ತಕ್ಕ ಶಬ್ದಗಳೂ ಪಾಠಗಳೂ ತಕ್ಕ ಚಿತ್ರಗಳೂ ಇರುವದ ರಿಂದ ಓದುಬರಹಗಳನ್ನು ಸುಲಭವಾಗಿ ಬೇಗನೆ ಕಲಿಸಲಿಕ್ಕೆ ಅನುಕೂಲವಾಗುವಂತೆ ಅದೆ.

ಕಥೆಗಳು ಬಾಲಕರಿಗೆ ತಕ್ಕಂತೆ ಅವೆ. ಅದರಿಂದ ಓದುವ ರೂಢಿಗೆ ಹೆಚ್ಚು ಅನು ಕೂಲವಾಗಿದೆ.

ಭಾಗ ೨ ಹಿಂದೆ ಕಲಿತ ಅಕ್ಷರಗಳ ಉಪಯೋಗವನ್ನು ಕ್ರಮದಿಂದ ಮಾಡಿಕೊಂಡು ಬಳಿಕೆಯ ಶಬ್ದಗಳಿಂದ ವಾಕ್ಯಗಳನ್ನೂ ಕಥೆಗಳನ್ನೂ ಬರೆದಿರುವದರಿಂದ ಕಲಿಯುವ ಹುಡುಗರಿಗೆ ಜಡವಾಗುವಂತೆ ಇಲ್ಲ. ಅಪರಿಚಿತ ಶಬ್ದಗಳೂ ಅಚ್ಚಿನ ದೋಷಗಳೂ ಇರುವವು.

೩ **ಮುಮುತಾಜ ಮಾಸಪತ್ರಿಕೆ**— ಪುಟ ೧–೨೮

ಈ ಕನ್ನಡ ಪತ್ರಿಕೆಯ ಭಾಷೆಯು ಸುಲಭವಾಗಿದೆ. ನವ್ಹಂಬರದ ಮಾಸಪತ್ರಿಕೆ ಯಲ್ಲಿಯ ಸತ್ಯದ ಫಲವೆಂಬ ಲೇಖವು ಚೆನ್ನಾಗಿದೆ.

ಆರೋಗ್ಯವಿಚಾರ, ವ್ಯವಹಾರೋಪಯುಕ್ತವಾದ ಜ್ಞಾಪಕಸಂಗತಿಗಳು ಈ ಪತ್ರಿಕೆ ಯಲ್ಲಿ ಅಡಕವಾಗಿವೆ. ಜ್ಞಾನಿಗಳ ಸುಜ್ಞಾನಕೋಶವೆಂಬ ಭಾಗವೂ ನೆಟ್ಟಗಿದೆ.

ಈ ಪತ್ರಿಕೆಯು ಚಿರಕಾಲ ಬಾಳಿ ಧಾರ್ಮಿಕ, ಸಾಮಾಜಿಕ ನೈತಿಕ ವಿಷಯ ಗಳನ್ನು ಬೋಧಿಸಲೆಂದು ಆಶಿಸುವೆವು.

೪ **ವೀರಮುಸ್ಲೀಂ**— ಮಾಸಪತ್ರಿಕೆಗಳ ವಾಚನದಿಂದ ಜನತೆಯಲ್ಲಿ ಜ್ಞಾನಪ್ರಸಾರವ ಭರದಿಂದ ನಡೆಯುತ್ತದೆ. ಕರ್ನಾಟಕ ಭಾಷೆಯ ಮೂಲಕ ಜ್ಞಾನಪ್ರಸಾರ ಕಾರ್ಯ ವನ್ನು ಈ ಪತ್ರಿಕೆಗಳು ಕೈಕೊಂಡಿರುವದರಿಂದ ವಾಚನಾಭಿರುಚಿಯು ಬೆಳೆದು ಶಿಕ್ಷಿತರ ಸಂಖ್ಯೆಯು ಬೆಳೆಯುವದು.

ಈ ಪತ್ರಿಕೆಯಲ್ಲಿ ಕುರಾಣದೊಳಗಿನ ಸಂಗತಿಗಳೂ ಐತಿಹಾಸಿಕ ಸಂಗತಿಗಳೂ

ಈ ಪತ್ರಿಕೆಯೂ ಇದೇ ಪ್ರಕಾರ ತನ್ನ ಕಾರ್ಯವನ್ನು ಎಡೆಬಿಡದೆ ನಡೆಯಿಸಲೆಂದು ಆಶಿಸುವೆವು.

ಶ್ರೀ ಚೈತನ್ಯ— ೧-೩೨ ಸಂಪಾದಕ— ಶಕ್ಕರಿ ಶಂಕರರಾಯರು ಬಿ. ಎ. ಇಳಕಲ್ಲು

ದಿಶಂಬರ ತಿಂಗಳ ಮಾಸಪತ್ರಿಕೆಯಲ್ಲಿ ಪದ್ಯರೂಪದಿಂದ ಜೀವನದ ಚೈತನ್ಯವು ಬಣ್ಣಿಸಲ್ಪಟ್ಟಿದೆ. ವಿರಕ್ತ ಸಂಸಾರಿಯೆಂಬ ಭಾಗದಿಂದ ಸಾಂಸಾರಿಕ ತರುಣರು ಬೋಧ ತೆಗೆದುಕೊಳ್ಳುವಂತೆ ಅದೆ.

ಈ ಪುಸ್ತಕದ ಭಾಷೆಯು ಸುಲಭವಾಗಿಯೂ ಲಲಿತವಾಗಿಯೂ ಇರುವದರಿಂದ ವಿದ್ಯಾರ್ಥಿಗಳು ಸಹ ಇದರ ಉಪಯೋಗವನ್ನು ಮಾಡಿಕೊಳ್ಳಬಹುದು.

—ಸಾ.

ಪ್ರಕಟನೆಗಳು

ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆ

ದಕ್ಷಿಣ ಭಾಗ

೧೯೩೨ನೆಯ ಇಸ್ವಿಯಲ್ಲಿ ಆಗತಕ್ಕ ಹೆಣ್ಣುಮಕ್ಕಳ ವ್ಹ. ಫಾ. ಪರೀಕ್ಷೆಗೆ ಕೆಳಗೆ ಬರೆದಂತೆ ವಿಷಯಗಳು ಇಡಲ್ಪಟ್ಟಿವೆ.

ಕನ್ನಡ

ಗದ್ಯ— ಕ್ರಮಿಕ ೬ನೆಯ ಪುಸ್ತಕ(೧೯೨೯ರಲ್ಲಿ ಅಚ್ಚಾದದ್ದು)ದಲ್ಲಿಯ ಪಾಠಗಳು; ೧, ೨, ೬, ೮, ೧೧, ೧೨, ೧೩, ೧೪, ೧೬, ೧೯, ೨೦, ೨೨, ೨೪, ೨೫, ೨೬, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೮, ೪೧, ೪೩, ೪೪, ೪೫, ೪೬, ೪೭, ೪೮, ೪೯, ೫೨, ೫೪

ಇತಿಹಾಸ ಪಾಠಗಳು— ಮೊದಲಿನ ೫ ಪಾಠಗಳು

ಭೂಗೋಲ ಪಾಠಗಳು— ಮೊದಲಿನ ೫ ಪಾಠಗಳು

ಕವಿತೆ— ಕ್ರಮಿಕ ೬ನೆಯ ಪುಸ್ತಕ(೧೯೨೯ರಲ್ಲಿ ಅಚ್ಚಾದದ್ದು)ದ ಪಾಠಗಳು ಯಾವವೆಂದರೆ ೨೧, ೩೪, ೩೮, ೪೩, ೪೭, ೫೦

ಮರಾಠಿ

ಗದ್ಯ— ೬ನೇ ಪುಸ್ತಕ(೧೦ನೆ ಆವೃತ್ತಿ ೧೯೨೯ರಲ್ಲಿ ಅಚ್ಚಾದದ್ದು)ದ ೧, ೨, ೩, ೬, ೮, ೧೨, ೧೩, ೧೪, ೧೫, ೧೯, ೨೦, ೨೫, ೨೭, ೨೯, ೩೦, ೩೩,೩೫, ೩೯, ೪೧, ೪೩, ೪೪, ೪೫, ೪೮, ೪೯, ೫೦, ೫೧, ೫೩, ೫೫, ೫೬, ೫೮, ೫೯, ೬೦, ೬೧, ೬೩, ೬೮, ೬೯, ೭೦, ೭೧ ನೆಯ ಪಾಠಗಳು.

ಪದ್ಯ— ಕ್ರಮಿಕ ೬ನೆ ಬುಕ್ಕು (೧೦ನೆ ಆವೃತ್ತಿ)೧೯೨೯ರಲ್ಲಿ ಅಚ್ಚಾದದ್ದು. ಇದರಲ್ಲಿಯ ೧೬, ೨೧, ೨೮, ೩೮, ೪೩, ೪೭ನೆಯ ಪಾಠಗಳು.

ಉರ್ದು

ಗದ್ಯ— ಉರ್ದು ಕ್ರಮಿಕ ೬ನೆಯ ಬುಕ್ಕು, (೩ನೆಯ ಆವೃತ್ತಿ,೧೯೩೦ ರಲ್ಲಿ ಅಚ್ಚಾದದ್ದು) ೧, ೨, ೩, ೪, ೬, ೭, ೮, ೯, ೧೨, ೧೬, ೧೭, ೧೯, ೨೩, ೨೪, ೨೭, ೨೯, ೩೧, ೩೨, ೩೪, ೩೫, ೩೪, ೩೬, ೩೯, ೪೧, ೪೨, ೪೪, (೨೪ ಪಾಠಗಳು)

ಪದ್ಯ— ಕ್ರಮಿಕ ೬ನೆಯ ಪುಸ್ತಕ (೧೯೩೦ರಲ್ಲಿ ಅಚ್ಚಾದ ೩ನೆಯ ಆವೃತ್ತಿ) ದಲ್ಲಿಯ ೫, ೧೦, ೧೫, ೨೦, ೨೫, ೩೦ ಈ ಪಾಠಗಳು.

ಕೆ. ಎಸ್. ವಕೀಲ
ಎ. ಇ. ದ. ಭಾ.

ಪ್ರಕಟನೆ

ಪ್ರಾಥಮಿಕ ಶಾಲೆಗಳ ಹಿಂದುಳಿದ ಜಾತಿಯ ಸ್ಕಾಲರಶಿಪ್ಪುಗಳು

ಸ್ಕಾಲರಶಿಪ್ಪಿನ ಬೆಲೆ ಹಾಗು ಅವಧಿ

ಸ್ಕಾಲರಶಿಪ್ಪಿನ ಕರಾರುಗಳು

ನಂ. ೨ ನಂ. ೭ (ಅ) ನಿಯಮಗಳು:—

ಈ ಸ್ಕಾಲರಶಿಪ್ಪುಗಳು ಸರಕಾರದಿಂದ ಮಾನ್ಯವಾದ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿರುವವು. ಇವು ಗಂಡು ಹುಡುಗರಿಗೆ ೫ನೆಯ ಇಯತ್ತೆಯಿಂದಲೂ ಹೆಣ್ಣುಮಕ್ಕಳಿಗೆ ೪ನೆಯ ಇಯತ್ತೆಯಿಂದಲೂ ಆರಂಭವಾಗುವವು. ಅವರು ವರ್ಷಾರಂಭಕ್ಕೆ (೧) ಸರಕಾರದಿಂದ ಮಾನ್ಯವಾದ ಶಾಲೆಗೆ ದಾಖಲಾಗತಕ್ಕದ್ದು. (೨)

ನೆಯ ಜುಲೈ ತಿಂಗಳ ಒಳಗಾಗಿ ಅಂಥ ಶಾಲೆಗಳಿಗೆ ಹೋಗದಿದ್ದರೆ ಅಂಥ ವಿದ್ಯಾರ್ಥಿಗಳು ಸ್ಕಾಲರಶಿಪ್ಪುಗಳನ್ನು ಕಳೆದುಕೊಳ್ಳುವರು.

ಈ ಸ್ಕಾಲರಶಿಪ್ಪುಗಳು ೩ ವರ್ಷಗಳ ವರೆಗೆ ನಡೆಯುವವು.

ಸ್ಕಾಲರ ಶಿಪ್ಪಿನ ರಕಮು

ಗಂಡು ಹುಡುಗರ ಶಾಲೆಯ ವಿದ್ಯಾರ್ಥಿಗಳಿಗಾಗಿ	ಹೆಣ್ಣುಮಕ್ಕಳ ಶಾಲೆಯ ವಿದ್ಯಾರ್ಥಿನಿಯರಿಗಾಗಿ	ಪ್ರತಿ ತಿಂಗಳಿಗೆ ಕೊಡತಕ್ಕ ಸ್ಕಾ. ಶಿ. ರಕಮು
೫ನೆಯ ಇಯತ್ತೆ ...	೪ನೆಯ ಇಯತ್ತೆ	೩ ರೂ.
೬ನೆಯ ಇಯತ್ತೆ ...	೫ನೆಯ ಇಯತ್ತೆ	೪ ,,
೭ನೆಯ ಇಯತ್ತೆ ...	೬ನೆಯ ಇಯತ್ತೆ	೫ ,,

ಸರಕಾರದ ವಿದ್ಯಾಖಾತೆಯವರು ೯ನೇ ದಿಶಂಬರ ೧೯೩೦ ನೆಯ ಇಸವಿಯ ೨೪೬೬ನೆ ನಂಬರಿನ ಠರಾವಿನಲ್ಲಿ ಪ್ರಸಿದ್ಧಿಸಿದ್ದಾರೆ. (ಪ್ರಾ. ಶಿ.ದ ೧೯೩೦ನೆಯ ಇಸ್ವಿಯ ಎಪ್ರಿಲ ಮೇ ತಿಂಗಳ ಅಂಕದಲ್ಲಿಯೂ ಪ್ರಕಟಿಸಿದೆ)

೧೯೩೧ ನೆಯ ಇಸವಿಯಲ್ಲಿ ಆಗುವ ಗಂಡು ಮಕ್ಕಳ ವ್ಹ. ಫಾಯನಲ್ ಪರೀಕ್ಷೆಯು

ಈ ಪರೀಕ್ಷೆಯು ೧೯೩೧ ನೆಯ ಇಸವಿ ಎಪ್ರಿಲ ತಿಂಗಳ ೭ನೇ ತಾರೀಖಿನ ದಿವಸ ಆಯಾ ಜಿಲ್ಲೆಗಳ ಗವ್ಹರ್ನಮೆಂಟ ಹಾಯಸ್ಕೂಲುಗಳಲ್ಲಿ ಪ್ರಾರಂಭವಾಗಿ ತದುತ್ತರದ ದಿವಸಗಳಲ್ಲಿ ನಡೆಯುವದು.

ಆಯಾ ಹಾಯಸ್ಕೂಲುಗಳ ಹೆ. ಮಾ. ರರು ಈ ಪರೀಕ್ಷೆಯ ಪ್ರೆಸಿಡೆಂಟರಿರುವರು. ಅವರ ಕಡೆಗೆ ಪ್ರತಿಯೊಬ್ಬ ಶುಮೇದವಾರನು ತನ್ನ ಅರ್ಜಿಯನ್ನು ೩ ರೂ. ಫೀ. ಸಹಿತವಾಗಿ ೧೫-೩-೧೯೩೧ ನೇ ದಿವಸದ ಒಳಗಾಗಿ ಮುಟ್ಟುವಂತೆ ಕಳಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

ಹೆಣ್ಣುಮಕ್ಕಳ ವ್ಹ. ಫಾಯನಲ್ ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆಯು

ಸ್ಟ್ಯಾಥಮಿಕ್ ಪಿಕ್ಚರ್

ವಾರ	ತಾರೀಖು	ಸ್ಟ್ಯಾಂಡರ್ಡ್ ಟಾಯಿಮು ಇಂದ	ವರೆಗೆ	ವಿಷಯು	ಕಾ
ಮಂಗಳ	೧೦–೩–೩೦	೧೦–೧೦–೩೦		ವಿದ್ಯಾರ್ಥಿನಿಯರ ಹೆಸರು ಹಚ್ಚಿಕೊಳ್ಳುವದು	
,,	,,	೧೧–೨		ಮೊದಲನೆಯ ಸದರ (ಬ) ಹಾಗು (ಕ) ಭಾಷಾವಿಷಯು	(ಬ) ೪೫ (ಕ) ೩೦
,,	,,	೩– ೫		ಎರಡನೆ ಸದರ (ಅ) ಹಾಗು (ಬ) ನಿಬಂಧ, ಕೈಬರಹ ಶುದ್ಧಬರಹ	(ಅ) ೬೦ ಹಾಗು (ಬ)೧೫
ಬುಧ	೧೧–೩–೩೧	೧೧–೧		ಐದನೆಯ ಸದರ ಇತಿಹಾಸ	೭೫
,,	,,	೨– ೪		೬ನೆ ಸದರ ಆರೋಗ್ಯಶಾಸ್ತ್ರ (ಹಾಯ್ಜಿನ್)	೭೫
ಗುರು	೧೨–೩–೩೧	೧೧–೨		೩ನೆ ಸದರ (ಅ) ಮತ್ತು (ಬ) ಗಣಿತ ಹಾಗು ಮನೆ ಜಮಾಖರ್ಚು	(ಅ) ೪೦ (ಬ) ೨೦
,,	,,	೩-- ೫		೪ನೆ ಸದರ ,, ಭೂಗೋಲ	೭೫
ಶುಕ್ರ	೧೩–೩–೩೧	೨–೩೦–೫–೩೦		೭ನೆ ಸದರ ಕಸೂತಿ	೧೦೦
ಶನಿ	೧೪–೩–೩೧	೧೧– ೧		೮ನೆ ಸದರ ಐಚ್ಛಿಕ ವಿಷಯ (ಡ್ರಾಯಿಂಗ, ಪ್ರಕೃತಿ ವಿಮರ್ಶೆ ಅಥವಾ ಗಾಯನ;	೭೫

ಸೂ—ಬಾಯಿ ಪರೀಕ್ಷೆಯನ್ನು ಮೊದಲನೆಯ ಸದರಿನ (ಅ) ಹಾಗು (ಬ) ಪರೀಕ್ಷೆಗಳು ನಡೆದಾಗ ತೆಗೆದುಕೊಳ್ಳಲಾಗುವದು. ಉನ್ನೀದವಾರರು ಒಂದು ಐಚ್ಛಿಕ ವಿಷಯುವನ್ನು ತೆಗೆದುಕೊಳ್ಳಲೇಬೇಕು.

ಮುದ್ರಕರು ಖಂ. ರಾ. ಭಿಸೆ, ಕ. ಪ್ರಿಂ. ವರ್ಕ್ಸ್, ಧಾರವಾಡ. ೯೪೬೯,೩೦,೪೦೦

ಹೊಸ ಪುಸ್ತಕಗಳು

೨ನೆಯ ಭಾಗ — ಸುಡಿಗನ್ನಡಿ

ಲೇ—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತರಗತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೨ನೆಯ ಇಯತ್ತೆಗೆ ತಕ್ಕ ವ್ಯಾಕರಣ ಪುಸ್ತಕವು ಇಲ್ಲದ್ದರಿಂದ ೬।೭ ಇಯತ್ತೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕ ಬಳಸಿ ಆರಂಭದ ಕೆಲವು ಪುಟಗಳನ್ನು ಮಾತ್ರ ಆ ಇಯತ್ತೆಗೆ ಕಲಿಸುವ ವಾಡಿಕೆಯಿತ್ತು. ಆದರೆ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ಪರಿಹಾರಮಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲಮಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯಲ್ಪಟ್ಟಿದೆ. ೨ನೆಯ ಇಯತ್ತೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ೪ನೆಯ ಇಯತ್ತೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತೆಗೂ ಉಪಯುಕ್ತವಾಗಿರುವದು. ಆದದರಿಂದ ೪।೫ ಇಯತ್ತೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಏಕಾಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥ ಕರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ — (೨ನೆಯ ಇಯತ್ತೆಗೆ) ಲೇ—ಎಸ್. ಆರ್. ತಟ್ಟಿ ಬಿ. ಎ. ಮತ್ತು ಜೋಶಿ

— ಜೋಶಿ ಬ್ರದರ್ಸ ಬುಕ್‌ಡಿಪೋಲೈನಬಜಾರ, ಧಾರವಾಡ.

ಜಾರಿಂ೦ರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ :—ಕೆಳಗೆ ಬರೆದ ಪತ್ತೆಯ ಮೇಲೆ ಕೆಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ಪ್ರೆಸ್ಸ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಮಾಲೆ, ಋತುಗಳು, ಚಂದ್ರನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು, ವಿಲೋಪ ನಕಾಶಗಳು, ನೋಡಿಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ರೇಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ್ ಪದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತೆಗೆ ಬಾಲ ಬೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ :—

Kashibhai C. Patel
ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)
Sikshan Sahitya Karyalaya Dehgam (Ahamedabad)

ಹೆಣ್ಣುಮಕ್ಕಳ ವ್ಹ. ಫಾಯನಲ್ ಪರೀಕ್ಷೆಯ (ಕನ್ನಡ, ಮರಾಠಿ, ಉರ್ದು) ವೇಳಾಪತ್ರಿಕೆಯು

ವಾರ	ತಾರೀಖು	ಸ್ಟ್ಯಾಂಡರ್ಡ ಟಾಯಿಮು ಇಂದ	ವರೆಗೆ	ವಿಷಯ	ಶಂ
ಮಂಗಳ	೧೦–೩–೩೦	೧೦–೧೦–೩೦		ವಿದ್ಯಾರ್ಥಿನಿಯರ ಹೆಸರು ಹಚ್ಚಿಕೊಳ್ಳುವದು	
,,	,,	೧೧–೨		ಮೊದಲನೆಯ ಸದರ (ಬ) ಹಾಗು (ಕ) ಭಾಷಾವಿಷಯ	(ಬ) ೪ಂ (ಕ) ೩೦
,,	,,	೩– ೫		ಎರಡನೆ ಸದರ (ಅ) ಹಾಗು (ಬ) ನಿಬಂಧ, ಕೈಬರಹ ಶುದ್ಧಬರಹ	(ಅ) ೬೦ ಹಾಗು (ಬ) ೧೫
ಬುಧ	೧೧–೩–೩೧	೧೧–೧		ಐದನೆಯ ಸದರ ಇತಿಹಾಸ	೭೫
,,	,,	೨– ೪		೬ನೆ ಸದರ ಆರೋಗ್ಯಶಾಸ್ತ್ರ (ಹಾಯ್‌ಜಿನ್)	೭೫
ಗುರು	೧೨–೩–೩೧	೧೧–೨		೩ನೆ ಸದರ (ಅ) ಮತ್ತು (ಬ) ಗಣಿತ ಹಾಗು ಮನೆ ಜಮಾಖರ್ಚು	(ಅ) ೪೦ (ಬ) ೨೦
,,	,,	೩-- ೫		೪ನೆ ಸದರ ,, ಭೂಗೋಲ	೭೫
ಶುಕ್ರ	೧೩–೩–೩೧	೨–೩೦–೫–೩೦		೭ನೆ ಸದರ ಕಸೂತಿ	೧೦೦
ಶನಿ	೧೪–೩–೩೧	೧೧-- ೧		೪ನೆ ಸದರ ಐಚ್ಛಿಕ ವಿಷಯ (ಡ್ರಾಯಿಂಗ, ಪ್ರಕೃತಿ ವಿಜ್ಞಾನ ಅಥವಾ ಗಾಯನ;	೭೫

ಸೂ—ಬಾವಿ ಪರೀಕ್ಷೆಯನ್ನು ಮೊದಲನೆಯ ಸದರಿನ (ಅ) ಹಾಗು (ಬ) ಪರೀಕ್ಷೆಗಳು ನಡೆದಾಗ ತೆಗೆದುಕೊಳ್ಳಲಾಗುವದು. ಉಮೇದವಾರರು ಒಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇಬೇಕು.

ಪ್ರಾಥಮಿಕ ಶಿಕ್ಷಣ

ಮುದ್ರಕರು ಖಂ. ರಾ. ಭಿಸೆ, ಕ. ಪ್ರಿಂ. ವರ್ಕ್ಸ, ಧಾರವಾಡ. ೯೬೬,೫೦,೪೦೦

ಹೊಸ ಪುಸ್ತಕಗಳು

೨ನೆಯ ಭಾಗ — ನುಡಿಗನ್ನಡಿ

ಲೇ—ಎಂ. ಪಿ. ಪೂಜಾರ, ಕನ್ನಡ ಪಂಡಿತ ಟ್ರೇ. ಸ್ಕೂ. ಧಾರವಾಡ

ಪ್ರಾಥಮಿಕ ಶಾಲೆಗಳ ೪।೫ ತರಗತಿಗಳಿಗಾಗಿಯೂ ಇಂಗ್ಲಿಶ್ ಶಾಲೆಗಳ ಕೆಳಗಿನ ತಿಗಳಿಗಾಗಿಯೂ ರಚಿತವಾದದ್ದು. ಈ ವರೆಗೆ ಕನ್ನಡ ೫ನೆಯ ಇಯತ್ತ್ರೆಗೆ ತಕ್ಕ ಕರಣ ಪುಸ್ತಕವು ಇಲ್ಲದ್ದರಿಂದ ೬।೭ ಇಯತ್ತ್ರೆಗಳಿಗೆ ಕಲಿಸುವ ವ್ಯಾಕರಣ ಪುಸ್ತಕ ಆರಂಭದ ಕೆಲವು ಪುಟಗಳನ್ನು ಮಾತ್ರ ೫ ಇಯತ್ತ್ರೆಗೆ ಕಲಿಸುವ ವಾಡಿಕೆಯಿತ್ತು. ತಿ ಹಾಗೆ ಕಲಿಸುವದು ಅಭ್ಯಾಸಪತ್ರಿಕೆಯನ್ನನುಸರಿಸುವದಿಲ್ಲ. ಈ ಕೊರತೆಯನ್ನು ೀಗಲಾಡಿಸುವದಕ್ಕಾಗಿ ಏಕಕೇಂದ್ರಕ್ರಮದಿಂದ ವ್ಯಾಕರಣದ ಎಲ್ಲ ವಿಷಯಗಳನ್ನು ಸ್ಥೂಲವಾನದಿಂದ ಕಲಿಸುವದಕ್ಕೆ ಅನುಕೂಲವಾಗಬೇಕೆಂದು ಈ ಪುಸ್ತಕವು ಬರೆಯ ಟ್ಟಿದೆ. ೫ನೆಯ ಇಯತ್ತ್ರೆಗೆ ಕಲಿಸುವ ವಿಷಯಗಳಲ್ಲಿಯೇ ಮುಖ್ಯವಾದವುಗಳನ್ನು ನೆಯ ಇಯತ್ತ್ರೆಗೆ ಕಲಿಸುವದಿರುವದರಿಂದ ಈ ಪುಸ್ತಕವು ೪ನೆಯ ಇಯತ್ತ್ರೆಗೂ ಉಪ ಯುಕ್ತವಾಗಿರುವದು. ಆದದರಿಂದ ೪।೫ ಇಯತ್ತ್ರೆಗಳ ವಿದ್ಯಾರ್ಥಿಗಳೂ, ಶಿಕ್ಷಕರೂ ತದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ಕೋರುವೆವು. ಬೆಲೆ ಹಳ ಕಡಿಮೆ (೪ ಆಣೆ ಮಾತ್ರ) ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿಯೂ, ಗ್ರಂಥ ರ್ತರಲ್ಲಿಯೂ, ನಮ್ಮಲ್ಲಿಯೂ ದೊರೆಯುವವು.

ಗಣಿತಾದರ್ಶ— (೫ನೆಯ ಇಯತ್ತ್ರೆಗೆ) ಲೇ—ಎಸ್. ಆರ್. ಶಟ್ಟಿ ಬಿ. ಎ. ಮತ್ತು ಜೋಶಿ

— ಜೋಶಿ ಬ್ರದರ್ಸ ಬುಕ್‌ಡಿಪೋಲೈನಬಜಾರ, ಧಾರವಾಡ.

ಜಾಹೀರಾತು

ಎಲ್ಲ ಶಿಕ್ಷಕರಿಗೂ ತಿಳಿಸುವದೇನಂದರೆ :—ಕೆಳಗೆ ಬರೆದ ಪತ್ತ್ರೆಯ ಮೇಲೆ ಳಗೆ ವಿವರಿಸಿದ ಉಪಯೋಗಕಾರಕವಾದ ಶಿಕ್ಷಣದ ಉಪಕರಣಗಳು ದೊರೆಯುತ್ತವೆ.

ಶಾಸ್ತ್ರೀಯ ವಿಷಯದ ಸಾಮಾನುಗಳು, ನೀರು ಜಗ್ಗುವ ನಳಿಕೆಗಳು, ಬ್ರಹ್ಮಾ ಸ್ತ್ರ, ತೂಕದ ಆರ್ಕಿಮಿಡಿಸನ್ ಮಾದರಿಯ ತಕ್ಕಡಿಗಳು, ಕಾರಂಜಿಗಳು, ಸೂರ್ಯ ಮಾಲೆ, ಋತುಗಳು, ಚಂದ್ರನಕಲೆಗಳು ಇವುಗಳನ್ನು ತೋರಿಸುವ ಉಪಕರಣಗಳು, ೀಫ ನಕಾಶಗಳು, ಗೋಡೆಗೆ ಹಾಕುವ ನಕಾಶಗಳು, ತೊಗಲಿನ ಬೋರ್ಡುಗಳು, ಶಿಮೆ ಉಣ್ಣೆಯ ಬೋರ್ಡುಗಳು ಸಹ ಮಾಂಟಿಸೋರಿ ಹಾಗು ಕಿಂಡರಗಾರ್ಟನ್ ದ್ಧತಿಯ ಉಪಕರಣಗಳು ದೊರೆಯುವವು. ಬೇಕಾದವರು ಕೆಳಗಿನ ಪತ್ತ್ರೆಗೆ ಬಾಲ ೋಧ ಇಲ್ಲವೆ ಇಂಗ್ಲಿಷ ಲಿಪಿಯಿಂದ ಬರೆದು ಕ್ಯಾಟಲಾಗ ತರಿಸಿಕೊಳ್ಳಬೇಕು.

ಸಾಮಾನು ದೊರೆಯುವ ವಿಳಾಸ :—

Kashibhai C. Patel
ಕಾಶೀಭಾಯಿ ಸಿ. ಪಟೇಲ

ಶಿಕ್ಷಣ ಸಾಹಿತ್ಯ ಕಾರ್ಯಾಲಯ ದೇಹಗಾಂವ (ಅಹಮ್ಮದಾಬಾದ)
Sikshan Sahitya Karyalaya Dehgam (Ahamedabad)

೧೯೩೧ನೆ. ಇ. ಯು ವ್ಹ. ಘಾ. ಪ. ಯು ವೇಳಾಪತ್ರಿಕೆಯು

ಮಂಗಳವಾರ	೭–೪–೧೯೩೧	೧೧ರಿಂದ—	೧೨	ಕನ್ನಡ ಉರ್ದು ಅಗ್ರಿ	ಉಮೇದವಾರರ ಹೆಸರು ಹಚ್ಚಿಕೊಳ್ಳುವದು
				ಕ	
		೧೨ ರಿಂದ—	೨	ಉರ್ದು ಅಗ್ರಿ	ನಿಬಂಧ, ರಿಪೋರ್ಟ, ಕ್ವೆಬರಹ
		೩ ರಿಂದ—	೪	ಕನ್ನಡ	
		,,	,,	ಉರ್ದು	ಆರೋಗ್ಯವಿಜ್ಞಾನ, ಶಾಸ್ತ್ರೀಯವಿಷಯ
		೩ ,, —	೫	ಅಗ್ರಿ	,, ,,
ಬುಧವಾರ	೮–೪–೧೯೩೧	೧೧ ರಿಂದ—	೨	ಕ	ಗಣಿತ
				ಉ	,,
				ಅಗ್ರಿ	ಗಣಿತ, ಕ್ಷೇತ್ರಫಲ, ಜಮಾಖರ್ಚು
		೩ ರಿಂದ—	೪	ಕ	
				ಉರ್ದು	ಇತಿಹಾಸ, ಭೂಗೋಲ
				ಅಗ್ರಿ	ರಾಜ್ಯದಾಡಳಿತ, ಸಹಕಾರತೆ, ಭೂಗೋಲ
ಗುರುವಾರ	೯–೪–೧೯೩೧	೧೧ರಿಂದ—	೨	ಕ	
				ಉ	ಭೂಮಿತಿ, ಜಮಾಖರ್ಚು
				ಅಗ್ರಿ	ಅಗ್ರಿಕಲ್ಚರ, ನೇಚರಸ್ಟಡಿ
		೩ ರಿಂದ—	೪	ಕ	ಭಾಷಾವಿಷಯ
				ಉ	ವ್ಹರ್ನಾಕ್ಯೂಲರ, ಉರ್ದು
				ಕ	ಭಾಷಾವಿಷಯ

ಕನ್ನಡ

ಪ್ರಾಥಮಿಕ ಶಿಕ್ಷಣ

ಗಣಿತ ಸಂಚಿಕೆ

ಸಂಪಾದಕರು — **ಹನುಮಂತ ಗೋವಿಂದರಾವ ದೇಶಪಾಂಡೆ,** ಬಿ. ಎ.,

ಸಂಪುಟ ೬೭–೬೮ | ಮಾರ್ಚ–ಏಪ್ರಿಲ ೧೯೩೧ | ಸಂಚಿಕೆ ೧೨–೧
ವರ್ಷ ೨೨–೨೩

ಸ್ಫುಟವಿಚಾರ

ಗಣಿತ ಶಾಸ್ತ್ರವು ಬುದ್ಧಿಶಕ್ತಿಯ ಬೆಳವಣಿಗೆಗೂ ವ್ಯವಹಾರಕ್ಕೂ ಅತ್ಯುಪಯುಕ್ತವಾದ ವಿಷಯವು. ಈ ವಿಷಯದ ಪ್ರಾರಂಭವನ್ನು ಚಿಕ್ಕ ವಯಸ್ಸಿನಲ್ಲಿ ಸುಪರಿಣಾಮವಾಗುವಂತೆ ಹೇಗೆ ಪ್ರಾರಂಭವನ್ನು ಮಾಡಬೇಕೆಂಬದು ಶಿಕ್ಷಣಶಾಸ್ತ್ರವನ್ನು ಅರಿಯದವರಿಗೆ ಕಠಿಣವಾಗಿರುವದು.

ಈ ವಿಷಯವನ್ನು ಅವ್ಯವಸ್ಥಿತ ರೀತಿಯಿಂದ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವದರಿಂದ ಅಂಕಗಣಿತವು ಬಹಳ ಕಠಿಣ ವಿಷಯವೆಂದು ಬಾಲಕರ ಸ್ವಾಭಾವಿಕ ಭಾವನೆಯಾಗುವದು. ಆದರೆ ಸುಧಾರಿಸಿದ ಹೊಸ ಪದ್ಧತಿಯಿಂದ ಕಲಿಸಿದರೆ ಈ ವಿಷಯದಲ್ಲಿ ಬೇಸರವುಂಟಾಗದೆ ಬಾಲಕರು ಲೀಲೆಯಿಂದ ಈ ವಿಷಯವನ್ನು ಕಲಿಯಲು ಉತ್ಸುಕರಾಗುವರು.

ವಿದ್ಯಾಖಾತೆಯವರು ೧೯೨೭ ನೆಯ ಇಸವಿಯಲ್ಲಿ ಪ್ರಕಟಿಸಿದ ಹೊಸ ಅಭ್ಯಾಸ ಪತ್ರಿಕೆಯು ಈ ದೃಷ್ಟಿಯಿಂದ ಬಹುಮಟ್ಟಿಗೆ ಸವಧಾನಕರವೂ ಅತ್ಯುಪಯುಕ್ತವೂ ಆಗಿರುವದು. ಈಗ ೩೪ ವರ್ಷಗಳು ಆಗಿ ಹೋಗಿದ್ದರೂ ಎಲ್ಲ ಪ್ರಾಥಮಿಕ ಶಿಕ್ಷಕರಿಗೆ ಈ ಹೊಸ ಅಭ್ಯಾಸ ಕ್ರಮದಲ್ಲಿ ಸೇರಿಸಿದ ಭೂಮಿತಿ ಕ್ಷೇತ್ರಫಲ ಮೊದಲಾದ ವಿಷಯಗಳನ್ನು ಹೇಗೆ ಕಲಿಸಬೇಕೆಂಬದು ಚೆನ್ನಾಗಿ ತಿಳಿದಂತೆ ಕಂಡುಬರುವದಿಲ್ಲ. ಅದಕ್ಕಾಗಿ ಪ್ರಾಥಮಿಕ ಶಿಕ್ಷಣದ ಈ ಸಂಚಿಕೆಯಲ್ಲಿ ಗಣಿತ ಶಾಸ್ತ್ರದ ಬೇರೆ ಬೇರೆ ವಿಷಯಗಳನ್ನು ಸುವ್ಯವಸ್ಥಿತವಾಗಿ ಹೇಗೆ ಕಲಿಸಬೇಕೆಂಬ ಬಗ್ಗೆ ತಜ್ಞರಿಂದ ಬರೆದ ಲೇಖನಗಳನ್ನು ಕೊಟ್ಟಿದ್ದೇವೆ. ಅವುಗಳನ್ನು ಶಿಕ್ಷಕರು ಮನನಮಾಡಿ ಸೂಚಿಸಿದ ಪದ್ಧತಿಗಳಂತೆ

CONTD IN
NEXT ROLL

CONTD IN
NEXT ROLL

END

END

END

END

END